www.karunaduexams.com

**ಪ್ರಚಲಿತ ವಿದ್ಯಮಾನಗಳು - ಮೇ 2017**

www.karunaduexams.com

# Contents


**ಅಂತರ್ ರಾಷ್ಟ್ರೀಯ** .................... 2

**ಪ್ರಶಸ್ತಿಗಳು** .................... 18

**ಪರಿಸರ** .................... 24

**ವ್ಯವಹಾರ** .................... 25

**ರಾಷ್ಟ್ರೀಯ** .................... 41

**ವಿಜ್ಞಾನ-ತಂತ್ರಜ್ಞಾನ** .................... 71

**ಕ್ರೀಡೆ** .................... 85

**ರಾಜ್ಯ** .................... 88

**ಇತರೆ: ಚೂರು ಪಾರು** .................... 91


**ಹೆಚ್ಚಿನ ಮಾಹಿತಿಗಾಗಿ,**


ನೀಮಗೆ ಯಾವುದೇ ಸಹಾಯದ ಅಗತ್ಯವಿದ್ದರೆ,
WhatsApp ಮತ್ತು ಸಂದೇಶವನ್ನು ಮಾಡಿ, ದಯವಿಟ್ಟು ಕರೆ ಮಾಡಬೇಡಿ

Mohan Kumar: Mobile: +91- 98805 33259 (Content related queries)

Chandrashekhar Nayak: Mobile: +91-9448880551 (Technical and Marketing related queries)

Ramakant: Mobile: +91-9972355744(Management related queries)


www.karunaduexams.com

# ಅಂತರ್ ರಾಷ್ಟ್ರೀಯ

**ಬಾಂಗ್ಲದೇಶದ ಸ್ವಾತಂತ್ರ ಹೋರಾಟಗಾರರ ಮಕ್ಕಳಿಗೆ ರೂ 35 ಕೋಟಿ ನೀಡಲಿರುವ ಭಾರತ**



ಬಾಂಗ್ಲದೇಶದ ಸ್ವಾತಂತ್ರ ಹೋರಾಟಗಾರರ ಮಕ್ಕಳಿಗೆ "ಮುಕ್ತಿಜೋಧ ವಿದ್ಯಾರ್ಥಿ ವೇತನ"ದಡಿ ರೂ 35 ಕೋಟಿಯನ್ನು ಮುಂದಿನ ಐದು ವರ್ಷಗಳ ಕಾಲ ಭಾರತ ನೀಡಲಿದೆ. ಈ ಯೋಜನೆಯಡಿ ಉನ್ನತ ಮಾಧ್ಯಮಿಕ ವಿದ್ಯಾರ್ಥಿಗಳು ರೂ 15,370 (20000 ಬಾಂಗ್ಲ ಟಕ್ಕ) ವಿದ್ಯಾರ್ಥಿ ವೇತನವನ್ನು ಹಾಗೂ ಪದವಿ ಪೂರ್ವ ವಿದ್ಯಾರ್ಥಿಗಳು ರೂ 38, 430 (50000 ಟಕ್ಕ) ವಿದ್ಯಾರ್ಥಿ ವೇತನವನ್ನು ಒಂದು ಬಾರಿಗೆ ಪಡೆಯಲಿದ್ದಾರೆ. ಇದರ ಜೊತೆಗೆ ಸ್ವಾತಂತ್ರ ಹೋರಾಟಗಾರರಿಗೆ ವಿಶೇಷ ವಿಸಾ ಸಿಗಲಿದ್ದು,ಇದನ್ನು ಬಳಸಿ ಅನೇಕ ಬಾರಿ ಭಾರತಕ್ಕೆ ಬರಬಹುದಾಗಿದೆ. ಅಷ್ಟೇ ಅಲ್ಲದೆ ಪ್ರತಿ ವರ್ಷ 100 ಸ್ವಾತಂತ್ರ ಹೋರಾಟಗಾರರಿಗೆ ಭಾರತದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಸೌಲಭ್ಯ ಸಹ ಸಿಗಲಿದೆ.

**ಹಿನ್ನಲೆ**:

- ಮುಕ್ತಜೋಧ ಯೋಜನೆಯನ್ನು 2006ರಲ್ಲಿ ಆರಂಭಿಸಲಾಗಿದ್ದು, 1971ರ ಸ್ವಾತಂತ್ರ ಹೋರಾಟಗಾರರ ಅವಲಂಭಿತರನ್ನು ಬೆಂಬಲಿಸುವುದು ಇದರ ಉದ್ದೇಶ. ಇದುವರೆಗೂ ಸುಮಾರು 10,000 ವಿದ್ಯಾರ್ಥಿ ವೇತನವನ್ನು ಯೋಜನೆಯಡಿ ವಿತರಿಸಲಾಗಿದೆ. 1971ರ ಯುದ್ದದಲ್ಲಿ ಪಾಕಿಸ್ತಾನದ ವಿರುದ್ದ ಬಾಂಗ್ಲದೇಶ ಗೆಲುವು ಸಾಧಿಸಲು ಭಾರತ ಮಹತ್ವದ ಪಾತ್ರವಹಿಸಿತ್ತು.

ಇತ್ತೀಚೆಗೆ ಬಾಂಗ್ಲದೇಶದ ಪ್ರಧಾನಿ ಶೇಖ್ ಹಸೀನಾ ಅವರು ಭಾರತಕ್ಕೆ ಭೇಟಿ ನೀಡಿದ್ದ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು "ಮುಕ್ತಿಜೋಧ ಯೋಜನೆ"ಯಡಿ ಹೆಚ್ಚುವರಿ 10,000 ಸಾವಿರ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವುದಾಗಿ ಘೋಷಿಸಿದ್ದರು. ಹಸೀನಾ ಅವರು ಭಾರತಕ್ಕೆ ಭೇಟಿ ನೀಡಿದ್ದ ವೇಳೆ ಉಭಯ ದೇಶಗಳ ನಡುವೆ ರಕ್ಷಣಾ ಕ್ಷೇತ್ರ, ಪರಮಾಣ ಸಹಕಾರ ಸೇರಿದಂತೆ 22 ಒಪ್ಪಂದಗಳಿಗೆ ಸಹಿ ಹಾಕಲಾಗಿತ್ತು.

**ಬಾಂಗ್ಲದೇಶ ಯುದ್ದ ವಿಮೋಚನೆ ಸ್ನೇಹ ಪ್ರಶಸ್ತಿ:**

ಬಾಂಗ್ಲದೇಶ ಯುದ್ದದ ವೇಳೆ ಬೆಂಬಲ ನೀಡಿದ ವ್ಯಕ್ತಿ/ಸಂಸ್ಥೆಗಳಿಗೆ ಬಾಂಗ್ಲದೇಶ ಸರ್ಕಾರ ಬಾಂಗ್ಲದೇಶ ಯುದ್ದ ವಿಮೋಚನೆ ಸ್ನೇಹ ಪ್ರಶಸ್ತಿ (ಫ್ರೆಂಡ್ಸ್ ಆಫ್ ಬಾಂಗ್ಲದೇಶ ಲಿಬರೇಷನ್ ವಾರ್ ಆವಾರ್ಡ್) ನೀಡುತ್ತಿದೆ. ಮಾಜಿ ಪ್ರಧಾನಿ ಇಂಗಿರಾ ಗಾಂಧಿ ಅವರು ಈ ಪ್ರಶಸ್ತಿಯನ್ನು ಪಡೆದ ಮೊದಲಿಗರು. ರಾಷ್ಟ್ರಪತಿ ಪ್ರಣಭ್ ಮುಖರ್ಜಿ ಹಾಗೂ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಈ ಪ್ರಶಸ್ತಿಯನ್ನು ಪಡೆದ ಇತರರು.

www.karunaduexams.com

**<u>ಮೈಕ್ರೋಸಾಫ್ಟ್ ವಿನ್ಯಾಸದ ಸ್ವಂತ ಬರಹ ಶೈಲಿ ಹೊಂದಿದ ಮೊದಲ ನಗರ</u>**




ಮೈಕ್ರೋಸಾಫ್ಟ್ ವಿನ್ಯಾಸದ ಸ್ವಂತ ಬರಹ ಶೈಲಿಯನ್ನು ಹೊಂದಿರುವ ವಿಶ್ವದ ಮೊದಲ ನಗರ ಎಂಬ ಹೆಗ್ಗಳಿಕೆಗೆ ದುಬೈ ಪಾತ್ರವಾಗಿದೆ. ಅರೇಬಿಕ್ ಮತ್ತು ಲ್ಯಾಟಿನ್ ಲಿಪಿಯನ್ನು ಈ ಬರಹ ಹೊಂದಿರಲಿದೆ. ಆಫ್ರಿಕಾನ್ಸ್, ಅರೇಬಿಕ್, ಬ್ರಿಟನಿಕ್ ಸೇರಿದಂತೆ 23 ಭಾಷೆಗಳಲ್ಲಿ ಈ ಬರಹ ಶೈಲಿ ದೊರೆಯಲಿದೆ. ದುಬೈ ದೊರೆ ಶೇಖ್ ಹಮ್ದನ್ ಬಿನ್ ಮೊಹಮ್ಮದ್ ಬಿನ್ ರಷೀದ್ ಅಲ್ ಮಕ್ತೌಮ್ ಅವರು ಈ ಬರಹ ಶೈಲಿಗೆ ಚಾಲನೆ ನೀಡಿದರು. ದುಬೈನ ಎಲ್ಲಾ ಸರ್ಕಾರಿ ಸಂಸ್ಥೆಗಳು ಹಾಗೂ ಸುಮಾರು 100ಮಿಲಿಯನ್ ಸಂಸ್ಥೆಗಳು ಈ ಬರಹ ಶೈಲಿಯನ್ನು ಬಳಸಲಿವೆ.

**ದುಬೈ ನಗರ:**

- ಯುನೈಟೆಡ್ ಅರಬ್ ಎಮಿರೆಟ್ಸ್ ನಲ್ಲಿ ಅತಿ ದೊಡ್ಡ ನಗರ ದುಬೈ.

ವಿಶ್ವ ಅತಿದೊಡ್ಡ ಕಟ್ಟಡ “ಬುರ್ಜ್ ಖಲೀಫ” ದುಬೈನಲ್ಲಿದೆ

**<u>ಕನ್ನಡ ಮತ್ತು ನೇಪಾಳಿ ಸಾಹಿತ್ಯ ನಡುವೆ ಒಪ್ಪಂದ</u>**



ಕನ್ನಡ ಮತ್ತು ನೇಪಾಳಿ ಸಾಹಿತ್ಯವನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವ ಮಹತ್ವದ ಒಪ್ಪಂದಕ್ಕೆ ಕನ್ನಡ ಸಾಹಿತ್ಯ ಪರಿಷತ್ತು ಸಹಿ ಹಾಕಿದೆ. ನೇಪಾಳದ ಕಲಾ ಡಾಟ್ ಕಾಂ ಪ್ರತಿಷ್ಠಾನದ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ನಡುವೆ ಸಹಿ ಹಾಕಲಾಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ಹಾಗೂ ನೇಪಾಳಿ ಕಲಾ ಡಾಟ್ ಕಾಂ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀಮತಿ ಮೊಮಿಲ ಜೋಶಿ ಸಮ್ಮುಖದಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಯಿತು.

- ಈ ಒಪ್ಪಂದದ ಪ್ರಕಾರ ಕನ್ನಡದ 50 ಕವಿಗಳ 50 ಕವನಗಳನ್ನು ನೇಪಾಳಿ ಭಾಷೆಗೆ ಭಾಷಾಂತರಿಸಲಾಗುವುದು. ಇದೇ ರೀತಿ ನೇಪಾಳದ 50 ಕವಿತೆಗಳನ್ನು ಕನ್ನಡಕ್ಕೆ ಭಾಷಾಂತರಿಸಬೇಕು.
- ಕನ್ನಡ ಸಾಹಿತ್ಯ ಪರಿಷತ್ತು ಇದೇ ಮೊದಲ ಬಾರಿಗೆ ಅಂತರರಾಷ್ಟ್ರೀಯ ಒಪ್ಪಂದಕ್ಕೆ ಸಹಿ ಹಾಕಿದೆ. ಎಂದು

**ಕನ್ನಡ ಸಾಹಿತ್ಯ ಪರಿಷತ್ತು:**

ಬೆಂಗಳೂರಿನ ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ 1915 ಸುಮಾರಿಗೆ ಕರ್ನಾಟಕ ಸಾಹಿತ್ಯ ಪರಿಷತ್ತು ಸ್ಥಾಪನೆಯಾಯಿತು. ಆಗ ಮೈಸೂರು ಅರಸರಾಗಿದ್ದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಪರಿಷತ್ತಿನ ಸ್ಥಾಪನೆಗೆ ಚಾಲನೆ ನೀಡಿದರು. ಮುಂದೆ 1938ರಲ್ಲಿ ಈ ಹೆಸರನ್ನು ಕನ್ನಡ ಸಾಹಿತ್ಯ ಪರಿಷತ್ತು ಎಂದು ಬದಲಾಯಿಸಿದರು.ಇದು ಕನ್ನಡ ಪುಸ್ತಕ ಪ್ರಕಟಣೆ, ಕನ್ನಡ ನಾಡು-ನುಡಿಯ ಸಂರಕ್ಷಣೆ ಮತ್ತು ಕನ್ನಡ ಭಾಷೆಗಾಗಿ ಶ್ರಮಿಸಲು ಕಟ್ಟಲಾಗಿರುವ ಸಂಸ್ಥೆ. ಈ ಸಂಸ್ಥೆ ಕರ್ನಾಟಕದಾದ್ಯಂತ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಏರ್ಪಡಿಸುತ್ತದೆ. ಕನ್ನಡ ಸಾಹಿತ್ಯವನ್ನು ನಾಡಿನ ಮೂಲೆ ಮೂಲೆಗಳಲ್ಲಿ ಹಬ್ಬಿಸಲು ಈ ಹಿಂದೆ ಸಾಧ್ಯವಾಗಿಸಿದೆ. ಈ ಸಂಸ್ಥೆಯ ಈಗಿನ ಅಧ್ಯಕ್ಷರಾಗಿ ಡಾ. ಮನು ಬಳಿಗಾರ್ ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ.

www.karunaduexams.com

## ಚೀನಾದ ಬೃಹತ್ ಜೆಟ್ ವಿಮಾನ ಹಾರಾಟ ಪ್ರಾರಂಭ



ಚೀನಾದ ಸ್ವದೇಶಿ ನಿರ್ಮಿತ C919 ಪ್ರಯಾಣಿಕರ ಜೆಟ್ ವಿಮಾನ ತನ್ನ ಮೊದಲ ಹಾರಾಟವನ್ನು ಪ್ರಾರಂಭಿಸಿದೆ. ಜಾಗತಿಕ ಏರ್ ಜೆಟ್ ಮಾರುಕಟ್ಟೆಯಲ್ಲಿ ಬೋಯಿಂಗ್ ಮತ್ತು ಏರ್ ಬಸ್ ಪ್ರಾಬಲ್ಯ ಹೊಂದಿರುವ ಪ್ರಾಬಲ್ಯವನ್ನು ಮುಂದಿನ ಎರಡು ದಶಕಗಳಲ್ಲಿ ಚೀನಾ ಪಡೆದುಕೊಳ್ಳುವ ಗುರಿ ಹೊಂದಿದ್ದು, ಜೆಟ್ ಸೇವೆಯನ್ನು ಪ್ರಾರಂಭಿಸಲಾಗಿದೆ. ಈ ಜೆಟ್ ವಿಮಾನವನ್ನು ಚೀನಾದ ಮಹತ್ವಕಾಂಕ್ಷಿ "ಮೇಡ್ ಇನ್ ಚೀನಾ 2025" ಕಾರ್ಯಕ್ರಮದಡಿ ಅಭಿವೃದ್ದಿಪಡಿಸಲಾಗಿದೆ. ಪ್ರಾಯೋಗಿಕ ಪರೀಕ್ಷಾರ್ಥ ಹಾರಾಟದಲ್ಲಿ C919 ಜೆಟ್ ವಿಮಾನ 80 ನಿಮಿಷಗಳ ಕಾಲ ಯಾಂಗ್ಟ್ಜ ನದಿಯ ಮೇಲೆ ಹಾರಾಟ ನಡೆಸಿ ಶಾಂಘೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿಯಿತು.

- ಚೀನಾದ ಸರ್ಕಾರಿ ಸಂಸ್ಥೆ "ಕಮರ್ಷಿಯಲ್ ಏರ್ ಕ್ರಾಫ್ಟ್ ಕಾರ್ಪೋರೇಶನ್ ಆಫ್ ಚೀನಾ" ಈ ಜೆಟ್ ವಿಮಾನವನ್ನು ವಿನ್ಯಾಸಗೊಳಿಸಿದೆ.
- 2008ರಲ್ಲಿ ಈ ಜೆಟ್ ವಿಮಾನ ತಯಾರಿಕೆಯ ಪರಿಕಲ್ಪನೆ ಪ್ರಾರಂಭವಾಯಿತು. 158-168 ಪ್ರಯಾಣಿಕರನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದೆ.
- ಜನರಲ್ ಎಲೆಕಕ್ಟ್ರಿಕ್, ಫ್ರಾನ್ಸ್ ಸಫ್ರಾನ್, ಹನಿವೆಲ್ ಇಂಟರ್ನ್ಯಾಷನಲ್ ಇಂಕ್ ನಂತಹ ವಿದೇಶಿ ಕಂಪನಿಗಳ ತಂತ್ರಜ್ಞಾನ ಬಳಸಿ ಅಭಿವೃದ್ದಿಪಡಿಸಲಾಗಿದೆ.

ಚೀನಾ, ಅಮೆರಿಕ ಮತ್ತು ಯುರೋಪಿನಿಂದ ಪ್ರಮಾಣೀಕರಣ ಪತ್ರ ಪಡೆಯಲು C919 ಜೆಟ್ ವಿಮಾನ ಕೆಲವು ವರ್ಷಗಳ ಕಾಲ ಪರೀಕ್ಷಾರ್ಥ ಹಾರಾಟ ನಡೆಸಬೇಕಿದೆ. ಆಗಾಗಿ ಮೊದಲ ಹಾರಾಟದಿಂದ ವಾಣಿಜ್ಯ ಬಳಕೆಗೆ ಹಲವು ವರ್ಷಗಳು ಬೇಕಾಗಲಿದೆ. ಈ ಹಿಂದೆ ಚೀನಾ ಅಭಿವೃದ್ದಿಪಡಿಸಿದ ARJ 21 ಜೆಟ್ ವಿಮಾನ ಪ್ರಾಯೋಗಿಕ ಹಾರಾಟ ನಡೆಸಿದ ಆರು ವರ್ಷಗಳ ನಂತರ ಅಧಿಕೃತ ಪ್ರಮಾಣಪತ್ರ ಪಡೆದುಕೊಂಡಿತ್ತು.

## ರವೀಂದ್ರನಾಥ ಠ್ಯಾಗೋರ್ 156ನೇ ಜನ್ಮದಿನಾಚರಣೆ: ಈಜಿಪ್ಟ್ ನಲ್ಲಿ ಸಾಂಸ್ಕೃತಿಕ ಉತ್ಸವ



ಕವಿ ರವೀಂದ್ರನಾಥ ಠ್ಯಾಗೋರ್ ಅವರ 156ನೇ ಜನ್ಮದಿನಾಚರಣೆ ಅಂಗವಾಗಿ ಈಜಿಪ್ಟ್‌ನಲ್ಲಿ ಸಾಂಸ್ಕೃತಿಕ ಉತ್ಸವವನ್ನು ಮೇ 8-12 ರಿಂದ ಭಾರತ ಆಯೋಜಿಸಲಿದೆ. ಈಜಿಪ್ಟ್ ನ ಕೈರೋದಲ್ಲಿರುವ ಭಾರತದ ರಾಯಭಾರ ಕಚೇರಿಯ ಸಾಂಸ್ಕೃತಿಕ ವಿಭಾಗವಾದ "ಮೌಲಾನ ಅಜಾದ್ ಸೆಂಟರ್ ಫಾರ್ ಇಂಡಿಯನ್ ಕಲ್ಚರ್ " ಉತ್ಸವವನ್ನು ಹಮ್ಮಿಕೊಂಡಿದೆ. ಈಜಿಪ್ಟ್ ನ ಸಾಂಸ್ಕೃತಿಕ ಸಚಿವಾಲಯ, ಕೈರೋ ಒಪೆರಾ ಹೌಸ್, ಕಲ್ಚರಲ್ ಪ್ರೊಡಕ್ಷನ್ ಹೌಸ್ ಹಾಗೂ ಭಾರತೀಯ ಸಮುದಾಯ ಒಕ್ಕೂಟ ಸಹ ಉತ್ಸವಕ್ಕೆ ಕೈಜೋಡಿಸಿವೆ. ಈ ಉತ್ಸವದಲ್ಲಿ ನೃತ್ಯ ಪ್ರದರ್ಶನ, ಸಿನಿಮಾ ಪ್ರದರ್ಶನ, ನಾಟಕ ಹಾಗೂ ಚಿತ್ರಕಲೆ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಉತ್ಸವದ ಒಂದು ಭಾಗವಾಗಿ, ಟಾಗೋರ್ ಅವರ 'ಚಿತ್ರಾಂಗದ'

www.karunaduexams.com

ಎಂಬ ಕೃತಿಯನ್ನು ಆಧರಿಸಿದ ನೃತ್ಯ ನಾಟಕವನ್ನು ಕೋಲ್ಕತಾ ಮೂಲದ ಡ್ಯಾನ್ಸರ್ಸ್ ಗಿಲ್ಡ್ ನಡೆಸಲಿದೆ. ಮಹಾಭಾರತದಲ್ಲಿ ಚಿತ್ರಾಂಗದಾ ಒಬ್ಬ ಶೂರ ರಾಜಕುಮಾರಿ.

**ಈಜಿಪ್ಟ್ ಸಂಬಂಧ:**

ರವೀಂದ್ರನಾಥ್ ಠ್ಯಾಗೋರ್ ಅವರು ಯುವಕರಾಗಿದ್ದ 1878 ರಲ್ಲಿ ಹಾಗೂ ನಂತರ 1926 ರಲ್ಲಿ ಈಜಿಪ್ಟ್ ಗೆ ಭೇಟಿ ನೀಡಿದ್ದರು. ಈಜಿಪ್ಟಿನ ಬಲವಾದ ಸಾಹಿತ್ಯ ಪ್ರವೃತ್ತಿಗಳಿಂದ ಠ್ಯಾಗೋರ್ ಅವರು ಪ್ರಭಾವಿತರಾಗಿದ್ದರು. ತಮ್ಮ ಭೇಟಿಯ ವೇಳೆ ಅಲೆಕ್ಸಾಂಡ್ರಿಯಾ ಹಾಗೂ ಕೈರೋದಲ್ಲಿನ ಪ್ರಖ್ಯಾತ ಸಾಹಿತಿಗಳೊಂದಿಗೆ ಸಮಾಲೋಚನೆ ನಡೆಸಿದ್ದರು. ಈಜಿಪ್ಟ್ನ ಕವಿ ಅಹ್ಮದ್ ಶೌಕಿ ಅವರೊಂದಿಗಿನ ನಿರಂತರ ಸ್ನೇಹವನ್ನು ಹೊಂದಿದ್ದ ಅವರು 1932 ರಲ್ಲಿ ಅವರ ಸಾವಿನ ಬಗ್ಗೆ ಚಲಿಸುವ ಸುವಾರ್ತೆ ಬರೆದರು. ನೈಲ್ ನದಿಯ ಮತ್ತು ಈಜಿಪ್ತಿಯನ್ನರ ಪ್ರವರ್ಧಮಾನ ನಾಗರಿಕತೆಯ ನಡುವಿನ ಸುಂದರ ಸಂಬಂಧ ಬಗ್ಗೆ ಸಹ ಅವರು ಬರೆದಿದ್ದಾರೆ.

**ರವೀಂದ್ರನಾಥ್ ಠ್ಯಾಗೋರ್:**

- ರವೀಂದ್ರನಾಥ್ ಠ್ಯಾಗೋರ್ (1861-1941) ಭಾರತದ ಶ್ರೇಷ್ಠ ಕವಿ.
- ನೊಬೆಲ್ ಪ್ರಶಸ್ತಿ ಪಡೆದ ಯುರೋಪಿಯನ್ ನೇತರ ಮೊದಲ ವ್ಯಕ್ತಿ. ರವೀಂದ್ರನಾಥ್ ಅವರ ಕವನ ಸಂಕಲನ "ಗೀತಾಂಜಲಿ"ಗೆ 1913ರಲ್ಲಿ ನೊಬೆಲ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿತ್ತು.
- ಠ್ಯಾಗೋರ್ ಅವರ ಕವಿತೆ, ನಾಟಕ, ಕಾದಂಬರಿಗಳು ವಿಶ್ವ ಮನ್ನಣೆ ಗಳಿಸಿವೆ. ಅಲ್ಲದೇ ವಿಶ್ವದಾದ್ಯಂತ ಭಾರಿ ಸಂಖ್ಯೆಯ ಓದುಗರನ್ನು ಆಕರ್ಷಿಸಿದ್ದವು. ಬಂಗಾಳಿ ಸಾಹಿತ್ಯಕ್ಕೆ ಅವರ ಕೊಡುಗೆ ಅಪಾರ.
- ಠ್ಯಾಗೋರ್ ಅವರು ಜಲಿಯನ್ ವಾಲಬಾಗ್ ಹತ್ಯಕಾಂಡವನ್ನು ವಿರೋಧಿಸಿ ತಮಗೆ ನೀಡಿದ್ದ ನೈಟ್ ಹುಡ್ ಪ್ರಶಸ್ತಿಯನ್ನು ಹಿಂದಿರುಗಿಸಿದರು.

## <u>ಭಾರತೀಯ ಮೂಲದ ಮೂವರು ವಿಜ್ಞಾನಿಗಳಿಗೆ ಯುಕೆ ರಾಯಲ್ ಸೊಸೈಟಿ ಫೆಲೋಶಿಪ್ ಗೌರವ</u>



ಬ್ರಿಟನ್ನಿನ ಪ್ರತಿಷ್ಠಿತ ವಿಜ್ಞಾನ ಸಂಸ್ಥೆ "ದಿ ರಾಯಲ್ ಸೊಸೈಟಿ"ಯ ಫೆಲೋ ಗೌರವಕ್ಕೆ ಭಾರತೀಯ ಮೂಲದ ಮೂವರು ವಿಜ್ಞಾನಿಗಳನ್ನು ಆಯ್ಕೆಮಾಡಲಾಗಿದೆ. ಯುಕೆ ಅಥವಾ ಕಾಮನ್ ವೆಲ್ತ್ ರಾಷ್ಟ್ರಗಳಲ್ಲಿ ನೆಲೆಸಿರುವ ಅಥವಾ ಕಾರ್ಯನಿರ್ವಹಿಸುತ್ತಿದ್ದು, ವಿಜ್ಞಾನ ಕ್ಷೇತ್ರಕ್ಕೆ ಗಣನೀಯ ಕೊಡುಗೆ ನೀಡುವ ಎಂಜನಿಯರ್ ಗಳು, ವಿಜ್ಞಾನಿಗಳು ಮತ್ತು ತಂತ್ರಜ್ಞಾನಿಗಳಿಗೆ ಪ್ರತಿ ವರ್ಷ ಈ ಗೌರವವನ್ನು ನೀಡಲಾಗುವುದು.

**ಕೃಷ್ಣ ಚಟರ್ಜಿ**: ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಕೃಷ್ಣ ಚಟರ್ಜಿ ಅವರು ಥೈರಾಯಿಡ್ ಗ್ರಂಥಿ ರಚನೆಯ ಆನುವಂಶಿಕ ಅಸ್ವಸ್ಥತೆಗಳು, ಹಾರ್ಮೋನ್ ಸಂಶ್ಲೇಷಣೆ ಮತ್ತು ಹಾರ್ಮೋನು ಕ್ರಿಯೆಯ

www.karunaduexams.com

ನಿಯಂತ್ರಣಕ್ಕಾಗಿ ನಡೆಸಿದ ಸಂಶೋಧನೆಗೆ ಈ ಗೌರವಕ್ಕೆ ಪಾತ್ರರಾಗಿದ್ದಾರೆ. ಚಟರ್ಜಿ ಅವರು ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಕ್ಲಿನಿಕಲ್ ರಿಸರ್ಚ್ ಸೌಲಭ್ಯಗಳ ಅಭಿವೃದ್ಧಿಗೆ ಶ್ರಮಿಸಿದ್ದಾರೆ.

**ಸುಭಾಷ್ ಖೋಟ್**: ನ್ಯೂಯಾರ್ಕ್ ವಿಶ್ವವಿದ್ಯಾಲಯದಿಂದ ಸುಭಾಷ್ ಖೊಟ್ ಸೈದ್ಧಾಂತಿಕ ಕಂಪ್ಯೂಟರ್ ವಿಜ್ಞಾನಿಯಾಗಿದ್ದು, ಅವರು "ವಿಶಿಷ್ಟ ಆಟಗಳ (Unique Games)" ಸಮಸ್ಯೆಯ ವ್ಯಾಖ್ಯಾನಕ್ಕಾಗಿ ಹೆಸರುವಾಸಿಯಾಗಿದ್ದಾರೆ.

**ಯದ್ವಿಂದರ್ ಮಲ್ಹಿ:** ಆಕ್ಸ್ಫರ್ಡ್ ವಿಶ್ವವಿದ್ಯಾನಿಲಯದ ಯದ್ವಿಂದರ್ ಮಲ್ಹಿ ಪರಿಸರವಿಜ್ಞಾನಿಯಾಗಿದ್ದು, ಭೂಮಿಯ ಪರಿಸರ ವ್ಯವಸ್ಥೆಗಳ ಕಾರ್ಯಚಟುವಟಿಕೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅದರಿಂದಾಗುವ ಹವಾಮಾನ ಬದಲಾವಣೆ, ಪ್ರಾಣಿಗಳ ಅವನತಿ ಬಗ್ಗೆ ನಡೆಸಿದ ಸಂಶೋಧನೆಗೆ ಈ ಗೌರವ ಲಭಿಸಿದೆ.

**ರಾಯಲ್ ಸೊಸೈಟಿ**:

ರಾಯಲ್ ಸೊಸೈಟಿ ವಿಜ್ಞಾನ, ಔಷಧ ಮತ್ತು ಎಂಜಿನಿಯರಿಂಗ್ ಕ್ಷೇತ್ರಗಳ ಎಲ್ಲ ಕ್ಷೇತ್ರಗಳಿಂದ ಪಡೆದ ವಿಶ್ವದ ಅತ್ಯಂತ ವಿಶೇಷವಾದ ವಿಜ್ಞಾನಿಗಳ ಸ್ವಯಂ ಆಡಳಿತ ಫೆಲೋಶಿಪ್ ಸಂಸ್ಥೆ. ಇದು ವಿಶ್ವದ ಅತ್ಯಂತ ಹಳೆಯ ವೈಜ್ಞಾನಿಕ ಅಕಾಡೆಮಿಯಾಗಿದೆ ಮತ್ತು ಇದನ್ನು 1660 ರಲ್ಲಿ ಸ್ಥಾಪಿಸಲಾಯಿತು. ವಿಜ್ಞಾನದಲ್ಲಿ ಶ್ರೇಷ್ಠತೆಯನ್ನು ಗುರುತಿಸುವುದು, ಬೆಂಬಲಿಸುವುದು ಮತ್ತು ಉತ್ತೇಜಿಸುವುದು ಮತ್ತು ಮಾನವೀಯತೆಯ ಪ್ರಯೋಜನಕ್ಕಾಗಿ ವಿಜ್ಞಾನದ ಅಭಿವೃದ್ಧಿಯನ್ನು ಮತ್ತು ಬಳಕೆಯನ್ನು ಪ್ರೋತ್ಸಾಹಿಸುವುದು ಇದರ ಗುರಿಯಾಗಿದೆ. ರಾಯಲ್ ಸೊಸೈಟಿ ಪ್ರತಿವರ್ಷ ಹೊಸ ಫೆಲೋಗಳು ಮತ್ತು ವಿದೇಶಿ ಸದಸ್ಯರನ್ನು ಆಯ್ಕೆ ಮಾಡುತ್ತದೆ, ಇವರು ಎಂಜಿನಿಯರಿಂಗ್ ವಿಜ್ಞಾನ, ಗಣಿತ ಮತ್ತು ವೈದ್ಯಕೀಯ ವಿಜ್ಞಾನ ಸೇರಿದಂತೆ ನೈಸರ್ಗಿಕ ಜ್ಞಾನದ ಸುಧಾರಣೆಗೆ ಗಣನೀಯ ಕೊಡುಗೆ ನೀಡಿದ್ದಾರೆ. ಅದರ ಅಡಿಪಾಯದಿಂದ ಸುಮಾರು 8,000 ಫೆಲೋಗಳನ್ನು ಆಯ್ಕೆ ಮಾಡಲಾಗಿದೆ. 1841 ರಲ್ಲಿ ಎಂಜಿನಿಯರ್ ಅರ್ಡಸೇರ್ ಕರ್ಸೆಟ್ಜಿಯವರು ಆಯ್ಕೆಯಾದ ಮೊದಲ ಭಾರತೀಯ ಮತ್ತು ಗಣಿತಶಾಸ್ತ್ರಜ್ಞ ಶ್ರೀನಿವಾಸ ರಾಮನುಜನ್, 1918 ರಲ್ಲಿ ಸೊಸೈಟಿಗೆ ಆಯ್ಕೆಯಾದ ಎರಡನೇ ಭಾರತೀಯ.

## <u>UN-Habitat ಅಧ್ಯಕ್ಷ ಸ್ಥಾನಕ್ಕೆ ಭಾರತ ಆಯ್ಕೆ</u>

ವಿಶ್ವಸಂಸ್ಥೆ-ಆವಾಸಸ್ಥಾನ ಅಧ್ಯಕ್ಷ ಸ್ಥಾನಕ್ಕೆ ಭಾರತ ಅವಿರೋಧವಾಗಿ ಆಯ್ಕೆಯಾಗಿದೆ. UN-Habitat ವಿಶ್ವಸಂಸ್ಥೆ ಸಂಘಟನೆಯ ಅಂಗಸಂಸ್ಥೆ (UNO)ಯಾಗಿದ್ದು, ವಿಶ್ವಸಂಸ್ಥೆಯ ಸಾಮಾನ್ಯ ಮಂಡಳಿಗೆ ವರದಿ ಮಾಡಿಕೊಳ್ಳಲಿದೆ. ವಿಶ್ವದಾದ್ಯಂತ ಸಾಮಾಜಿಕ ಮತ್ತು ಪರಿಸರ ಸಮರ್ಥನೀಯ ಮಾನವ ವಸತಿಗಳನ್ನು ಉತ್ತೇಜಿಸುವುದು ಈ ಸಂಸ್ಥೆಯ ಮುಖ್ಯ ಧ್ಯೇಯ. ಹತ್ತು ವರ್ಷಗಳ ನಂತರ ಭಾರತ ಈ ಸಂಸ್ಥೆಯ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿದೆ.

www.karunaduexams.com

ಮೂರನೇ ಬಾರಿ ಭಾರತಕ್ಕೆ ಅಧ್ಯಕ್ಷ ಸ್ಥಾನ ದಕ್ಕಿದ್ದು, ಈ ಹಿಂದೆ 2007 ಮತ್ತು 1988 ರಲ್ಲಿ ಆಯ್ಕೆಯಾಗಿತ್ತು. UN-Habitat ಅನ್ನು 1978ರಲ್ಲಿ ಸ್ಥಾಪಿಸಲಾಗಿದೆ.

UN-Habitat ಆಡಳಿತ ಮಂಡಳಿ ಅಂತರ-ಸರ್ಕಾರಿ ನೀತಿ ಮತ್ತು ನಿರ್ಣಯ ಮಾಡುವ ಅಂಗವಾಗಿದ್ದು, ಮಾನವನ ವಸತಿಗಳಿಗೆ ಅವಿಭಾಜ್ಯ ಮತ್ತು ಸಮಗ್ರವಾದ ಮಾರ್ಗವನ್ನು ಉತ್ತೇಜಿಸುವ ಉದ್ದೇಶದಿಂದ, ಮಾನವ ಪರಿಹಾರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ದೇಶಗಳು ಮತ್ತು ಪ್ರದೇಶಗಳಿಗೆ ಸಹಾಯ ಮಾಡಲು ಮತ್ತು ಮಾನವ ಸಮಸ್ಯೆಯ ಕುರಿತು ದೇಶಗಳಲ್ಲಿ ಸಹಕಾರವನ್ನು ಬಲಪಡಿಸುತ್ತದೆ. ಚುನಾವಣೆ ತರುವಾಯ, ಕೇಂದ್ರ ವಸತಿ ಮತ್ತು ನಗರ ಬಡತನ ನಿರ್ಮೂಲನೆ ಸಚಿವ ಎಂ.ವೆಂಕಯ್ಯ ನಾಯ್ಡು ಮುಂದಿನ ಎರಡು ವರ್ಷಗಳಲ್ಲಿ UN-Habitat ಆಡಳಿತ ಮಂಡಳಿ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಅಂತೆಯೇ ಅವರು ಕೀನ್ಯಾದ ನೈರೋಬಿಯಲ್ಲಿ ನಡೆಯಲಿರುವ UN-Habitat ನ 58 ಸದಸ್ಯ ರಾಷ್ಟ್ರಗಳನ್ನು ಹೊಂದಿರುವ ಆಡಳಿತ ಮಂಡಳಿಯ 26 ನೇ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಸಭೆಯ ಚರ್ಚಾ ವಿಷಯವು "ಹೊಸ ನಗರಾಭಿವೃದ್ಧಿ ಕಾರ್ಯಸೂಚಿಯ ಪರಿಣಾಮಕಾರಿ ಅನುಷ್ಠಾನಕ್ಕೆ ಅವಕಾಶಗಳು" ಆಗಿದೆ.

**UN-Habitat**:

UN-Habitat, ಯುನೈಟೆಡ್ ನೇಷನ್ಸ್ ಹ್ಯೂಮನ್ ಸೆಟ್ಲ್ಮೆಂಟ್ಸ್ ಪ್ರೋಗ್ರಾಂ ಎಂದೂ ಕರೆಯಲ್ಪಡುವ ವಿಶ್ವಸಂಸ್ಥೆಯ ಅಂಗಸಂಸ್ಥೆ. ಸಮರ್ಥನೀಯ ನಗರ ಅಭಿವೃದ್ಧಿ ಮತ್ತು ಮಾನವ ವಸಾಹತುಗಳ ನಿರ್ಮಾಣದ ಹೊಣೆಗಾರಿಕೆಯನ್ನು ಹೊಂದಿದೆ. ಇದು 1978 ರಲ್ಲಿ ಸ್ಥಾಪನೆಗೊಂಡಿದ್ದು ಮತ್ತು ಕೀನ್ಯಾದ ನೈರೋಬಿಯ ವಿಶ್ವಸಂಸ್ಥೆಯ ಕಚೇರಿಯಲ್ಲಿ ಕೇಂದ್ರ ಕಾರ್ಯಾಲಯವನ್ನು ಹೊಂದಿದೆ. ಎಲ್ಲರಿಗೂ ಸಾಕಷ್ಟು ಆಶ್ರಯ ಒದಗಿಸುವ ಗುರಿಯೊಂದಿಗೆ ಸಾಮಾಜಿಕ ಮತ್ತು ಪರಿಸರ ಸುಸ್ಥಿರ ಪಟ್ಟಣಗಳು ಮತ್ತು ನಗರಗಳನ್ನು ಉತ್ತೇಜಿಸಲು ವಿಶ್ವಸಂಸ್ಥೆ ಸಾಮಾನ್ಯ ಮಂಡಳಿಯಡಿ ಇದು ಕಾರ್ಯನಿರ್ವಹಿಸುತ್ತಿದೆ.

## <u>ಅಮೆರಿಕದ FERCಗೆ ಭಾರತ ಮೂಲದ ನೀಲ್ ಚಟರ್ಜಿ ನೇಮಕ</u>



ಭಾರತ ಮೂಲದ ಅಮೆರಿಕ ಪ್ರಜೆ ನೀಲ್ ಚಟರ್ಜಿ ಅವರನ್ನು ಅಮೆರಿಕದ ಫೆಡರಲ್ ಎನರ್ಜಿ ರೆಗ್ಯೂಲೇಟರ್ ಕಮೀಷನ್ (FERC)ನ ಸದಸ್ಯರಾಗಿ ನೇಮಕಗೊಂಡಿದ್ದಾರೆ. ಅಮೆರಿಕದ ವಿದ್ಯುತ್ ಗ್ರಿಡ್ ಮೇಲ್ವಿಚಾರಣೆ ಮತ್ತು ಬಹು ಶತಕೋಟಿ ಡಾಲರ್ ಇಂಧನ ಯೋಜನೆಗಳನ್ನು ನಿರ್ಧರಿಸುವ ಜವಾಬ್ದಾರಿಯು ಈ ಆಯೋಗದಾಗಿದೆ. ಚಟರ್ಜಿ ಅವರ ಅವಧಿಯು ಜೂನ್ 30, 2021 ರಂದು ಮುಕ್ತಾಯಗೊಳ್ಳಲಿದೆ. ಫೆಡರಲ್ ಎನರ್ಜಿ ರೆಗ್ಯುಲೇಟರಿ ಆಯೋಗದ ಸದಸ್ಯರಾಗಿ ಅಧಿಕಾರ ಸ್ವೀಕರಿಸುವ ಮೊದಲು US ಸೆನೆಟ್ ಚಟರ್ಜಿ ಅವರನ್ನು ಅನುಮೋದಿಸಬೇಕು.

**ನೀಲ್ ಚಟರ್ಜಿ**:

ನೀಲ್ ಚಟರ್ಜಿಯವರು ಕೆಂಟುಕಿ ಮೂಲದವರು. ಅವರು ಸೇಂಟ್ ಲಾರೆನ್ಸ್ ವಿಶ್ವವಿದ್ಯಾಲಯದಿಂದ ಮತ್ತು ಸಿನ್ಸಿನ್ನಾಟಿ ಕಾಲೇಜ್ ಆಫ್ ಲಾ ವಿಶ್ವವಿದ್ಯಾಲಯದಿಂದ ಪದವಿ ಪಡೆದಿದ್ದಾರೆ. ಚಟರ್ಜಿ

karunaduexams.com

ರಾಷ್ಟ್ರೀಯ ಗ್ರಾಮೀಣ ವಿದ್ಯುತ್ ಸಹಕಾರ ಸಂಘದ ಸರ್ಕಾರಿ ಸಂಬಂಧಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಯು.ಎಸ್. ಸೆನೇಟ್ ಮೆಜಾರಿಟಿ ಲೀಡರ್ ಮಿಚ್ ಮ್ಯಾಕ್ ಕಾನ್ನೆಲ್ಗೆ ಇಂಧನ ನೀತಿ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದಾರೆ.

**ಚೀನಾಬ್ ನದಿಯ ಮೇಲೆ ವಿಶ್ವದ ಅತಿ ಎತ್ತರದ ರೈಲ್ವೆ ಸೇತುವೆ**



ವಿಶ್ವದ ಅತಿ ಎತ್ತರದ ರೈಲು ಸೇತುವೆ ಚೀನಾಬ್ ನದಿಯ ಮೇಲೆ ಜಮ್ಮು ಮತ್ತು ಕಾಶ್ಮೀರದಲ್ಲಿ ಸ್ಥಾಪನೆಗೊಳ್ಳಲಿದೆ. ಐಫೆಲ್ ಟವರ್ ಗಿಂತಲೂ 35ಮೀ ಎತ್ತರವಿರಲಿರುವ ಈ ಸೇತುವೆ ಜಮ್ಮು ಮತ್ತು ಕಾಶ್ಮೀರದ ರೆಯಾಸಿ ಜಿಲ್ಲೆಯ ಬಕ್ಕಲ್ ಮತ್ತು ಕೌರಿ ನಡುವೆ ಪ್ರಗತಿ ಹಂತದಲ್ಲಿದೆ.

- 1,315 ಮೀಟರ್ ಉದ್ದದ ಈ ಸೇತುವೆಯ ನಿರ್ಮಾಣ ಕಾರ್ಯ ಪೂರ್ಣಗೊಂಡ ಬಳಿಕ ಈ ಸೇತುವೆ ಜಗತ್ತಿನ ಅತಿ ಎತ್ತರದ ರೈಲ್ವೆ ಸೇತುವೆ ಎನಿಸಿಕೊಳ್ಳಲಿದೆ.
- ರೈಲ್ವೆ ಸಚಿವಾಲಯ ಕೈಗೆತ್ತಿಕೊಂಡಿರುವ ಜಮ್ಮು–ಉಧಂಪುರ್– ಶ್ರೀನಗರ–ಬಾರಾಮುಲ್ಲ ನಡುವಿನ ಈ ಬೃಹತ್ ಯೋಜನೆಯ ಒಟ್ಟು ಮೊತ್ತ ರೂ 512 ಕೋಟಿ. ಈ ಸೇತುವೆ ರೈಲ್ವೆ ಸಂಚಾರಕ್ಕೆ ಮಾತ್ರವಲ್ಲದೆ ವಾಹನಗಳ ದ್ವಿಮುಖ ಸಂಚಾರಕ್ಕೆ 14 ಮೀಟರ್ ಜಾಗ ಹಾಗೂ ನಡುವಿನ ಭಾಗದಲ್ಲಿ 1.2 ಮೀಟರ್ ಅಗಲದ ಹೂವಿನ ಹಾದಿಯನ್ನು ಒಳಗೊಳ್ಳಲಿದೆ.
- ಈ ಸೇತುವೆಯ ಜೀವಿತಾವಧಿ 120 ವರ್ಷ.

**ಸೇತುವೆಯ ವಿನ್ಯಾಸ:**

- ಚೀನಾಬ್ ಸೇತುವೆ ಉಕ್ಕಿನ ಬೃಹತ್ ಕಮಾನುಗಳನ್ನೊಳಗೊಂಡಿದ್ದು, ಇದು ಭಾರತದಲ್ಲಿಯೇ ಈ ಮಾದರಿಯ ಮೊದಲ ಸೇತುವೆ.
- ನಾರ್ವೆ ಮೂಲದ ಫೋರ್ಸ್ ಟೆಕ್ನಾಲಜಿ ಲ್ಯಾಬೊರೇಟರಿಯು ಗಾಳಿಯ ವೇಗವನ್ನು ಅರಿತುಕೊಳ್ಳಲು ಹಲವು ಪರೀಕ್ಷೆಗಳನ್ನು ನಡೆಸಿದೆ. ಗಂಟೆಗೆ ಸುಮಾರು 260 ಕಿ.ಮಿ. ವೇಗ ಬೀಸುವ ಗಾಳಿಯನ್ನು ತಡೆದುಕೊಳ್ಳುವಂತೆ ಸೇತುವೆ ವಿನ್ಯಾಸ ಮಾಡಲಾಗಿದೆ.
- 17 ಅಂಕಣಗಳು ಮತ್ತು ಚೆನಾಬ್ ನದಿಯನ್ನು ಸಂಪೂರ್ಣ ಕ್ರಮಿಸುವ 469 ಮೀಟರ್ ಉದ್ದದ ಮುಖ್ಯ ಕಮಾನನ್ನು ಸೇತುವೆ ಒಳಗೊಂಡಿದೆ. ಸೇತುವೆಗೆ 130 ಮೀ ಉದ್ದ ಮತ್ತು 100 ಮೀ ಎತ್ತರದ ಕಂಬಗಳು ಆಧಾರವಾಗಿರಲಿದ್ದು, ಎರಡೂ ತುದಿಗಳಿಗೆ ಕೇಬಲ್‌ಗಳ ಬಲದ ಆಧಾರ ನೀಡಲಾಗಿದೆ.
- ಸೇತುವೆಯ ರಕ್ಷಣೆಗೆ ವೈಮಾನಿಕ ಭದ್ರತೆ ನೀಡಲಾಗುವುದು. ಗಂಭೀರ ಸನ್ನಿವೇಶಗಳು ಉಂಟಾ-ದಲ್ಲಿ ಪ್ರಯಾಣಿಕರನ್ನು ರಕ್ಷಿಸಲು ಆನ್‌ಲೈನ್ ನಿರ್ವಹಣೆ, ಎಚ್ಚರಿಕೆ ನೀಡುವ ವ್ಯವಸ್ಥೆಗಳನ್ನು ಅಳವಡಿಸಲಾಗುವುದು.

www.karunaduexams.com

## ವಿಜಯವಾಡ ವಿಮಾನ ನಿಲ್ದಾಣಕ್ಕೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾನಮಾನ



ವಿಜಯವಾಡ ವಿಮಾನ ನಿಲ್ದಾಣಕ್ಕೆ ಕೇಂದ್ರ ಸಚಿವ ಸಂಪುಟ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಸ್ಥಾನಮಾನ ನೀಡಿದೆ. 2014ರ ಆಂಧ್ರಪ್ರದೇಶದ ಪುನರ್ ರಚನೆ ಕಾಯಿದೆ ಪ್ರಕಾರ ಈ ಅನುಮೋದನೆಯನ್ನು ನೀಡಲಾಗಿದೆ. ಪ್ರಯಾಣಿಕರ ಸಂಚಾರ ದಟ್ಟಣೆಯಲ್ಲಿ ವಿಮಾನನಿಲ್ದಾಣವು ಗಮನಾರ್ಹ ಬೆಳವಣಿಗೆಯನ್ನು ಕಂಡಿರುವುದರಿಂದ ಮತ್ತು ವಿಮಾನಯಾನ ಸಂಸ್ಥೆಗಳ ಹಾಗೂ ಆಂಧ್ರಪ್ರದೇಶ ಸರಕಾರದ ಬೇಡಿಕೆಯನ್ನು ಪೂರೈಸಲು ನಿರ್ಧಾರ ತೆಗೆದುಕೊಳ್ಳಲಾಗಿದೆ. ಈ ವಿಮಾನ ನಿಲ್ದಾಣವು ಪ್ರಸ್ತುತ ಮೂಲಭೂತ ಸೌಕರ್ಯಗಳ ಸುಧಾರಣೆಗೆ ಒಳಗಾಗುತ್ತಿದೆ ಮತ್ತು ಅಂತಾರಾಷ್ಟ್ರೀಯ ಕಾರ್ಯಾಚರಣೆಗಳ ಸೌಲಭ್ಯಗಳಲ್ಲಿ ಸುಧಾರಣೆಯಾಗಿದೆ. ಭಾರತೀಯ ವಿಮಾನಯಾನ ಪ್ರಾಧಿಕಾರವು ಉನ್ನತೀಕರಿಸುವ ಕಾರ್ಯಗಳನ್ನು ಕೈಗೊಳ್ಳುತ್ತಿದೆ.

**ಮಹತ್ವ**:

ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮನ್ನಣೆಯಿಂದ ದೇಶಿಯ ಹಾಗೂ ವಿದೇಶಿ ಪ್ರವಾಸಿಗರ ಸಂಖ್ಯೆಯಲ್ಲಿ ಹೆಚ್ಚಳವಾಗಲಿದ್ದು, ಪ್ರವಾಸೋದ್ಯಮಕ್ಕೆ ವರವಾಗಲಿದೆ. ಅಲ್ಲದೇ ಈ ಭಾಗದ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗೂ ಸಹಕಾರಿಯಾಗಲಿದೆ.

**ವಿಜಯವಾಡ**:

ವಿಜಯವಾಡ ಒಂದು ಮಹಾನಗರ ಪಾಲಿಕೆ ನಗರವಾಗಿದ್ದು, ಆಂಧ್ರಪ್ರದೇಶದ ಕೃಷ್ಣ ನದಿಯ ದಂಡೆಯ ಮೇಲಿದೆ. ಆಂಧ್ರಪ್ರದೇಶ ರಾಜಧಾನಿ ಪ್ರದೇಶದ ಭಾಗವಾಗಿ ಮತ್ತು ಆಂಧ್ರಪ್ರದೇಶದ ರಾಜಧಾನಿ ವಲಯ ಅಭಿವೃದ್ಧಿ ಪ್ರಾಧಿಕಾರದ ಕೇಂದ್ರ ಕಚೇರಿಯನ್ನು ನಗರವು ಹೊಂದಿದೆ. ಈ ನಗರವು ರಾಜ್ಯದ ಪ್ರಮುಖ ವ್ಯಾಪಾರಿ ಮತ್ತು ವ್ಯಾಪಾರ ಕೇಂದ್ರಗಳಲ್ಲಿ ಒಂದಾಗಿದೆ ಮತ್ತು "ಆಂಧ್ರಪ್ರದೇಶದ ವಾಣಿಜ್ಯ ರಾಜಧಾನಿ" ಎಂದು ಜನಪ್ರಿಯಗೊಂಡಿದೆ.

## ದಕ್ಷಿಣ ಕೊರಿಯಾದ ಅಧ್ಯಕ್ಷರಾಗಿ ಮೂನ್ ಜೆ ಇನ್ ಆಯ್ಕೆ



ದಕ್ಷಿಣ ಕೊರಿಯಾದ ಅಧ್ಯಕ್ಷೀಯ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷದ ನಾಯಕ ಮೂನ್ ಜೆ ಇನ್ ಭರ್ಜರಿ ಜಯಗಳಿಸಿದ್ದಾರೆ. ಚುನಾವಣೆಯಲ್ಲಿ ಮೂನ್ ಅವರಿಗೆ ಶೇ 41.08% ಮತಗಳು ಸಂದಿವೆ. ಭ್ರಷ್ಟಾಚಾರ ಹಗರಣದಲ್ಲಿ ಪದಚ್ಯುತಿಯಾದ ಹಿಂದಿನ ಅಧ್ಯಕ್ಷೆ ಪಾರ್ಕ್ ಜಿಯುನ್ ಹೈ ಅವರ ಉತ್ತಾರಧಿಕಾರಿಯಾಗಿ ಸೇವೆ ಸಲ್ಲಿಸಲಿದ್ದಾರೆ. 2012ರ ಚುನಾವಣೆಯಲ್ಲಿ ಮೂನ್ ಅವರು ಪಾರ್ಕ್ ಜಿಯುನ್ ವಿರುದ್ದ ಕಡಿಮೆ ಮತಗಳಿಂದ ಪರಾಭವಗೊಂಡಿದ್ದರು. ಪಾರ್ಕ್ ಅವರು ಪದಚ್ಯುತಿಗೊಂಡ ದಕ್ಷಿಣ ಕೊರಿಯಾದ ಮೊದಲ ಅಧ್ಯಕ್ಷರು.

**ಮೂನ್ ಜೆ ಇನ್**:

www.karunaduexams.com

ಮೂನ್ ರವರು 1950-53ರ ಕೊರಿಯನ್ ಯುದ್ದದಲ್ಲಿ ಉತ್ತರ ಕೊರಿಯಾದಿಂದ ಓಡಿಹೋದ ನಿರಾಶ್ರಿತರ ಮಗ. 1975 ರಲ್ಲಿ, ಸರಕಾರ ವಿರೋಧಿ ಪ್ರತಿಭಟನೆ ನಡೆಸಿದಕ್ಕಾಗಿ ಅವರನ್ನು ಜೈಲಿನಲ್ಲಿರಿಸಲಾಯಿತು. ನಂತರ, ಅವರು ಮಾನವ ಹಕ್ಕುಗಳ ವಕೀಲರಾದರು ಮತ್ತು ಬಡ ಕಾರ್ಮಿಕರ ಮತ್ತು ವಿದ್ಯಾರ್ಥಿ ಕಾರ್ಯಕರ್ತರ ಹಕ್ಕುಗಳನ್ನು ಸಮರ್ಥಿಸಿ ಹೋರಾಟದಲ್ಲಿ ತೊಡಗಿಸಿಕೊಂಡರು. 1972 ರಲ್ಲಿ, ಪಾರ್ಕ್ ಚುಂಗ್-ಹೀ ಸರ್ವಾಧಿಕಾರವನ್ನು ಉರುಳಿಸಲು ಮೂನ್ ಪ್ರಜಾಪ್ರಭುತ್ವ ಚಳವಳಿಯ ಭಾಗವಾದರು. ಪಾರ್ಕ್ ಚುಂಗ್-ಹೀ ದಕ್ಷಿಣ ಕೊರಿಯಾವನ್ನು 18 ವರ್ಷಗಳ ಕಾಲ ಆಳಿದರು. ಅವರು ಇತ್ತೀಚೆಗೆ ಅಧ್ಯಕ್ಷೀಯ ಸ್ಥಾನದಿಂದ ಪದಚ್ಯುತಿಗೊಂಡ ಜಿನ್-ಹೈ ಅವರ ತಂದೆಯಾಗಿದ್ದರು.

## <u>ಶ್ರೀಲಂಕಾದಲ್ಲಿ ವೆಸಕ್ ದಿನ (ಬುದ್ಧ ಜಯಂತಿ) ಆಚರಣೆಯಲ್ಲಿ ಭಾಗವಹಿಸಲಿರುವ ಮೋದಿ</u>




ಬುದ್ಧನ ಜನ್ಮ, ಜ್ಞಾನೋದಯ ಮತ್ತು ಮರಣದ ಸ್ಮರಣಾರ್ಥವಾಗಿರುವ 'ವೆಸಕ್ ದಿನ' (ಬುದ್ಧ ಜಯಂತಿ)" ಬೌದ್ಧ ಉತ್ಸವದಲ್ಲಿ ಪಾಲ್ಗೊಳ್ಳಲು ಪ್ರಧಾನಿ ಮೋದಿ ಅವರು ಶ್ರೀಲಂಕಾಕ್ಕೆ ಪ್ರಯಾಣಿಸಿಲಿದ್ದಾರೆ. ಪ್ರಧಾನಿ ಆದ ಮೇಲೆ ಮೋದಿ ಅವರು ಶ್ರೀಲಂಕಾಕ್ಕೆ ನೀಡುತ್ತಿರುವ ಎರಡನೇ ಭೇಟಿ ಇದಾಗಲಿದೆ. ಮೇ 12 ರಿಂದ 14 ರವರೆಗೆ 'ವೆಸಕ್ ಅಂತರರಾಷ್ಟ್ರೀಯ ದಿನ' ಉತ್ಸವವನ್ನು ಕೊಲಂಬೊದಲ್ಲಿ ನಡೆಯಲಿದೆ. 100 ಕ್ಕಿಂತ ಹೆಚ್ಚಿನ ದೇಶಗಳಿಂದ 400 ಕ್ಕಿಂತಲೂ ಹೆಚ್ಚಿನ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಬೌದ್ಧರ ಕ್ಯಾಲೆಂಡರ್‌ನಲ್ಲಿ ವೆಸಕ್ ಪ್ರಮುಖ ದಿನವಾಗಿದೆ. ಇದೇ ಮೊದಲ ಬಾರಿಗೆ ಶ್ರೀಲಂಕಾ ಈ ಉತ್ಸವದ ಆತಿಥ್ಯ ವಹಿಸಲಿದೆ.

**ಹಿನ್ನಲೆ**:

ಭಾರತ ಮತ್ತು ಶ್ರೀಲಂಕಾ ನಡುವಿನ ಬೌದ್ಧರ ಸಂಪರ್ಕ ಕ್ರಿ.ಪೂ. 2ನೇ ಶತಮಾನದಷ್ಟು ಹಿಂದಿನದು. ಚಕ್ರವರ್ತಿ ಅಶೋಕನ ಆಳ್ವಿಕೆಯಲ್ಲಿ ಬೌದ್ಧ ಧರ್ಮವನ್ನು ಭಾರತದ ಅಧಿಕೃತ ಧರ್ಮವೆಂದು ಮಾಡಲಾಯಿತು. ಅಶೋಕನ ಪುತ್ರಿ ಸಂಗಮಿತ್ತ ಮೂಲ ಬೋಧಿ ಮರದ ಕೊಂಬೆಯೊಂದನ್ನು ಅನುರಾಧಪುರಕ್ಕೆ ತಂದಳೆಂದ ನಂಬಲಾಗಿದೆ. ಶ್ರೀಲಂಕಾದಲ್ಲಿ ಥೆರವಾಡಾ ಬೌದ್ಧಧರ್ಮ ವ್ಯಾಪಕವಾಗಿ ಹಬ್ಬಿದೆ.

ಕಳೆದ ವರ್ಷ ವೆಸಕ್ ಉತ್ಸವ ಲುಂಬಿನಿ ಯಲ್ಲಿ ನಡೆದಿತ್ತು. ಚೀನಾ ರಾಷ್ಟ್ರ ನೇಪಾಳದೊಂದಿಗೆ ಸಹಭಾಗಿತ್ವದಲ್ಲಿ ಈ ಉತ್ಸವವನ್ನು ಆಚರಿಸಲಾಗಿತ್ತು.

## ಚೀನಾದ ಒನ್ ಬೆಲ್ಟ್ ಒನ್ ರೋಡ್ ಶೃಂಗಸಭೆಗೆ ಭಾರತ ಗೈರು



ಚೀನಾ ಆಯೋಜಿಸುತ್ತಿರುವ ಒನ್ ಬೆಲ್ಟ್ ಒನ್ ರೋಡ್ ಶೃಂಗಸಭೆಯಲ್ಲಿ ಭಾಗವಹಿಸದಿರಲು ಭಾರತ ನಿರ್ಧರಿಸಿದೆ. ಬದಲಿಗೆ ತನ್ನದೇ ಆದ ವ್ಯಾಪಾರ ಮಾರ್ಗಗಳ ಜಾಲವನ್ನು ನಿರ್ಮಿಸುವ ಯೋಜನೆಯನ್ನು ಭಾರತ ಹೊಂದಿದೆ. ಒನ್ ಬೆಲ್ಟ್ ಒನ್ ರೋಡ್ ಯೋಜನೆ ಚೀನಾದ ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು, ಏಷ್ಯಾ, ಆಫ್ರಿಕಾ, ಮಧ್ಯಪೂರ್ವ ಮತ್ತು ಐರೋಪ್ ಭಾಗಗಳ ನಡುವೆ ಸಂಪರ್ಕವನ್ನು ಉತ್ತೇಜಿಸುವ ಮತ್ತು ವ್ಯಾಪಾರವನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಚೀನಾ ಅಧ್ಯಕ್ಷ ಕ್ಸಿ ಜಿಂಪಿಂಗ್ 2013 ರಲ್ಲಿ ಈ ಯೋಜನೆಯನ್ನು ಪ್ರಸ್ತಾಪಿಸಿದರು.

ಶೃಂಗಸಭೆಯಲ್ಲಿ ಸುಮಾರು 65 ರಾಷ್ಟ್ರಗಳು ಭಾಗವಹಿಸಲಿವೆ. ಆದಾಗ್ಯೂ ಕೇವಲ 20 ರಾಷ್ಟ್ರಗಳ ಮುಖ್ಯಸ್ಥರು ಮಾತ್ರ ಶೃಂಗಸಭೆಯಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ಅಮೆರಿಕ ಮತ್ತು ಜಪಾನ್ ಕೊನೆಯ ನಿಮಿಷದಲ್ಲಿ ಪ್ರತಿನಿಧಿಗಳನ್ನು ಕಳುಹಿಸಲು ನಿರ್ಧರಿಸಿವೆ. ಆದರೆ ಭಾರತ ಯಾವುದೇ ಪ್ರತಿನಿಧಿಗಳನ್ನು ಕಳುಹಿಸುತ್ತಿಲ್ಲ. ಚೀನಾ-ಪಾಕಿಸ್ತಾನ ಆರ್ಥಿಕ ಕಾರಿಡಾರ್ (ಸಿಪಿಇಸಿ)ನಿಂದ ಭಾರತದ ಸಾರ್ವಭೌಮತ್ವಕ್ಕೆ ದಕ್ಕೆ ಬರಲಿದೆ ಎಂದು ಭಾರತ ಧೃಡವಾಗಿ ಪ್ರತಿಪಾದಿಸುತ್ತಿರುವುದರಿಂದ ಶೃಂಗಸಭೆಯನ್ನು ದಿಕ್ಕರಿಸಿದೆ.

ರಷ್ಯಾ, ದಕ್ಷಿಣ ಕೊರಿಯಾ, ಫ್ರಾನ್ಸ್, ಜರ್ಮನಿ ಮತ್ತು ಯುಕೆ ಮುಂತಾದ ರಾಷ್ಟ್ರಗಳು ತಮ್ಮ ಸಚಿವರು ಅಥವಾ ಅಧಿಕೃತ ನಿಯೋಗವನ್ನು ಶೃಂಗಸಭೆಗೆ ಕಳುಹಿಸಲಿವೆ. ಭಾರತದ ನೆರೆಹೊರೆಯವರೆಯ ರಾಷ್ಟ್ರಗಳಿಗೆ ಸಂಬಂಧಪಟ್ಟಂತೆ, ಪಾಕಿಸ್ತಾನವು ನಾಲ್ಕು ಮುಖ್ಯಮಂತ್ರಿಗಳು ಮತ್ತು ಐದು ಫೆಡರಲ್ ಮಂತ್ರಿಗಳನ್ನೊಳಗೊಂಡ ದೊಡ್ಡ ನಿಯೋಗವನ್ನು ಕಳುಹಿಸಲಿದೆ. ಶ್ರೀಲಂಕಾ, ಬಾಂಗ್ಲಾದೇಶ, ನೇಪಾಳ ಮತ್ತು ಮಾಲ್ಡೀವ್ಸ್ ಮುಂತಾದ ರಾಷ್ಟ್ರಗಳ ಉನ್ನತ ಅಧಿಕಾರಿಗಳನ್ನು ಒಳಗೊಂಡ ನಿಯೋಗ ಭಾಗವಹಿಸಲಿದೆ. ಚೀನಾದೊಂದಿಗೆ ರಾಜತಾಂತ್ರಿಕ ಸಂಬಂಧವಿಲ್ಲದ ಕಾರಣ ಭೂತಾನ್ ಭಾಗವಹಿಸುತ್ತಿಲ್ಲ.

**ಭಾರತದ ಅಭಿಪ್ರಾಯ:**

ಚೀನಾ-ಪಾಕಿಸ್ತಾನ ಆರ್ಥಿಕ ಕಾರಿಡಾರ್ (ಸಿಪಿಇಸಿ) 3000 ಕಿ.ಮೀ. ಉದ್ದದ ಯೋಜನೆಯಾಗಿದ್ದು, ಪಾಕಿಸ್ತಾನದ ಗ್ವಾಡಾರ್ ಬಂದರು ಮತ್ತು ಚೀನಾದ ಕ್ಸಿನ್ಜಿಯಾಂಗ್ ಪ್ರದೇಶದೊಂದಿಗೆ ಜಲ ಸಂಪರ್ಕವನ್ನು ಕಲ್ಪಿಸುತ್ತದೆ. ಸಿಪಿಇಸಿ ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಗಿಲ್ಗಿಟ್-ಬಾಲ್ಟಿಸ್ತಾನ್ ಪ್ರದೇಶದ ಮೂಲಕ ಹಾದುಹೋಗುತ್ತದೆ. ಈ ವಿವಾದಿತ ಪ್ರದೇಶದಲ್ಲಿ ಚೀನಾದ ಉಪಸ್ಥಿತಿಯು ಭಾರತದ ಸಾರ್ವಭೌಮತ್ವದ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಗ್ವಾಡಾರ್ ಬಂದರು ಮೂಲಕ ಅರಬ್ಬಿ ಸಮುದ್ರ ಮತ್ತು ಹಿಂದೂ ಮಹಾಸಾಗರದಲ್ಲಿ ಚೀನಾ ತನ್ನ ನೌಕಾಪಡೆಯನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದೆ. ಈಗಾಗಲೇ, ಚೀನಾವು ಹಿಂದೂ ಮಹಾಸಾಗರದ ಹಾರ್ನ್ ಆಫ್ ಆಫ್ರಿಕಾದಲ್ಲಿ ಜಿಬೌಟಿಯಲ್ಲಿ ತನ್ನ ನೌಕಾಪಡೆಗಳನ್ನು ನಿಯೋಜಿಸಲು ಯೋಜಿಸಿದೆ.

www.karunaduexams.com

## ಫ್ರಾನ್ಸ್ ನ ನೂತನ ಪ್ರಧಾನಿಯಾಗಿ ಎಡ್ವರ್ಡ್ ಫಿಲಿಪ್ಪೆ ನೇಮಕ



ಫ್ರೆಂಚ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್ ಫ್ರಾನ್ಸ್‌ನ ಹೊಸ ಪ್ರಧಾನಿಯಾಗಿ ಎಡ್ವರ್ಡ್ ಫಿಲಿಪ್ಪೆ ಅವರನ್ನು ನೇಮಕ ಮಾಡಿದ್ದಾರೆ.

- 46 ವರ್ಷದ ಎಡ್ವರ್ಡ್ ಫಿಲಿಪ್ಪೆ ಅವರು ಲಾರ್ಡ್ ಫೇಬಿಯಸ್ (1984 ರಿಂದ 1986) ಅವರ ನಂತರ ಫ್ರಾನ್ಸ್ನ ಎರಡನೇ ಅತಿ ಕಿರಿಯ ಪ್ರಧಾನಿಯಾಗಿದ್ದಾರೆ.
- ಫೇಬಿಯಸ್ ಅವರು ತಮ್ಮ 37ನೇ ವರ್ಷದಲ್ಲಿ ಪ್ರಧಾನಿಯಾಗಿದ್ದರು.
- ಫಿಲಿಪ್ಪೆ 2010 ರಿಂದ ಪೋರ್ಟ್ ಸಿಟಿ ಲೆ ಹಾವ್ರೆಯ ಮೇಯರ್ ಆಗಿದ್ದು, ಲೆಸ್ ರಿಪಬ್ಲಿಕನ್ಸ್ ಪಕ್ಷದ ಸದಸ್ಯರಾಗಿದ್ದಾರೆ.

## ಭಾರತ ಮತ್ತು ಪ್ಯಾಲೇಸ್ತಾನ್ ನಡುವೆ ಐದು ಒಪ್ಪಂದಕ್ಕೆ ಸಹಿ



ಭಾರತ ಮತ್ತು ಪ್ಯಾಲೇಸ್ತಾನ್ ನಡುವೆ ಐದು ಒಪ್ಪಂದಗಳಿಗೆ ಸಹಿ ಹಾಕಲಾಯಿತು. ಭಾರತಕ್ಕೆ 4 ದಿನಗಳ ಕಾಲ ಭೇಟಿ ನೀಡಿರುವ ಪ್ಯಾಲೇಸ್ತಾನ್ ಅಧ್ಯಕ್ಷ ಮಹಮ್ಮದ್ ಅಬ್ಬಾಸ್ ಮತ್ತು ಪ್ರಧಾನಿ ಮೋದಿ ಅವರ ನಡುವೆ ಮಾತುಕತೆ ಬಳಿಕ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಇದು ಭಾರತಕ್ಕೆ ಅಬ್ಬಾಸ್ ಅವರ ಐದನೇ ಭೇಟಿ. ರಾಜತಾಂತ್ರಿಕ ಪಾಸ್ಪೋರ್ಟ್ ಹೊಂದಿರುವವರಿಗೆ ವೀಸಾ ವಿನಾಯತಿ, ಕೃಷಿ ಸಹಕಾರ, ಐಟಿ ಮತ್ತು ಎಲೆಕ್ಟ್ರಾನಿಕ್ಸ್ ಕ್ಷೇತ್ರದಲ್ಲಿ ಸಹಕಾರ, ಆರೋಗ್ಯ ಕ್ಷೇತ್ರ ಮತ್ತು ಯುವ ವ್ಯವಹಾರ ಮತ್ತು ಕ್ರೀಡಾ ಕ್ಷೇತ್ರದಲ್ಲಿ ಸಹಕಾರ ಒಪ್ಪಂದಗಳಿಗೆ ಸಹಿ ಹಾಕಲಾಯಿತು.

**ಇತರೆ ಪ್ರಮುಖಾಂಶಗಳು:**

- ಪ್ಯಾಲೆಸ್ಟೈನ್ ಮತ್ತು ಇಸ್ರೇಲ್ ನಡುವೆ ಮಾತುಕತೆಗಳನ್ನು ಮುಂದುವರೆಸುವಂತೆ ಭಾರತವು ಕರೆ ನೀಡಿದೆ. ಇಸ್ರೇಲ್ನೊಂದಿಗೆ ಶಾಂತಿಯುತವಾಗಿ ಸಹಕರಿಸು ಮೂಲಕ ಸಾರ್ವಭೌಮ, ಸ್ವತಂತ್ರ ಕಾರ್ಯಸಾಧ್ಯವಾದ ಪ್ಯಾಲೆಸ್ಟೈನ್ ಅನ್ನು ನಿರ್ಮಿಸುವುದು ಭಾರತ ಆಶಯವಾಗಿದೆ.
- ವಿವಿಧ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಭಾರತಪ್ಯಾಲೇಸ್ತಾನಿನ ಬೆಂಬಲಕ್ಕೆ ನಿಂತಿರುವುದಕ್ಕೆ ಪ್ಯಾಲೇಸ್ತಾನ್ ಅಭಿನಂದಿಸಿದೆ. ಮಧ್ಯಪ್ರಾಚ್ಯದಲ್ಲಿ ಶಾಂತಿ ಪ್ರಕ್ರಿಯೆಯಲ್ಲಿ ಭಾರತ ಪ್ರಮುಖ ಪಾತ್ರವಹಿಸಲಿದೆ ಎಂದು ಪ್ಯಾಲೆಸ್ಟೈನ್ ಭರವಸೆ ವ್ಯಕ್ತಪಡಿಸಿದೆ. ಮಾತುಕತೆ ವೇಳೆ ಪ್ಯಾಲೆಸ್ತಾನಿನ ಅಧ್ಯಕ್ಷರು ಎಲ್ಲಾ ಸ್ವರೂಪಗಳ ಭಯೋತ್ಪಾದನೆಯನ್ನು ಖಂಡಿಸಿದರಲ್ಲದೆ, ಭಯೋತ್ಪಾದನೆಯನ್ನು ಎದುರಿಸಲು ಪ್ರಾದೇಶಿಕ ಮತ್ತು ಅಂತರಾಷ್ಟ್ರೀಯ ಪ್ರಯತ್ನಗಳಿಗೆ ಕರೆ ನೀಡಿದರು.

**ಭಾರತ-ಪ್ಯಾಲೇಸ್ತಾನ್ ಸಂಬಂಧ:**

ಭಾರತ ಮತ್ತು ಪ್ಯಾಲೆಸ್ಟೈನ್ ದೀರ್ಘಕಾಲದ ಸ್ನೇಹವನ್ನು ಹೊಂದಿವೆ. 1947 ರಲ್ಲಿ, ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯಲ್ಲಿ ಭಾರತ ಪ್ಯಾಲೇಸ್ತಾನ್ ವಿಭಜನೆಯ ವಿರುದ್ದ ತನ್ನ ಮತವನ್ನು

www.karunaduexams.com

ಚಲಾಯಿಸಿತು. 1974 ರಲ್ಲಿ, PLOವನ್ನು ಪ್ಯಾಲೆಸ್ತಾನ್ ಜನರ ಏಕೈಕ ಮತ್ತು ಕಾನೂನುಬದ್ಧ ಪ್ರತಿನಿಧಿಯಾಗಿ ಗುರುತಿಸಿದ ಮೊದಲ ನಾನ್-ಅರಬ್ ರಾಷ್ಟ್ರ ಭಾರತ. 2012 ರಲ್ಲಿ, ಭಾರತವು ಪ್ಯಾಲೇಸ್ತಾನ್ಗೆ "ನಾನ್ ಮೆಂಬರ್" ಸ್ಥಾನಮಾನ ದೊರೆಕಿಸಲು ಪ್ರಮುಖ ಪಾತ್ರವಾಹಿಸಿತ್ತು. ಕಾರಣವಾಯಿತು. 2014 ರಲ್ಲಿ, ಯುಎನ್ ಮಾನವ ಹಕ್ಕು ಮಂಡಳಿಯಲ್ಲಿ ಭಾರತವು ಪ್ಯಾಲೆಸ್ಟೈನ್ ಪರವಾಗಿ ಮತ ಚಲಾಯಿಸಿದೆ. 2015ರಲ್ಲಿ ವಿಶ್ವಸಂಸ್ಥೆಯಲ್ಲಿ ಇತರೆ ಸದಸ್ಯ ರಾಷ್ಟ್ರಗಳ ಧ್ವಜಗಳಂತೆ ಪ್ಯಾಲೇಸ್ತಾನ್ ಧ್ವಜವನ್ನು ಅಳವಡಿಸಲು ಭಾರತ ಬೆಂಬಲಿಸಿದೆ.

## ಇರಾನ್ ಅಧ್ಯಕ್ಷರಾಗಿ ಹಸನ್ ರೌಹನಿ ಮರು ಆಯ್ಕೆ



ಹಸನ್ ರೌಹಾನಿ ಅವರು ಇರಾನಿನ ಅಧ್ಯಕ್ಷರಾಗಿ ಮರು ಆಯ್ಕೆಯಾಗಿದ್ದಾರೆ. ರೌಹನಿ 2013 ರಲ್ಲಿ ತಮ್ಮ ಮೊದಲ ಅವಧಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಇರಾನಿನ ಪ್ರತ್ಯೇಕತೆಯನ್ನು ಅಂತ್ಯಗೊಳಿಸಲು ಮತ್ತು ದೇಶದಲ್ಲಿ ನಾಗರಿಕ ಹಕ್ಕುಗಳ ಸುಧಾರಣೆಯನ್ನು ಪ್ರತಿಪಾದಿಸುವ ಮೂಲಕ 2013ರ ಚುನಾವಣೆಯಲ್ಲಿ ಜಯಗಳಿಸಿದರು. ರೌಹಾನಿ ಅವರು ಸೆಹ್ನಾನ್ ಪ್ರಾಂತ್ಯದಲ್ಲಿ ನವೆಂಬರ್ 12, 1948 ರಂದು ಜನಿಸಿದರು. ಟೆಹ್ರಾನ್ ವಿಶ್ವವಿದ್ಯಾಲಯದಿಂದ ಪದವಿ ಪಡೆದಿದ್ದು, ಸ್ಕಾಟ್ಲೆಂಡ್ನ ಗ್ಲ್ಯಾಸ್ಗೋ ಕ್ಯಾಲೆಡೋನಿಯನ್ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ ಪಡೆದಿದ್ದಾರೆ. 68 ವರ್ಷ ವಯಸ್ಸಿನ ರೌಹಾನಿ ವಕೀಲ, ಶಿಕ್ಷಣ ತಜ್ಞ ಮತ್ತು ಮಾಜಿ ರಾಜತಾಂತ್ರಿಕರಾಗಿದ್ದಾರೆ.

ರೌಹನಿ 1980-88 ಇರಾನ್-ಇರಾಕ್ ಯುದ್ದದ ಸಮಯದಲ್ಲಿ ರಕ್ಷಣಾ ಕ್ಷೇತ್ರದಲ್ಲಿ ಪ್ರಮುಖ ಸ್ಥಾನಗಳನ್ನು ನಿರ್ವಹಿಸಿದ್ದರು. ಇರಾನಿನ ಅತ್ಯುನ್ನತ ಭದ್ರತಾ ಹುದ್ದೆಯಾದ ಸುಪ್ರೀಂ ನ್ಯಾಷನಲ್ ಸೆಕ್ಯುರಿಟಿ ಕೌನ್ಸಿಲ್ನ ಕಾರ್ಯದರ್ಶಿಯಾಗಿ 16 ವರ್ಷಗಳ ಕಾಲ ಕಾರ್ಯನಿರ್ವಹಿಸಿದ್ದಾರೆ.. ಪಾಶ್ಚಿಮಾತ್ಯ ರಾಷ್ಟ್ರಗಳೊಂದಿಗೆ ಇರಾನಿನ ಸಂಬಂಧಗಳನ್ನು ಪುನರ್ನಿರ್ಮಿಸಲು ರೌಹಾನಿ ನಿರಂತರವಾಗಿ ಕೆಲಸ ಮಾಡಿದರು. ಸೆಪ್ಟೆಂಬರ್ 2013ರಲ್ಲಿ ಅಮೆರಿಕ ಅಧ್ಯಕ್ಷ ಬರಾಕ್ ಒಬಾಮಾ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದ ಇರಾನಿನ ಮೊದಲ ಮುಖಂಡ.

www.karunaduexams.com

## ಜೇಮ್ಸ್ ಬಾಂಡ್ ಖ್ಯಾತಿಯ ರೋಜರ್ ಮೂರೆ ನಿಧನ



ಜೇಮ್ಸ್ ಬಾಂಡ್ ಪಾತ್ರಗಳಿಂದ ಪ್ರಸಿದ್ಧರಾದ ಬ್ರಿಟಿಷ್ ನಟ ರೋಜರ್ ಮೂರೆ (89) ಅವರು ಸ್ವಿಜರ್ ಲ್ಯಾಂಡ್ ನಲ್ಲಿ ನಿಧನರಾಗಿದ್ದಾರೆ. ಮೂರೆ ಅವರು 1973ರಿಂದ 1985ರ ಜೇಮ್ಸ್ ಬಾಂಡ್ ಪಾತ್ರದ 7 ಚಿತ್ರಗಳಲ್ಲಿ ಅಭಿನಯಿಸಿದ್ದರು. 'Live and Let Die', "A view to Kill" ಮತ್ತು 'The Spy Who Loved Me' ಚಿತ್ರಗಳಲ್ಲಿ ಮೂರೆ ಅಭಿನಯಿಸಿ ಮೋಡಿ ಮಾಡಿದ್ದರು.

- ದಕ್ಷಿಣ ಲಂಡನ್ ನ್ನಿನ ಸ್ಟಾಕ್ ವೇಕ್ ನಲ್ಲಿ ಮೂರೆ ಜನಿಸಿದ್ದ ಬಾಂಡ್ ಸಿನಿಮಾದ ಜೊತೆಗೆ ಕಿರುತೆರೆಯಲ್ಲೂ ಕೂಡ ತಮ್ಮ ಛಾಪು ಮೂಡಿಸಿದ್ದರು.
- ಮೂರೆ ಅವರು 'ಮೈ ವರ್ಡ್ ಇಸ್ ಮೈ ಬಾಂಡ್' ಸೇರಿದಂತೆ ಎರಡು ಆತ್ಮಕತೆಗಳನ್ನು ಬರೆದಿದ್ದರು.
- ಮೂರೆ ಅವರು 1962 ರಿಂದ 1969 ರವರೆಗೆ ಖ್ಯಾತ ಟಿವಿ ಸರಣಿ ಕಾರ್ಯಕ್ರಮ "ದಿ ಸೇಂಟ್"ನಲ್ಲಿ ಸಿಮೊನ್ ಟೆಂಪ್ಲರ್ ಪಾತ್ರದಲ್ಲಿ ಜನರನ್ನು ರಂಜಿಸಿದ್ದರು.

## ಭಾರತ ಮತ್ತು ಸ್ಪೇನ್ ನಡುವೆ ಏಳು ಒಪ್ಪಂದಗಳಿಗೆ ಸಹಿ



ಪ್ರಧಾನಿ ನರೇಂದ್ರ ಮೋದಿ ಮತ್ತು ಸ್ಪ್ಯಾನಿಷ್ ಮುಖಂಡ ಮೇರಿಯಾನೊ ರಾಜಾಯ್ ನಡುವೆ ಸ್ಪ್ಯಾನಿಷ್ ರಾಜಧಾನಿಯಾದ ಮಾಂಕ್ಲೋವಾದ ಅರಮನೆಯಲ್ಲಿ ನಡೆದ ಮಾತುಕತೆ ನಂತರ ಭಾರತ ಮತ್ತು ಸ್ಪೇನ್ ಏಳು ಒಪ್ಪಂದಗಳಿಗೆ ಸಹಿ ಹಾಕಿವೆ. ಸುಮಾರು 30ವರ್ಷಗಳ ನಂತರ ಭಾರತದ ಪ್ರಧಾನಿಯೊಬ್ಬರು ಸ್ಪೇನ್ಗೆ ಭೇಟಿ ನೀಡಿದ್ದು ವಿಶೇಷ. 1988 ರಲ್ಲಿ ರಾಜೀವ್ ಗಾಂಧಿ ರವರು ಸ್ಪೇನ್ಗೆ ಭೇಟಿ ನೀಡಿದ್ದ ಭಾರತದ ಕೊನೆಯ ಪ್ರಧಾನಿ. ಈ ಮುಂಚೆ ಪ್ರಧಾನಿ ಮೋದಿ ಮತ್ತು ಸ್ಪ್ಯಾನಿಷ್ ಪ್ರಧಾನ ಮಂತ್ರಿ ರವರು ನವೆಂಬರ್ 2015ರಲ್ಲಿ ಟರ್ಕಿಯಲ್ಲಿ ನಡೆದ ಜಿ 20 ಶೃಂಗಸಭೆಯಲ್ಲಿ ಭೇಟಿ ಆಗಿದ್ದರು.

ಪ್ರಧಾನಿ ನರೇಂದ್ರ ಮೋದಿ ಅವರು ಸ್ಪೇನ್ ನ ಮೂಲಭೂತ ಸೌಕರ್ಯ, ಪ್ರವಾಸೋದ್ಯಮ, ಇಂದನ ಮತ್ತು ರಕ್ಷಣಾ ಕಂಪನಿಗಳನ್ನು ಭಾರತದ ಆದ್ಯತೆ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಲು ಭೇಟಿ ವೇಳೆ ಸ್ವಾಗತಿಸಿದರು. ಸ್ಪೇನ್ ಯುರೋಪಿಯನ್ ಒಕ್ಕೂಟದಲ್ಲಿ ಭಾರತದ 7 ನೇ ಅತಿ ದೊಡ್ಡ ವ್ಯಾಪಾರ ಪಾಲುದಾರಿಕೆ ರಾಷ್ಟ್ರವಾಗಿದೆ. ಎರಡೂ ದೇಶಗಳ ನಡುವಿನ ದ್ವಿಪಕ್ಷೀಯ ವ್ಯಾಪಾರವು 2016 ರಲ್ಲಿ 5.27 ಬಿಲಿಯನ್ ಡಾಲರ್ಗಳಷ್ಟಿತ್ತು.

www.karunaduexams.com

**ಸಹಿ ಹಾಕಲಾದ ಒಪ್ಪಂದಗಳು**:

- ಪರಸ್ಪರ ಖೈದಿಗಳ ವರ್ಗಾವಣೆಗೆ ಸಂಬಂಧಿಸಿದ ಒಪ್ಪಂದ
- ಅಂಗಾಂಗ ಕಸಿ ಮಾಡುವಿಕೆಗೆ ಪರಸ್ಪರ ಸಹಕಾರ
- ಸೈಬರ್ ಭದ್ರತೆಯಲ್ಲಿ ಪರಸ್ಪರ ಸಹಕಾರಕ್ಕೆ ಒಪ್ಪಂದ
- ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಪರಸ್ಪರ ಸಹಕಾರಕ್ಕೆ ಒಪ್ಪಂದ
- ನಾಗರಿಕ ವಿಮಾನಯಾನ ಕ್ಷೇತ್ರದಲ್ಲಿ ತಾಂತ್ರಿಕ ಸಹಕಾರಕ್ಕೆ ಒಪ್ಪಂದ
- ರಾಜತಾಂತ್ರಿಕ ಪಾಸ್ ಪೋರ್ಟ್ ಹೊಂದಿರುವವರಿಗೆ ವೀಸಾ ವಿನಾಯಿತಿ
- ಫಾರಿಸ್ ಸರ್ವೀಸ್ ಇನ್ಸ್ಟಿಟ್ಯೂಟ್ ಮತ್ತು ಡಿಪ್ಲೊಮೆಟಿಕ್ ಅಕಾಡೆಮಿ ಆಫ್ ಇಂಡಿಯಾ ನಡುವೆ ಒಪ್ಪಂದ.

www.karunaduexams.com

**ಏಲ್ಯಾಂಡರ್ 10: ವಿಶ್ವದ ಅತಿ ದೊಡ್ಡ ವಿಮಾನನೌಕೆ ಯಶಸ್ವಿ ಪ್ರಯೋಗಾರ್ಥ ಪರೀಕ್ಷೆ**




ಏರ್ಲೆಂಡರ್ 10, ವಿಶ್ವದ ಅತಿ ದೊಡ್ಡ ವಿಮಾನನೌಕೆ ಯುನೈಟೆಡ್ ಕಿಂಗ್ಡಮ್ನ ಕಾರ್ಡಿಂಗ್ಟನ್ನಲ್ಲಿ ಒಟ್ಟು 180 ನಿಮಿಷಗಳ ಕಾಲ ವಿಮಾನ ಹಾರಾಟವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಪರೀಕ್ಷಾ ಹಾರಾಟದ ಸಂದರ್ಭದಲ್ಲಿ, ವಿಮಾನ ನಿಯಂತ್ರಿಸುವ ಮತ್ತು ಸುಧಾರಿತ ಲ್ಯಾಂಡಿಂಗ್ ತಂತ್ರಜ್ಞಾನವನ್ನು ಪರೀಕ್ಷಿಸಲಾಯಿತು. ಆ ಮೂಲಕ ವಾಣಿಜ್ಯ ಬಳಕೆಗೆ ಸನಿಹವಾಗಿದೆ.

**ಏಲ್ಯಾಂಡರ್ 10:**

ಏಲ್ಯಾಂಡರ್ 10 ಹೈಬ್ರಿಡ್ ನೌಕೆ ಅಂದರೆ ಇದು ಭಾಗಶಃ ವಿಮಾನ ಮತ್ತು ಹೀಲಿಯಂ ಅನಿಲ ತುಂಬಿದ ಭಾಗಶಃ ವಾಯುನೌಕೆಯಾಗಿದೆ. ಇದು ವಿಮಾನ, ಹೆಲಿಕಾಪ್ಟರ್ ಮತ್ತು ವಾಯುನೌಕೆಗಳ ತಂತ್ರಜ್ಞಾನಗಳ ಸಂಯೋಜನೆಯಿಂದ ವಿನ್ಯಾಸಗೊಳಿಸಲಾಗಿದೆ. ಇದು 92 ಮೀಟರ್ ಉದ್ದ ಮತ್ತು 43.5ಮೀ ಅಗಲವಿದೆ. ಗಂಟೆಗೆ 148 ಕಿಲೋಮೀಟರ್ ವೇಗದಲ್ಲಿ 6,100 ಮೀಟರ್ಗಳವರೆಗೆ ಹಾರಬಲ್ಲದಾಗಿದೆ. ಇದು 10-ಟನ್ ತೂಕವನ್ನು ಹೊತ್ತೊಯ್ಯುವ ಸಾಮರ್ಥವನ್ನು ಹೊಂದಿದೆ. ಮಾನವ ಸಹಿತ ಐದು ದಿನಗಳ ವರೆಗೆ ಹಾಗೂ ಮಾನವ ರಹಿತವಾಗಿ ಎರಡು ವಾರಗಳಿಗಿಂತಲೂ ಮೇಲ್ಪಟ್ಟು ವಾಯುಮಂಡಲದಲ್ಲಿ ಸ್ಥಿರವಾಗಿ ನಿಲ್ಲಲಿದೆ. ಇದನ್ನು ಮೊದಲ ಬಾರಿಗೆ US ಸರ್ಕಾರವು ಕಣ್ಗಾವಲು ವಿಮಾನವೆಂದು ಅಭಿವೃದ್ಧಿಪಡಿಸಿತು, ಆದರೆ ರಕ್ಷಣಾ ಯೋಜನೆಗಳಿಗೆ ಅನುದಾನವನ್ನು ಕಡಿತಗೊಳಿಸಿದ್ದಕ್ಕಾಗಿ ಯೋಜನೆಯನ್ನು ಸ್ಥಗಿತಗೊಳಿಸಲಾಯಿತು.

**<u>ಮೇ 31: ವಿಶ್ವ ತಂಬಾಕು ವಿರೋಧಿ ದಿನ</u>**




ವಿಶ್ವದಾದ್ಯಂತ ತಂಬಾಕು ವಿರೋಧಿ ದಿನವನ್ನು ಪ್ರತಿ ವರ್ಷ ಮೇ 31 ರಂದು ಆಚರಿಸಲಾಗುತ್ತದೆ. ತಂಬಾಕು ಸೇವನೆಯನ್ನು ಕಡಿಮೆ ಮಾಡಲು ಪರಿಣಾಮಕಾರಿಯಾದ ನೀತಿಗಳನ್ನು ಜಾರಿಗೊಳಿಸುವುದು ಹಾಗೂ ತಂಬಾಕು ಸೇವನೆಯಿಂದ ಆರೋಗ್ಯದ ಮೇಲಾಗುವ ಅಪಾಯಕಾರಿ ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲು ಈ ದಿನವನ್ನು ಆಚರಿಸಲಾಗುತ್ತದೆ. 1988 ರಲ್ಲಿ, WHOದ ವಿಶ್ವ ಆರೋಗ್ಯ ಅಸೆಂಬ್ಲಿಯಲ್ಲಿ ಮೇ 31 ರಂದು ಪ್ರತಿ ವರ್ಷ ವಿಶ್ವ ತಂಬಾಕು ದಿನವನ್ನು ಆಚರಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ಅಲ್ಲಿಂದೀಚೆಗೆ ವಿಶ್ವ ಆರೋಗ್ಯ ಸಂಸ್ಥೆ ತಂಬಾಕು ವಿರೋಧಿ ದಿನ (ಡಬ್ಲ್ಯುಎನ್ಟಿಡಿ)ವನ್ನು ಪ್ರತಿವರ್ಷ ಆಚರಿಸಲು ಬೆಂಬಲ ನೀಡುತ್ತಿದೆ. WHO ಗುರುತಿಸಿರುವ ಎಂಟು ಅಧಿಕೃತ ಜಾಗತಿಕ ಸಾರ್ವಜನಿಕ ಆರೋಗ್ಯ ಅಭಿಯಾನಗಳಲ್ಲಿ ಇದು ಸಹ ಒಂದಾಗಿದೆ.

**ಪ್ರಮುಖಾಂಶಗಳು**:

ವಿಶ್ವ ಆರೋಗ್ಯ ಸಂಸ್ಥೆಯ ವರದಿ ಪ್ರಕಾರ ಧೂಮಪಾನ ಮತ್ತು ತಂಬಾಕು ಬಳಕೆಯು ಪ್ರತಿವರ್ಷ 7 ಮಿಲಿಯನ್ ಜನರ ಸಾವಿಗೆ ಕಾರಣವಾಗಿದೆ. ಆದ್ದರಿಂದ ತಂಬಾಕು ವಿಶ್ವದಲ್ಲಿ ತಡೆಗಟ್ಟಬಹುದಾದ ಸಾವಿನ ಕಾರಣವಾಗಿ ಹೊರಹೊಮ್ಮಿದೆ. 2030 ರ ಹೊತ್ತಿಗೆ, ತಂಬಾಕು ಕಂಪೆನಿಗಳಿಂದ ಹೆಚ್ಚು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ 80% ರಷ್ಟು ಸಾವು ಸಂಭವಿಸಲಿದೆ ಎಂದು ಅಂದಾಜಿಸಲಾಗಿದೆ.

ತಂಬಾಕು ಉತ್ಪಾದನೆ, ವಿತರಣೆ ಮತ್ತು ತ್ಯಾಜ್ಯದಿಂದ ಪರಿಸರದ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಇದೇ ಮೊದಲ ಬಾರಿಗೆ ತಂಬಾಕು ಬಳಕೆಯಿಂದ ಪರಿಸರದ ಮೇಲಾಗುವ ಪರಿಣಾಮದ ಬಗ್ಗೆ ವರದಿಯಲ್ಲಿ ತಿಳಿಸಲಾಗಿದೆ. ಅನೇಕ ರಾಷ್ಟ್ರಗಳಲ್ಲಿ ಅರಣ್ಯನಾಶದ ಹಿಂದಿನ ಮುಖ್ಯ ಕಾರಣವೆಂದರೆ ತಂಬಾಕು ಕೃಷಿ. ತಂಬಾಕು ಉದ್ಯಮ ವಾರ್ಷಿಕವಾಗಿ ಸುಮಾರು ನಾಲ್ಕು ಮಿಲಿಯನ್ ಟನ್ ಕಾರ್ಬನ್ ಡೈಆಕ್ಸೈಡ್ ಅನ್ನು ಹೊರಸೂಸುತ್ತದೆ ಎಂದು ವರದಿ ಅಂದಾಜಿಸಿದೆ.

**<u>ಅಂತಾರಾಷ್ಟ್ರೀಯ ಸೌರ ಒಕ್ಕೂಟ ಚೌಕಟ್ಟು ಒಪ್ಪಂದವನ್ನು ಅನುಮೋದಿಸಿದ “ನೌರು” ರಾಷ್ಟ್ರ</u>**



ಪ್ರಪಂಚದ ಅತ್ಯಂತ ಚಿಕ್ಕ ಗಣರಾಜ್ಯವಾದ “ಐಲ್ಯಾಂಡ್ ಆಫ್ ನೌರು” ಅಂತಾರಾಷ್ಟ್ರೀಯ ಸೌರ ಒಕ್ಕೂಟ (ISA) ಚೌಕಟ್ಟು ಒಪ್ಪಂದವನ್ನು ಅನುಮೋದಿಸಿದೆ. ಆ ಮೂಲಕ ಈ ಒಪ್ಪಂದವನ್ನು ಅನುಮೋದಿಸಿದ ಆರನೇ ರಾಷ್ಟ್ರ ಎನಿಸಿದೆ. ಗಾಂಧಿನಗರದಲ್ಲಿ ನಡೆಯುತ್ತಿರುವ ಆಫ್ರಿಕಾ ಅಭಿವೃದ್ಧಿ ಬ್ಯಾಂಕಿನ ವಾರ್ಷಿಕ ಸಭೆಯಲ್ಲಿ ಅಂತಾರಾಷ್ಟ್ರೀಯ ಸೌರ ಒಕ್ಕೂಟ (ISA) ಚೌಕಟ್ಟು ಒಪ್ಪಂದವನ್ನು ಅನುಮೋದಿಸಲು

ಐದು ರಾಷ್ಟ್ರಗಳಾದ ಕೊಮೊರೊಸ್, ಕೋಟ್ ಡಿ ಐವೊಯಿರ್, ಸೊಮಾಲಿಯಾ, ಘಾನಾ ಮತ್ತು ಜಿಬೌಟಿ ಒಪ್ಪಿವೆ. ಆಫ್ರಿಕಾ ಅಭಿವೃದ್ಧಿ ಬ್ಯಾಂಕಿನ ವಾರ್ಷಿಕ ಸಭೆಯನ್ನು ಭಾರತವು ಮೊದಲ ಬಾರಿಗೆ ಆಯೋಜಿಸುತ್ತಿದೆ. 1983ರಲ್ಲಿ ಭಾರತವು ಆಫ್ರಿಕಾ ಅಭಿವೃದ್ಧಿ ಬ್ಯಾಂಕಿಗೆ ಸದಸ್ಯ ರಾಷ್ಟ್ರವಾಗಿ ಸೇರ್ಪಡೆಗೊಂಡಿದೆ.

**ನೌರು**:

ನೌರು ರಾಷ್ಟ್ರ ಆಸ್ಟ್ರೇಲಿಯಾದ ಈಶಾನ್ಯ ದಿಕ್ಕಿನಲ್ಲಿರುವ ಮೈಕ್ರೋನೇಶಿಯಾದಲ್ಲಿ ಒಂದು ಸಣ್ಣ ದ್ವೀಪ ಗಣರಾಜ್ಯವಾಗಿದೆ. ನೌರು ಸರಿ ಸುಮಾರು 10,200 ಜನಸಂಖ್ಯೆಯನ್ನು ಹೊಂದಿದೆ. ದ್ವೀಪದ ಅತ್ಯಧಿಕ ಎತ್ತರದ ಪ್ರದೇಶ ಸಮುದ್ರ ಮಟ್ಟಕ್ಕಿಂತ 65 ಮೀಟರ್ಗಳಷ್ಟಿದೆ. ಹಾಗಾಗಿ, ಹವಾಮಾನ ಬದಲಾವಣೆಯ ದುಷ್ಪರಿಣಾಮ ದ್ವೀಪದಲ್ಲಿ ಸರ್ವೇಸಾಮಾನ್ಯ. ನೌರು ದೇಶವು ತನ್ನ ಶಕ್ತಿಯ ಅವಶ್ಯಕತೆಗಳಲ್ಲಿ ಸುಮಾರು 30% ರಷ್ಟು ಸೌರ ವಿದ್ಯುತ್ ಸ್ಥಾಪನೆಯ ಮೂಲಕ ಭರಿಸುತ್ತಿದೆ. ಈ ಸಣ್ಣ ರಾಷ್ಟ್ರ 2020ರೊಳಗೆ ನವೀಕರಿಸಬಹುದಾದ ಮೂಲಗಳಿಂದ ಶೇಕಡ 50 ರಷ್ಟು ಶಕ್ತಿಯ ಉತ್ಪಾದನೆ ಹೊಂದುವ ಗುರಿಯನ್ನು ಹೊಂದಿದೆ.

**ಅಂತಾರಾಷ್ಟ್ರೀಯ ಸೌರ ಒಕ್ಕೂಟ**:

Cconference of Parties-21 (COP-21) ಶೃಂಗಸಭೆಯ ಮೊದಲ ದಿನದಂದು, ಭಾರತೀಯ ಪ್ರಧಾನಿ ನರೇಂದ್ರ ಮೋದಿ ಮತ್ತು ಫ್ರೆಂಚ್ ಅಧ್ಯಕ್ಷ ಫ್ರಾಂಕೋಯಿಸ್ ಹಾಲಾಂಡೆ ಅವರು ಹೇರಳವಾದ ಸೌರ ಶಕ್ತಿಯನ್ನು ಹೊಂದಿರುವ ದೇಶಗಳ ಒಕ್ಕೂಟವಾಗಿ ಅಂತಾರಾಷ್ಟ್ರೀಯ ಸೌರ ಒಕ್ಕೂಟವನ್ನು ಪ್ರಾರಂಭಿಸಿದರು. ಈ ಮೈತ್ರಿ ಅಡಿಯಲ್ಲಿ, ಉಷ್ಣವಲಯದ ವ್ಯಾಪ್ತಿಯಲ್ಲಿ ಬರುವ 121 ದೇಶಗಳಲ್ಲಿ ಸೌರ ಶಕ್ತಿಯನ್ನು ಬಳಸಿಕೊಂಡು ವಿದ್ಯುತ್ ಉತ್ಪಾದಿಸುವ ಪ್ರಯತ್ನಕ್ಕೆ ಸಹಕಾರ ನೀಡಲು ಆಹ್ವಾನಿಸಲಾಗಿದೆ. ಈ ದೇಶಗಳಲ್ಲಿ ಹೆಚ್ಚಿನವು ಏಷ್ಯಾ, ಆಫ್ರಿಕಾ ಮತ್ತು ದಕ್ಷಿಣ ಅಮೆರಿಕಾದಲ್ಲಿವೆ. ಅಂತರರಾಷ್ಟ್ರೀಯ ಸೌರ ಒಕ್ಕೂಟ ಮೂರು ಉದ್ದೇಶಗಳನ್ನು ಒಳಗೊಂಡಿದೆ. ಮೊದಲನೆಯದಾಗಿ ಬೇಡಿಕೆಯನ್ನು ಹೆಚ್ಚಿಸುವ ಮೂಲಕ ಬೆಲೆಯನ್ನು ತಗ್ಗಿಸುವುದು; ಎರಡನೆಯದು ಸೌರ ತಂತ್ರಜ್ಞಾನಗಳನ್ನು ಪ್ರಮಾಣೀಕರಿಸುವುದು ಮತ್ತು ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಉತ್ತೇಜಿಸುವುದು.

## WHO ಡೈರೆಕ್ಟರ್ ಜನರಲ್ ಆಗಿ ಡಾ. ಟೆಡ್ರೊಸ್ ಅಹಾನೊಮ್ ಘೆಬ್ರೆಯೆಸುಸ್ ನೇಮಕ



ಇಥೋಪಿಯಾದ ಮಾಜಿ ಆರೋಗ್ಯ ಸಚಿವ ಡಾ. ಟೆಡ್ರೊಸ್ ಅಹಾನೊಮ್ ಘೆಬ್ರೆಯೆಸುಸ್ ರವರು ವಿಶ್ವ ಆರೋಗ್ಯ ಸಂಸ್ಥೆಯ ನೂತನ ಡೈರೆಕ್ಟರ್-ಜನರಲ್ ಆಗಿ ನೇಮಕಗೊಂಡಿದ್ದಾರೆ. ಮತದಾನ ಪ್ರಕ್ರಿಯೆಯಲ್ಲಿ ವಿಶ್ವಆರೋಗ್ಯ ಸಂಸ್ಥೆಯ ಎಲ್ಲಾ ಸದಸ್ಯ ರಾಷ್ಟ್ರಗಳು ಭಾಗವಹಿಸುವಿಕೆ ಮೂಲಕ ಗಮನ ಸೆಳೆದಿದ್ದು ವಿಶೇಷವಾಗಿತ್ತು. ಡಾ. ಟೆಡ್ರುಸ್ ಅಹಾನೊಮ್ ಘೆಬ್ರೆಯೆಸುಸ್ ರವರು ಇಬ್ಬರು ಸ್ಪರ್ಧಿಗಳಾದ ಯುಕೆಯ ಡಾ. ಡೇವಿಡ್ ನಬರೋ ಮತ್ತು ಪಾಕಿಸ್ತಾನದ ಡಾ. ಸಾನಿಯಾ ನಿಶ್ತಾರ್ ಸೋಲಿಸಿ ನೇಮಕಗೊಂಡಿದ್ದಾರೆ.

**ಡಾ. ಟೆಡ್ರೊಸ್:**

ಡಾ ಟೆಡ್ರೊಸ್ ಅವರು ಇಥಿಯೋಪಿಯಾದ ವಿದೇಶಾಂಗ ವ್ಯವಹಾರಗಳ ಸಚಿವರಾಗಿ (2012-2016) ಮತ್ತು ಆರೋಗ್ಯ ಸಚಿವರಾಗಿ (2005-2012) ಕಾರ್ಯನಿರ್ವಹಿಸಿದ್ದಾರೆ. "ಬೋರ್ಡ್ ಆಫ್ ದಿ ಗ್ಲೋಬಲ್ ಫಂಡ್ ಟು ಫೈಟ್ ಏಡ್ಸ್, ಟ್ಯುಬರ್ಕ್ಯುಲೊಸಿ ಅಂಡ್ ಮಲೇರಿಯಾದ ಅಧ್ಯಕ್ಷರಾಗಿದ್ದಾರೆ. ಅಲ್ಲದೇ "ರೋಲ್ ಬ್ಯಾಕ್ ಮಲೇರಿಯಾ (ಆರ್ಬಿಎಂ)" ಮಂಡಳಿಯ ಅಧ್ಯಕ್ಷರಾಗಿ ಸಹ ಸೇವೆ ಸಲ್ಲಿಸಿದ್ದಾರೆ.

**ವಿಶ್ವ ಆರೋಗ್ಯ ಸಂಸ್ಥೆ**:

ವಿಶ್ವ ಆರೋಗ್ಯ ಸಂಸ್ಥೆ (WHO) ವಿಶ್ವಸಂಸ್ಥೆಯ ವಿಶೇಷ ಸಂಸ್ಥೆಯಾಗಿದ್ದು ಅಂತರಾಷ್ಟ್ರೀಯ ಸಾರ್ವಜನಿಕ ಆರೋಗ್ಯದ ಮೇಲೆ ಸಹಕಾರ ನೀಡುವ ಅಧಿಕಾರವನ್ನು ಹೊಂದಿದೆ. 1948ರ ಏಪ್ರಿಲ್ 7 ರಂದು ವಿಶ್ವ ಆರೋಗ್ಯ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. WHOದ ಕೇಂದ್ರ ಕಚೇರಿ ಜಿನೀವಾದಲ್ಲಿದೆ.

# ಪ್ರಶಸ್ತಿಗಳು

www.karunaduexams.com

## ಸ್ವಚ್ಛ ನಗರ ಪಟ್ಟಿ: ಇಂಧೋರ್ ಗೆ ಪ್ರಥಮ ಸ್ಥಾನ



ಸ್ವಚ್ಛ ಸರ್ವೇಕ್ಷಣ ಸಮೀಕ್ಷೆ-2017 ವರದಿಯನ್ನು ಕೇಂದ್ರ ನಗರ ಅಭಿವೃದ್ಧಿ ಸಚಿವ ವೆಂಕಯ್ಯ ನಾಯ್ಡು ಅವರು ಬಿಡುಗಡೆಗೊಳಿಸಿದ್ದಾರೆ. ಸಮೀಕ್ಷೆಯಲ್ಲಿ ಇಂಧೋರ್ ದೇಶದ ಅತ್ಯಂತ ಸ್ವಚ್ಛ ನಗರ ಎಂಬ ಖ್ಯಾತಿಗೆ ಪಾತ್ರವಾಗಿದ್ದರೆ, ಉತ್ತರ ಪ್ರದೇಶದ ಗೊಂಡ ದೇಶದ ಕೊಳಕು ನಗರ ಎನಿಸಿದೆ. ಒಂದು ಲಕ್ಷಕ್ಕೂ ಅಧಿಕ ಜನಸಂಖ್ಯೆ ಇರುವ 434 ನಗರಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿತ್ತು. ಕಳೆದ ವರ್ಷ ಸಮೀಕ್ಷೆಯಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ 73 ನಗರಗಳಲ್ಲಿ ಮಾತ್ರ ಸಮೀಕ್ಷೆ ನಡೆಸಲಾಗಿತ್ತು. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸಮೀಕ್ಷೆಗೆ ವಿರೋಧ ವ್ಯಕ್ತಪಡಿಸಿದ ಕಾರಣ ಪಶ್ಚಿಮ ಬಂಗಾಳದ ಪಟ್ಟಣ ಹಾಗೂ ನಗರಗಳನ್ನು ಸಮೀಕ್ಷೆಗೆ ಒಳಪಡಿಸಿರಲಿಲ್ಲ.

**ರಾಜ್ಯ ಪ್ರಮುಖಾಂಶಗಳು:**

- ಕರ್ನಾಟಕದ ಒಟ್ಟು 27 ನಗರ/ಟೌನ್ ಪ್ರದೇಶಗಳಲ್ಲಿ ಸಮೀಕ್ಷೆ ನಡೆಸಲಾಗಿದೆ. ಸ್ವಚ್ಛ ನಗರಗಳ ಟಾಪ್ 50ರ ಪಟ್ಟಿಯಲ್ಲಿ ಕರ್ನಾಟಕದ ಮೈಸೂರು ಮಾತ್ರ ಸ್ಥಾನ ಪಡೆದಿದೆ. 2016ರಲ್ಲಿ 38ನೇ ಸ್ಥಾನದಲ್ಲಿದ್ದ ಬೆಂಗಳೂರು 210ಕ್ಕೆ ತೃಪ್ತಿಪಟ್ಟಿಕೊಂಡಿದೆ.
- 54 ನೇ ಸ್ಥಾನದಲ್ಲಿದ್ದ ಹುಬ್ಬಳ್ಳಿ–ಧಾರವಾಡ 199ಕ್ಕೆ ಇಳಿದಿದ್ದರೆ ಮಂಗಳೂರು 63ರಲ್ಲಿ ಕಾಣಿಸಿಕೊಂಡಿದೆ.
- **ರಾಜ್ಯದ ಟಾಪ್ ಹತ್ತು ಸ್ವಚ್ಛ ನಗರಗಳು:**

- ಮೈಸೂರು(5ನೇಸ್ಥಾನ) ಮಂಗಳೂರು(63), ಉಡುಪಿ(143), ಶಿವಮೊಗ್ಗ(147), ಮಂಡ್ಯ (148), ತುಮಕೂರು(152), ಗದಗ–ಬೆಟಗೇರಿ(167), ಹುಬ್ಬಳ್ಳಿ–ಧಾರವಾಡ(199), ಬಾಗಲಕೋಟೆ(203), ಬೆಂಗಳೂರು(210).
- **ಟಾಪ್ ಹತ್ತು ಸ್ವಚ್ಛ ನಗರಗಳು:**
- ಇಂಧೋರ್ (1), ಭೋಪಾಲ್ (2), ವಿಶಾಖಪಟ್ಟಣ (3), ಸೂರತ್ (4), ಮೈಸೂರು (5), ತಿರುಚರಪಲ್ಲಿ (6), ನವ ದೆಹಲಿ ಮುನಿಸಿಪಲ್ ಕೌನ್ಸಿಲ್ (7), ಮುಂಬೈ (8), ತಿರುಪತಿ (9) ಮತ್ತು ವಡೊದರ (10).
- **ಕೊನೆಯ ಹತ್ತು ಸ್ಥಾನ ಪಡೆದಿರುವ ನಗರಗಳು(434–424):**
- ಗೊಂಡಾ(ಉತ್ತರ ಪ್ರದೇಶ)(434), ಭುಸವಾಲ್(ಮಹಾರಾಷ್ಟ್ರ), ಬಗಹಾ(ಬಿಹಾರ), ಹರದೋಯಿ(ಉತ್ತರಾಖಂಡ), ಕಟಿಹಾರ್(ಬಿಹಾರ), ಬಹರಾಯಿಚ್(ಉತ್ತರ ಪ್ರದೇಶ) ಮುಕ್ತ್‌ಸರ್(ಪಂಜಾಬ್), ಅಬೋಹರ್(ಪಂಜಾಬ್), ಷಹಜಹಾನ್‌ಪುರ್(ಉತ್ತರ ಪ್ರದೇಶ), ಖುರ್ಜಾ(ಉತ್ತರ ಪ್ರದೇಶ).

## <u>ವಿಸ್ಡನ್-ಎಂಸಿಸಿ ವರ್ಷದ ಛಾಯಾಗ್ರಾಹಕ ಪ್ರಶಸ್ತಿಗೆ ಕಾಶ್ಮೀರದ ಸಾಕ್ವಿ ಮಜೀದ್ ಆಯ್ಕೆ</u>



ಕಾಶ್ಮೀರ ಮೂಲದ ಛಾಯಾಗ್ರಾಹಕ ಸಾಕ್ವಿ ಮಜೀಬ್ ಅವರಿಗೆ ಪ್ರತಿಷ್ಠಿತ "ವಿಸ್ಡನ್-ಎಂಸಿಸಿ ವರ್ಷದ ಛಾಯಾಗ್ರಾಹಕ" ಪ್ರಶಸ್ತಿ ಲಭಿಸಿದೆ. ಶ್ರೀನಗರದ ಹೊರವಲಯದಲ್ಲಿರುವ ನಿಶಾತ್ ತೋಟದಲ್ಲಿ ಕ್ರಿಕೆಟ್ ಆಡುವ ಹುಡುಗರ ಚಿತ್ರವನ್ನು ಅದ್ಭುತವಾಗಿ ಸೆರೆಹಿಡಿದಿರುವುದಕ್ಕೆ ಈ ಪ್ರಶಸ್ತಿ ಲಭಿಸಿದೆ. ಆ ಮೂಲಕ ಸಾಕ್ವಿ ಅವರು ಈ ಪ್ರಶಸ್ತಿಯನ್ನು ಪಡೆದ ಏಷ್ಯಾದ ಎರಡನೇ ವ್ಯಕ್ತಿ ಹಾಗೂ ಕಾಶ್ಮೀರದ ಮೊದಲಿಗೆ ಎಂಬ ಗೌರವಕ್ಕೆ ಪಾತ್ರವಾಗಿದ್ದಾರೆ.

- ಅತುಲ್ ಕಾಂಬ್ಳೆ ಅವರು ಈ ಪ್ರಶಸ್ತಿಯನ್ನು ಪಡೆದ ಏಷ್ಯಾದ ಮೊದಲಿಗ.
- ಸಾಕ್ವಿ ಮಜೀಬ್ ಅವರು ವೃತ್ತಿಯಲ್ಲಿ ಎಂಜನಿಯರ್ ಆಗಿದ್ದಾರೆ.
- ಪ್ರತಿ ವರ್ಷ ಮೆಲ್ಬೋರ್ನ್ ಕ್ರಿಕೆಟ್ ಕ್ಲಬ್ (ಎಂಸಿಸಿ) "ವಿಸ್ಡೆನ್ ಕ್ರಿಕೆಟರ್ ಅಲ್ಮ್ಯಾಕ್" ಹೆಸರಿನ ಪುಸ್ತಕವನ್ನು ಪ್ರಕಟಿಸುತ್ತಿದೆ. ಕ್ರಿಕೆಟ್ ಕ್ರೀಡೆಗೆ ಸಂಬಂಧಿಸಿದ ಅದ್ಭುತ ಫೋಟೊಗಳನ್ನು ಈ ಪುಸ್ತಕ ಒಳಗೊಂಡಿರಲಿದೆ. ಈ ವರ್ಷದ ಪುಸ್ತಕವು ಸಾಕ್ವಿ ಮಜೀದ್ ಅವರು ಸೆರೆಹಿಡಿದಿರುವ ಫೋಟೊವನ್ನು ಒಳಗೊಂಡಿದೆ.

## ಹಾಲಿವುಡ್ ನಟಿ ಎಮ್ಮಾ ವ್ಯಾಟನ್ಸ್ ಗೆ ಪ್ರಪ್ರಥಮ ಲಿಂಗಧಾರ ರಹಿತ ಪ್ರಶಸ್ತಿ



ಎಂಟಿವಿ ಮೂವಿ ಮತ್ತು ಟಿವಿ ಪ್ರಶಸ್ತಿಯಲ್ಲಿ ಹಾಲಿವುಡ್ ನಟಿ ಎಮ್ಮಾ ವ್ಯಾಟ್ಸನ್ ಅತ್ಯುತ್ತಮ ನಟಿ ವಿಭಾಗದಲ್ಲಿ ಮೊದಲ ಬಾರಿಗೆ ಲಿಂಗಧಾರ ರಹಿತ (Genderless) ನಟನೆ ಪ್ರಶಸ್ತಿಯನ್ನು ಪಡೆದು ಕೊಂಡಿದ್ದಾರೆ.

- ಲಿಂಗವನ್ನು ಆಧರಿಸಿದೆ ಪ್ರತ್ಯೇಕವಾಗಿ ನಾಮಕರಣಗೊಳ್ಳದ ಮೊದಲ ಲಿಂಗಧಾರ ರಹಿತ ಪ್ರಶಸ್ತಿಯಾಗಿದೆ.
- 2017ರ ಎಪ್ರಿಲ್ 7, 2017 ರಂದು ಕ್ಯಾಲಿಫೋರ್ನಿಯಾದ ಲಾಸ್ ಏಂಜಲೀಸ್ನಲ್ಲಿ ಎಂಟಿವಿ ಮೂವಿ & ಟಿವಿ ಪ್ರಶಸ್ತಿಯ ಆವೃತ್ತಿಯನ್ನು ಆಯೋಜಿಸಲಾಗಿತ್ತು. ಇದು ಪ್ರಶಸ್ತಿಯ 26 ನೇ ಆವೃತ್ತಿಯಾಗಿದೆ.
- ಎಮ್ಮಾ ವ್ಯಾಟ್ಸನ್ ಒಬ್ಬ ಬ್ರಿಟಿಷ್ ನಟಿ, ರೂಪದರ್ಶಿ ಮತ್ತು ಕಾರ್ಯಕರ್ತೆ. ಹ್ಯಾರಿ ಪಾಟರ್ ಫಿಲ್ಮ್ ಸರಣಿಯಲ್ಲಿ ಹರ್ಮಿಯೋನ್ ಗ್ರ್ಯಾಂಗರ್ ಪಾತ್ರದಲ್ಲಿ ಅವರು ಹೆಸರುವಾಸಿಯಾಗಿದ್ದಾರೆ.

## ಸಂಜಯ್ ಪ್ರತಿಹಾರ್ ರವರಿಗೆ INSA ಯುವ ವಿಜ್ಞಾನಿ ಪ್ರಶಸ್ತಿ



ಅಸ್ಸಾಂನ ತೇಜ್ಪುರ ವಿಶ್ವವಿದ್ಯಾಲಯದ ವಿಜ್ಞಾನಿ ಸಂಜಯ್ ಪ್ರತಿಹಾರ್ ರವರಿಗೆ ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿ ನೀಡುವ ಯುವ ವಿಜ್ಞಾನಿ-2017 ಪ್ರಶಸ್ತಿ ಲಭಿಸಿದೆ. "ಬಹು-ಲೋಹದ ಸಂಕೀರ್ಣಗಳು, ಸೈದ್ಧಾಂತಿಕ ತಿಳುವಳಿಕೆ, Hq2 + ಅಯಾನುಗಳ ಆಯ್ದ ಸಂವೇದನೆ ಮತ್ತು ಕೃಷಿಯಲ್ಲಿನ ಪ್ರಮುಖ ಅನ್ವಯಿಕೆಗಳಿಗೆ" ನೀಡಿದ ಕೊಡುಗೆಗಾಗಿ ಈ ಪ್ರಶಸ್ತಿಯನ್ನು ನೀಡಲಾಗಿದೆ. ಸಂಜಯ್ ಪ್ರತಿಹಾರ್ ಅವರು ಆರ್ಗನಿಕ್ ಕೆಮಿಸ್ಟ್ರಿಯಲ್ಲಿ ಪಿ.ಎಚ್.ಡಿ ಪದವಿಯನ್ನು ಐಐಟಿ, ಖರಗಪುರದಿಂದ ಪಡೆದಿದ್ದಾರೆ.

- 2012ರಲ್ಲಿ DST-INSPIRE Faculty ಪ್ರಶಸ್ತಿಯನ್ನು ಸಂಜಯ್ ಅವರು ಪಡೆದುಕೊಂಡಿದ್ದಾರೆ.
- INSA ಪ್ರಶಸ್ತಿಯು ಕಂಚಿನ ಪದಕ ಹಾಗೂ ರೂ 25,0000 ಗಳನ್ನು ಒಳಗೊಂಡಿದೆ.
- ಡಿಸೆಂಬರ್ ನಲ್ಲಿ ನಡೆಯಲಿರುವ INSA ವಾರ್ಷಿಕ ಸಭೆಯಲ್ಲಿ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗುವುದು.

**ಪ್ರಶಸ್ತಿಯ ಬಗ್ಗೆ:**

- ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿ ಈ ಪ್ರಶಸ್ತಿಯನ್ನು 1974ರಲ್ಲಿ ಸ್ಥಾಪಿಸಿದೆ. ಅಂದಿನಿಂದ ಪ್ರತಿ ವರ್ಷ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಕೊಡುಗೆ ನೀಡುವ ಯುವ ವಿಜ್ಞಾನಿಗಳಿಗೆ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

www.karunaduexams.com

## 2016ನೇ ಸಾಲಿನ ಟಿಯೆಸ್ಸಾರ್ ಪ್ರಶಸ್ತಿಗೆ ನಾಗೇಶ ಹೆಗಡೆ ಆಯ್ಕೆ



ರಾಜ್ಯ ಸರ್ಕಾರ ಕೊಡಮಾಡುವ ಟಿಯೆಸ್ಸಾರ್ ಪ್ರಶಸ್ತಿ 2016ನೇ ಸಾಲಿಗೆ ಹಿರಿಯ ಪತ್ರಕರ್ತ ನಾಗೇಶ ಹೆಗಡೆ ಭಾಜನರಾಗಿದ್ದಾರೆ. ಇದೇ ವೇಳೆ ಮೊಹರೆ ಹಣಮಂತರಾಯ ಪ್ರಶಸ್ತಿಗೆ ಗಂಗಾಧರ ಹಿರೇಗುತ್ತಿ ಅವರನ್ನು ಆಯ್ಕೆ ಮಾಡಲಾಗಿದೆ. ಗಂಗಾಧರ ಹಿರೇಗುತ್ತಿ ರವರು ಕಾರವಾರದ 'ಕರಾವಳಿ ಮುಂಜಾವು' ಪತ್ರಿಕೆ ಸಂಪಾದಕ. ಮೊಹರೆ ಹಣಮಂತರಾಯ ಪ್ರಶಸ್ತಿಯನ್ನು ಪತ್ರಿಕಾ ಸಂಸ್ಥೆ ಕಟ್ಟಿ ಬೆಳೆಸಿದವರಿಗೆ ನೀಡಲಾಗುತ್ತಿದೆ.

- ನಿವೃತ್ತ ನ್ಯಾಯಾಧೀಶರಾದ ಇಂದ್ರಕಲಾ ಅಧ್ಯಕ್ಷತೆಯ ಸಮಿತಿ ಇವರುಗಳನ್ನು ಪ್ರಶಸ್ತಿಗೆ ಆಯ್ಕೆ ಮಾಡಿದೆ.
- ಜುಲೈ 1ರಂದು ಪತ್ರಿಕಾ ದಿನಾಚರಣೆ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.
- ಈ ಪ್ರಶಸ್ತಿಗಳು ತಲಾ ₹ 1 ಲಕ್ಷ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.
- ವಿಜ್ಞಾನ ಹಾಗೂ ಪರಿಸರ ಪತ್ರಿಕೋದ್ಯಮದಲ್ಲಿ ಪರಿಣತಿ ಪಡೆದಿರುವ ನಾಗೇಶ ಹೆಗಡೆ 'ಪ್ರಜಾವಾಣಿ'ಯ ಅಂಕಣಕಾರರಾಗಿದ್ದಾರೆ.

## ಸಂಜಯ್ ಗುಬ್ಬಿಮತ್ತು ಪೂರ್ಣಿಮಾ ದೇವಿ ಬರ್ಮನ್ ಅವರಿಗೆ "ವೈಟ್ಲಿ ಪ್ರಶಸ್ತಿ"




ಕರ್ನಾಟಕದ ಸಂಜಯ್ ಗುಬ್ಬಿ ಮತ್ತು ಅಸ್ಸಾಂನ ಪೂರ್ಣಿಮಾ ಬರ್ಮಾನ್ ಅವರಿಗೆ ವನ್ಯಜೀವಿ ಸಂರಕ್ಷಣೆಯಲ್ಲಿ ಕೊಡುಗೆಗಾಗಿ ಪ್ರತಿಷ್ಠಿತ ವೈಟ್ಲಿ ಪ್ರಶಸ್ತಿ ಲಭಿಸಿದೆ. ವೈಟ್ಲಿ ಪ್ರಶಸ್ತಿಯನ್ನು "ಗ್ರೀನ್ ಆಸ್ಕರ್" ಎಂದೇ ಕರೆಯಲಾಗುತ್ತದೆ. 66 ದೇಶಗಳಿಂದ 169 ಅಭ್ಯರ್ಥಿಗಳ ಪೈಕಿ ಆಯ್ಕೆಯಾದ ಎಂಟು ಜನರಲ್ಲಿ ಇಬ್ಬರು ಭಾರತೀಯರು.

ಪೂರ್ಣಿಮಾ ದೇವಿ ಬರ್ಮನ್ ಅವರನ್ನು ಗ್ರೇಟರ್ ಅಡ್ಜುಟೆಂಟ್ ತಳಿಯ ಕೊಕ್ಕರೆ (ಹರ್ಗಿಲಾ) ಮತ್ತು ಅದರ ಆವಾಸಸ್ಥಾನದ ಸಂರಕ್ಷಣೆಯ ಪ್ರಯತ್ನಗಳಿಗಾಗಿ ಆಯ್ಕೆ ಮಾಡಲಾಗಿದೆ. ಬರ್ಮನ್ ಅವರು ಕೊಕ್ಕರೆಗಳ ಸಂರಕ್ಷಣೆಗಾಗಿ ಕಾಮ್ರುಪ್ ಜಿಲ್ಲೆಯ ಮೂರು ಹಳ್ಳಿಗಳಲ್ಲಿ ಮಹಿಳೆಯರ ಜಾಲವನ್ನು ಸೃಷ್ಟಿಸಿದ್ದಾರೆ. ಗ್ರೇಟರ್ ಅಡ್ಜುಟೆಂಟ್ ತಳಿ ಕೊಕ್ಕರೆಗಳು ಜಾಗತಿಕವಾಗಿ 1200-1800 ರಷ್ಟಿದೆ. ಇವುಗಳಲ್ಲಿ ಸುಮಾರು 800 ಅಸ್ಸಾಂನಲ್ಲಿ ಮತ್ತು 150 ಬಿಹಾರದಲ್ಲಿ ಕಾಣಸಿಗುತ್ತವೆ.

ಕರ್ನಾಟಕದಲ್ಲಿ ಹುಲಿ ಕಾರಿಡಾರ್ಗಳನ್ನು ಸಂರಕ್ಷಿಸುತ್ತಿರುವ ಕಾರ್ಯಕ್ಕೆ ಸಂಜಯ್ ಗುಬ್ಬಿ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಜೀವಶಾಸ್ತ್ರಜ್ಞ ಮತ್ತು ವಿಜ್ಞಾನಿ ಆಗಿರುವ ಗುಬ್ಬಿ ಅವರು ಮೈಸೂರು ಮೂಲದ ನೇಚರ್ ಕನ್ಸರ್ವೇಷನ್ ಫೌಂಡೇಶನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಗುಬ್ಬಿ ಅವರು ರಾಜ್ಯ ವನ್ಯಜೀವಿಗಳ ಮಂಡಳಿಯ ಸದಸ್ಯರು ಸಹ ಆಗಿದ್ದಾರೆ. 1970 ರಿಂದ ಭಾರತದಲ್ಲಿ

www.karunaduexams.com

ಸಂರಕ್ಷಿತ ಪ್ರದೇಶಗಳ ಅತಿದೊಡ್ಡ ವಿಸ್ತರಣೆಯನ್ನು ಸಾಧಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಕರ್ನಾಟಕದಲ್ಲಿ ಸಂರಕ್ಷಿತ ಪ್ರದೇಶಗಳ ಗಾತ್ರವನ್ನು ಶೇ 37% ಹೆಚ್ಚಿಸುವಲ್ಲಿ ಅವರ ಕೊಡುಗೆ ಅಪಾರ.

**ವೈಟ್ಲಿ ಪ್ರಶಸ್ತಿ:**

ಯುಕೆ ಮೂಲದ ವೈಟ್ಲಿ ಫಂಡ್ ಫಾರ್ ನೇಚರ್ ಈ ಪ್ರಶಸ್ತಿಯನ್ನು ನೀಡುತ್ತಿದೆ. ಪರಿಸರ ಮತ್ತು ವನ್ಯಜೀವಿಗಳ ಸಂರಕ್ಷಣೆಗೆ ಗಣನೀಯ ಕೊಡುಗೆ ನೀಡಿದವರನ್ನು ಪ್ರೋತ್ಸಾಹಿಸಲು ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಪ್ರಶಸ್ತಿಯು ₹29ಲಕ್ಷ ನಗದು ಪುರಸ್ಕಾರ ಒಳಗೊಂಡಿದೆ.

## ಭಾರತದ ವಿದ್ಯಾರ್ಥಿಗೆ ಇಂಟೆಲ್ ಇಂಟರ್ನ್ಯಾಷನಲ್ ಸೈನ್ಸ್ ಅವಾರ್ಡ್



ಪ್ರೌಢಶಾಲಾ ಮಟ್ಟದ ಅತೀ ದೊಡ್ಡ ಅಂತಾರಾಷ್ಟ್ರೀಯ ವಿಜ್ಞಾನ ಸ್ಪರ್ಧೆ ಹಾಗೂ ಎಂಜಿನಿಯರಿಂಗ್ ಸಮಾವೇಶದಲ್ಲಿ ಬೆಂಗಳೂರಿನ ಸಾಹಿತಿ ಪಿಂಗಳಿ ಹಾಗೂ ಉಡುಪಿಯ ಚೈತನ್ಯ ಹಾಗೂ ಗೀವ್ ಜಾರ್ಜ್ ಪ್ರಶಸ್ತಿ ಪಡೆದಿದ್ದಾರೆ.ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ 'ಕೆರೆಗಳ ನಿಗಾ ವ್ಯವಸ್ಥೆ' ಅಭಿವೃದ್ಧಿಪಡಿಸಿದಕ್ಕಾಗಿ 'ಪರಿಸರ ವಿಜ್ಞಾನ ವಿಭಾಗ'ದಲ್ಲಿ ಬೆಂಗಳೂರಿನ ಇನ್‌ವೆಂಚರ್ ಅಕಾಡೆಮಿಯ ವಿದ್ಯಾರ್ಥಿನಿ ಈ ಪ್ರಶಸ್ತಿ ಪಡೆದಿದ್ದಾರೆ.

- 'ಸ್ಮಾರ್ಟ್‌ಫೋನ್ ಆಧರಿತ, ಮಲ್ಟಿಸ್ಪೆಕ್ಟ್ರಲ್ ಇಮೇಜಿಂಗ್ ಸಿಸ್ಟಮ್' ಕಂಡುಹಿಡಿದ ಉಡುಪಿಯ ಲಿಟಲ್ ರಾಕ್ ಇಂಡಿಯನ್ ಸ್ಕೂಲ್‌ನ ಚೈತನ್ಯ ಹಾಗೂ ಗ್ರೀವ್ ಜಾರ್ಜ್ ಪ್ರತಿಷ್ಠಿತ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.
- ಪರಿಸರ ಎಂಜಿನಿಯರಿಂಗ್ ವಿಭಾಗದಲ್ಲಿ ಜೈವಿಕ ವಿದಳನ ಕಂಡುಹಿಡಿದ ಜೆಮ್‌ಶೆಡ್‌ಪುರದ 12ನೇ ತರಗತಿ ವಿದ್ಯಾರ್ಥಿ ಪ್ರಶಾಂತ್ ರಂಗನಾಥನ್ ಪ್ರಶಸ್ತಿ ಪಡೆದಿದ್ದಾರೆ. 'ನೈಸರ್ಗಿಕ ಬ್ಯಾಕ್ಟೀರಿಯಾವನ್ನು ಬಳಸಿಕೊಂಡು ಕ್ಲೋರಿಪಿರಿಫೊಸ್ನ ಜೈವಿಕ ವಿಘಟನೆ' ಎಂಬ ಶೀರ್ಷಿಕೆಯ ಯೋಜನೆಯು ರೈತರಿಗೆ ಹಾನಿಕಾರಕ ಕೀಟನಾಶಕಗಳನ್ನು ಜೈವಿಕವಾಗಿಸಲು ಸಹಾಯ ಮಾಡುವ ಗುರಿಯನ್ನು ಹೊಂದಿದೆ.

www.karunaduexams.com

## ಕೆ ಗೋವಿಂದಭಟ್ಟರಿಗೆ ಸಂಗೀತ ನಾಟಕ ಅಕಾಡೆಮಿ ಪುರಸ್ಕಾರ



ಪ್ರಸಕ್ತ 2016ನೇ ಸಾಲಿನ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪ್ರಕಟ ವಾಗಿದ್ದು, ತೆಂಕುತಿಟ್ಟು ಯಕ್ಷಗಾನದ ಮೇರು ಕಲಾವಿದ ಸೂರಿಕುಮೇರಿ ಕೆ. ಗೋವಿಂದ ಭಟ್ಟರಿಗೆ ಲಭಿಸಿದೆ. ಇವರು ಈ ಸಾಲಿನ ಪ್ರಶಸ್ತಿ ಪುರಸ್ಕೃತರಾದವರ ಪೈಕಿ ಕರ್ನಾಟಕದ ಏಕೈಕ ಯಕ್ಷಗಾನ ಕಲಾವಿದರು. ತೆಂಕುತಿಟ್ಟಿನಲ್ಲಿ ಕೋಳ್ಯೂರು ರಾಮಚಂದ್ರ ರಾಯರಿಗೆ ಈ ಗೌರವ ಸಂದಿತ್ತು. ಗೋವಿಂದ ಭಟ್ಟರು 66 ವರ್ಷಗಳ ಕಾಲ ಯಕ್ಷಗಾನ ತಿರುಗಾಟದ ಅನುಭವ ಹೊಂದಿದ್ದು, 50 ವರ್ಷ ಗಳ ಕಾಲ ಧರ್ಮಸ್ಥಳ ಮೇಳವೊಂದ ರಲ್ಲೇ ಕಲಾಸೇವೆ ಮಾಡಿದ ಗೌರವಕ್ಕೆ ಪಾತ್ರರಾಗಿದ್ದಾರೆ. ಒಟ್ಟು 43 ಮಂದಿಗೆ ಪುರಸ್ಕಾರ ದೊರೆತಿದ್ದು, ಅಸ್ಸಾಂನ ಗುವಾಹಾಟಿ ಯಲ್ಲಿ ನಡೆದ ಅಕಾಡೆಮಿ ಸಭೆಯಲ್ಲಿ ಆಯ್ಕೆ ಮಾಡಲಾಗಿದೆ. ಸಂಗೀತ, ನಾಟಕ, ರಂಗಭೂಮಿ, ಜನಪದ, ಗೊಂಬೆಕುಣಿತ ಮೊದಲಾದ ಪ್ರಕಾರ ಗಳಿಗೆ ಈ ಗೌರವ ನೀಡಲಾಗುತ್ತದೆ. ಪ್ರಶಸ್ತಿ 1 ಲಕ್ಷ ರೂ. ನಗದು, ತಾಮ್ರ ಪತ್ರ ಒಳಗೊಂಡಿದೆ. ವಯಲಿನ್ ವಾದಕ ಮೈಸೂರಿನ ಎಂ. ಮಂಜು ನಾಥ್ ಕೂಡ ಈ ಬಾರಿಯ ಪ್ರಶಸ್ತಿ ಪುರಸ್ಕೃತರ ಸಾಲಿನಲ್ಲಿದ್ದಾರೆ.

ಸಂಗೀತ ನಾಟಕ ಅಕಾಡೆಮಿ ಪುರಸ್ಕಾರ (ಅಕಾಡೆಮಿ ಪ್ರಶಸ್ತಿ) ಸಂಗೀತ ನಾಟಕ ಅಕಾಡೆಮಿಯಿಂದ ನೀಡಲ್ಪಡುವ ಪ್ರಶಸ್ತಿಯಾಗಿದೆ. ಕಲೆನಿರತ ಕಲಾವಿದರನ್ನು ಗೌರವಿಸಲು ನೀಡಲಾಗುವ ಅತ್ಯುನ್ನತ ಪ್ರಶಸ್ತಿ ಇದಾಗಿದೆ. ಸಂಗೀತ, ನೃತ್ಯ, ರಂಗಭೂಮಿ, ಇತರ ಸಾಂಪ್ರದಾಯಿಕ ಕಲೆಗಳು ಮತ್ತು ತೊಗಲು ಬೊಂಬೆಗಳ ವಿಭಾಗಗಳಲ್ಲಿ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ.

www.karunaduexams.com

# ಪರಿಸರ

**ಮೇ 22: ವಿಶ್ವ ಜೀವ ವೈವಿಧ್ಯ ದಿನ (World Biological Diversity Day)**

ಪ್ರತಿ ವರ್ಷ, ಮೇ 22 ಅನ್ನು ಅಂತಾರಾಷ್ಟ್ರೀಯ ಜೀವವೈವಿಧ್ಯ ಅಥವಾ ವಿಶ್ವ ಜೀವ ವೈವಿಧ್ಯ ದಿನವೆಂದು ಆಚರಿಸಲಾಗುತ್ತದೆ. ಮೇ 22, 1992 ರಂದು ನೈರೋಬಿಯ UNEP ಪ್ರಧಾನ ಕಚೇರಿಯಲ್ಲಿ ಜೈವಿಕ ವೈವಿಧ್ಯದ ಒಪ್ಪಂದದ ಅಳವಡಿಸಿಕೊಳ್ಳಲಾಯಿತು. 2000ರಲ್ಲಿ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿ ನಿರ್ಣಯ ಸಂಖ್ಯೆ 55/201 ರಂತೆ ಮೇ 22ರಂದು ವಿಶ್ವ ಜೀವ ವೈವಿಧ್ಯ ದಿನವನ್ನು ಆಚರಿಸಲು ತೀರ್ಮಾನಿಸಲಾಯಿತು. ಈ ಹಿಂದೆ ಡಿಸೆಂಬರ್ 29ರಂದು ಅಂತಾರಾಷ್ಟ್ರೀಯ ಜೀವವೈವಿಧ್ಯ ದಿನವನ್ನು ಆಚರಿಸಲಾಗುತ್ತಿತ್ತು.

**ಥೀಮ್**:

ವಿಶ್ವ ಜೀವವೈವಿಧ್ಯ ದಿನ-2017 ರ ಥೀಮ್ "ಜೀವವೈವಿಧ್ಯ ಮತ್ತು ಸುಸ್ಥಿರ ಪ್ರವಾಸೋದ್ಯಮ" ಆಗಿದೆ. ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿ 2017ನೇ ವರ್ಷವನ್ನು ರ "ಸುಸ್ಥಿರ ಪ್ರವಾಸೋದ್ಯಮ ಅಭಿವೃದ್ಧಿ ಅಂತಾರಾಷ್ಟ್ರೀಯ ವರ್ಷವೆಂದು" ಘೋಷಿಸಿದ್ದು, ಅದಕ್ಕೆ ಪೂರಕವಾಗಿ ಈ ಥೀಮ್ ಹೊಂದಾಣಿಕೆಯಾಗಿದೆ. ಜೀವವೈವಿಧ್ಯತೆಯ ವಿನಾಶವನ್ನು ಕಡಿಮೆ ಮಾಡಿ ಉತ್ತೇಜಿಸಲು 2011-20 ದಶಕವನ್ನು ವಿಶ್ವಸಂಸ್ಥೆಯ ಜೀವವೈವಿಧ್ಯತೆ ದಶಕ ಎಂದು ವಿಶ್ವಸಂಸ್ಥೆ ಘೋಷಿಸಿದೆ.

**ಜೀವ ವೈವಿಧ್ಯತೆ:**

ಜೀವ ವೈವಿಧ್ಯತೆ ಎಂಬ ಪದವನ್ನು ಮೊದಲ ಬಾರಿಗೆ 1968 ರಲ್ಲಿ ವನ್ಯಜೀವಿ ವಿಜ್ಞಾನಿ ಮತ್ತು ಸಂರಕ್ಷಕ ರೇಮಂಡ್ ಎಫ್. ಡಸ್ಮಾನ್ ಅವರು ಸೃಷ್ಟಿಸಿದರು. ಈ ಪದವು 1980ರ ದಶಕದಲ್ಲಿ ವ್ಯಾಪಕವಾಗಿ ಬಳಕೆಯಲ್ಲಿತ್ತು. ಜೀವವೈವಿಧ್ಯತೆಯು "ಒಂದು ಪ್ರದೇಶದ ಜೀನ್ಗಳು, ಪ್ರಭೇದಗಳು ಮತ್ತು ಪರಿಸರ ವ್ಯವಸ್ಥೆಗಳ ಸಂಪೂರ್ಣತೆ" ಯನ್ನು ಉಲ್ಲೇಖಿಸುತ್ತದೆ. ಜೀವವೈವಿಧ್ಯತೆಯಲ್ಲಿ ಮೂರು ಹಂತಗಳಿವೆ. ಪ್ರಭೇದ ವೈವಿಧ್ಯತೆ, ಪರಿಸರ ವೈವಿಧ್ಯತೆ ಮತ್ತು ತಳಿ ವೈವಿಧ್ಯತೆ. ಹವಾಮಾನ ಬದಲಾವಣೆ ಯಿಂದಾಗುವ ಪರಿಣಾಮಗಳಾದ ಜೀವಿಗಳ ನಷ್ಟ, ಆವಾಸಸ್ಥಾನಗಳ ನಾಶ, ಆಕ್ರಮಣಶೀಲ ಜಾತಿಗಳು, ಆನುವಂಶಿಕ ಮಾಲಿನ್ಯ, ಶೋಷಣೆ ಮತ್ತು ಪರಿಣಾಮಗಳು ಸೇರಿದಂತೆ ಪರಿಸರ ಸಂರಕ್ಷಣೆಯಲ್ಲಿ ಹಲವಾರು ಸಮಸ್ಯೆಗಳನ್ನು ಪರಿಹರಿಸಲು ಜೀವವೈವಿದ್ಯತೆ ಪದವನ್ನು ಬಳಸಲಾಗುತ್ತದೆ.

www.karunadueyams.com

# ವ್ಯವಹಾರ

**<u>ರಿಯಲ್ ಎಸ್ಟೇಟ್ ಕಾಯಿದೆ ಜಾರಿಗೆ</u>**



ಮನೆ ಖರೀದಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ತಂದು ಗ್ರಾಹಕರ ಹಿತ ರಕ್ಷಣೆ ಕಾಯುವ ಸಲುವಾಗಿ ರೂಪಿಸಲಾಗಿರುವ ರಿಯಲ್ ಎಸ್ಟೇಟ್ ಕಾಯಿದೆ-2016 ಮೇ 1 ರಿಂದ ಜಾರಿಗೆ ಬರಲಿದೆ. ಕೇಂದ್ರ ವಸತಿ ಮತ್ತು ನಗರ ಬಡತನ ನಿರ್ಮೂಲನೆ ಸಚಿವಾಲಯ ಸಾಧ್ಯವಾದಷ್ಟು ಬೇಗ ಕಾಯಿದೆಯನ್ನು ತ್ವರಿತವಾಗಿ ಅನುಷ್ಠಾನಗೊಳಿಸುವಂತೆ ಎಲ್ಲಾ ರಾಜ್ಯಗಳಿಗೆ ಸೂಚಿಸಿದೆ. ಭೂಮಿ ರಾಜ್ಯ ಪಟ್ಟಿಯಲ್ಲಿರುವ ವಿಷಯವಾಗಿರುವುದರಿಂದ ರಾಜ್ಯ ಸರ್ಕಾರಗಳ ಅಡಿ ಬರಲಿದೆ.

ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯಿದೆ-2016 ಕಳೆದ ವರ್ಷ ಮಾರ್ಚ್ ನಲ್ಲಿ ಸಂಸತ್ತಿನ ಅನುಮೋದನೆ ಪಡೆದುಕೊಂಡಿತ್ತು. ಕಾಯಿದೆಯ 92 ಸೆಕ್ಷನ್ ನಲ್ಲಿ 59 ಸೆಕ್ಷನ್ ಗಳು ಕಳೆದ ವರ್ಷ ಮೇ 1 ರಿಂದಲೇ ಜಾರಿಗೆ ಬಂದಿವೆ. ಉಳಿದ ಸೆಕ್ಷನ್ ಗಳು ಇದೀಗ ಜಾರಿಗೆ ಬರಲಿವೆ. ಆಂಧ್ರಪ್ರದೇ, ಉತ್ತರ ಪ್ರದೇಶ, ಬಿಹಾರ ಸೇರಿದಂತೆ 13 ರಾಜ್ಯಗಳಲ್ಲಿ ಈಗಾಗಲೇ ಈ ಕಾಯಿದೆ ಜಾರಿಗೆ ಬಂದಿದೆ.

**ಕಾಯಿದೆಯ ವಿಶಿಷ್ಟತೆ:**

- ಯೋಜನೆಯ ಅಥವಾ ಕಾಯಿದೆಯ ಉಲ್ಲಂಘನೆಯಾದರೆ "ಮೇಲ್ಮನವಿ ನ್ಯಾಯಮಂಡಳಿ ಮತ್ತು ನಿಯಂತ್ರಣ ಪ್ರಾಧಿಕಾರದ ಮೊರೆ ಹೋಗಿ ಪರಿಹಾರ ಪಡೆದುಕೊಳ್ಳಬಹುದಾಗಿದೆ.
- ರಿಯಲ್ ಎಸ್ಟೇಟ್ ಏಜೆಂಟ್ ಗಳು ಹಾಗೂ ಗೃಹ ನಿರ್ಮಾಣ ಯೋಜನೆಗಳನ್ನು ಕಡ್ಡಾಯವಾಗಿ ನೋಂದಣಿ ಮಾಡಿಸಬೇಕು.
- ಗ್ರಾಹಕರಿಂದ ಸಂಗ್ರಹಿಸಿದ ಹಣದ ಶೇ 70ರಷ್ಟನ್ನು ಪ್ರತ್ಯೇಕ ಬ್ಯಾಂಕ್ ಖಾತೆಯಲ್ಲಿ ಠೇವಣಿ ಇಡಬೇಕು ಹಾಗೂ ಈ ಮೊತ್ತವನ್ನು ನಿರ್ಮಾಣ ಕೆಲಸಕ್ಕೆ ಮಾತ್ರ ಬಳಸಬೇಕು.
- ಸಕಾಲದಲ್ಲಿ ಯೋಜನೆ ಪೂರ್ಣಗೊಳಿಸುವುದು ಕಡ್ಡಾಯ
- ಯೋಜನೆ ವಿಳಂಬವಾದರೆ, ಕಟ್ಟಡ ನಿರ್ಮಾಣಗಾರರಿಗೆ ದಂಡ ವಿಧಿಸುವ ಅವಕಾಶವನ್ನು ನೀಡಲಾಗಿದೆ.
- ಯೋಜನೆಗಳ ವಿವರ ಮತ್ತು ಪ್ರಗತಿಯನ್ನು ನಿಯಂತ್ರಣ ಸಂಸ್ಥೆಯ ಅಂತರ್ಜಾಲ ತಾಣದಲ್ಲಿ ಪ್ರಕಟಣೆ ಮಾಡುವುದು ಕಡ್ಡಾಯ.
- ಯೋಜನೆ ವಿಳಂಬವಾದರೆ ಖರೀದಿದಾರ ಪಡೆದ ಬ್ಯಾಂಕ್ ಸಾಲದ ತಿಂಗಳ ಬಡ್ಡಿಯನ್ನು ಕಟ್ಟಡ ನಿರ್ಮಾಣಗಾರ ಭರಿಸಬೇಕು.
- ಮೇಲ್ಮನವಿ ನ್ಯಾಯಮಂಡಳಿ ಮತ್ತು ನಿಯಂತ್ರಣ ಪ್ರಾಧಿಕಾರಗಳ ಆದೇಶ ಉಲ್ಲಂಘಿಸಿದರೆ ಡೆವಲಪರ್ಸ್‌ಗೆ 3 ವರ್ಷ ಮತ್ತು ಏಜೆಂಟ್ ಹಾಗೂ ಖರೀದಿದಾರರಿಗೆ 1 ವರ್ಷ ಜೈಲು ಶಿಕ್ಷೆ

www.karunadueexams.com

- ರಾಜ್ಯಗಳು ಕಡ್ಡಾಯವಾಗಿ ಪ್ರಾಧಿಕಾರ ರಚಿಸಬೇಕು.

**ಮಹತ್ವ:**

ರಿಯಲ್ ಎಸ್ಟೇಟ್ ವಲಯದಲ್ಲಿ ಪಾರದರ್ಶಕತೆ ಮತ್ತು ಜವಾಬ್ದಾರಿಯನ್ನು ತರುವಲ್ಲಿ ಕಾಯಿದೆ ಮಹತ್ವದ ಪಾತ್ರವಹಿಸಲಿದೆ. 'ಕಾಯ್ದೆಯು ರಿಯಲ್ ಎಸ್ಟೇಟ್ ವಹಿವಾಟಿನ ವಿಶ್ವಾಸಾರ್ಹತೆ, ಪಾರದರ್ಶಕತೆ ಮತ್ತು ದಕ್ಷತೆ ಹೆಚ್ಚಿಸಲಿದೆ. ಖರೀದಿದಾರ ಮತ್ತು ಗೃಹ ನಿರ್ಮಾಣ ವಸತಿ ಯೋಜನೆಗಳನ್ನು ಕಾರ್ಯಗತಗೊಳಿಸುವ ಕಟ್ಟಡ ನಿರ್ಮಾಣಗಾರರ ಹಕ್ಕುಗಳು ಮತ್ತು ಕರ್ತವ್ಯಗಳನ್ನು ವ್ಯಾಖ್ಯಾನಿಸಲಿದೆ'. ರಿಯಲ್ ಎಸ್ಟೇಟ್ ವಲಯದಲ್ಲಿ ಪಾರದರ್ಶಕತೆ ಹೆಚ್ಚಿಸಲಿರುವ ಕಾಯ್ದೆಯು, ದೇಶಿ ಮತ್ತು ವಿದೇಶಿ ಹೂಡಿಕೆದಾರರ ಆತ್ಮವಿಶ್ವಾಸ ಹೆಚ್ಚಿಸಲಿದೆ.

**ಕಾಫಿ ಮತ್ತು ಟೀ ಮಂಡಳಿಗೆ ಹೊಸ ಅಧ್ಯಕ್ಷರ ನೇಮಕಕ್ಕೆ ಅಸ್ತು**



ಕೇಂದ್ರ ಕ್ಯಾಬಿನೆಟ್ ನೇಮಕ ಸಮಿತಿ ಟೀ ಮಂಡಳಿ ಹಾಗೂ ಕಾಫಿ ಮಂಡಳಿಯ ಅಧ್ಯಕ್ಷರ ನೇಮಕಾತಿಯನ್ನು ಅನುಮೋದಿಸಿದೆ. ಟೀ ಮಂಡಳಿಯ ಅಧ್ಯಕ್ಷರಾಗಿ ಪ್ರಭಾತ್ ಕಮಲ್ ಬೆಝ್ಬೊರ್ ಹಾಗೂ ಕಾಫಿ ಮಂಡಳಿಯ ಅಧ್ಯಕ್ಷರಾಗಿ ಎಂ.ಎಸ್.ಬೋಜೆ ಗೌಡ ಅವರನ್ನು ನೇಮಕ ಮಾಡಲಾಗಿದೆ. ಪ್ರಭಾತ್ ಕಮಲ್ ಅವರು ಚಹಾ ಒಕ್ಕೂಟದ ಮುಂಚೂಣಿ ಉದ್ಯಮಿ. ಈ ಹಿಂದೆ ಅಮೆರಿಕದಲ್ಲಿ ಬ್ಯಾಂಕರ್ ಆಗಿದ್ದರು. ಪ್ರಸ್ತುತ ಇವರು ಚಹಾ ಸಂಶೋಧನಾ ಒಕ್ಕೂಟದ ಮುಖ್ಯಸ್ಥ ಸಹ ಆಗಿದ್ದಾರೆ. ಅಸ್ಸಾಂ ಟೀ ಬೆಳೆಗಾರರ ಒಕ್ಕೂಟದ ಅಧ್ಯಕ್ಷರು ಸಹ ಆಗಿದ್ದರು.

- ಪ್ರಭಾತ್ ಕಮಲ್ ಅವರು ಟೀ ಮಂಡಳಿಯ ಅಧ್ಯಕ್ಷ ಹುದ್ದೆಯನ್ನು ಅಲಂಕರಿಸಿದ ಮೊದಲ ಐಎಎಸ್ ಯೇತರ ಅಧಿಕಾರಿ.
- ನವೆಂಬರ್ 1, 2018ರ ತನಕ ಇವರು ಅಧಿಕಾರದಲ್ಲಿ ಇರಲಿದ್ದಾರೆ.
- ಕೇಂದ್ರ ಸರ್ಕಾರ ಇತ್ತೀಚೆಗೆ ಹೊರಡಿಸಿರುವ ಅಧಿಸೂಚನೆ ಪ್ರಕಾರ ಕೇಂದ್ರ ವಾಣಿಜ್ಯ ಸಚಿವಾಲಯದಡಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಕೃಷಿ ಮಂಡಳಿಗಳ ಅಧ್ಯಕ್ಷರುಗಳು ಐಎಎಸ್ ಅಲ್ಲದ ಹಾಗೂ ಉದ್ಯಮಿಗಳು ಮಾತ್ರ ಆಗಿರಬೇಕು. ಆದರೆ ಉಪಾಧ್ಯಕ್ಷರುಗಳು ಐಎಎಸ್ ಅಧಿಕಾರಿಗಳು ಆಗಿರತಕ್ಕದ್ದು.

**ಟೀ ಮಂಡಳಿ:**

ಟೀ ಮಂಡಳಿಯ ಕೇಂದ್ರ ಕಚೇರಿ ಕಲ್ಕತ್ತಾದಲ್ಲಿದೆ. ಟೀ ಬೆಳೆಯುವುದು ಹಾಗೂ ರಫ್ತು ಮಾಡುವುದನ್ನು ನಿಯಂತ್ರಿಸುವುದು ಮಂಡಳಿಯ ಪ್ರಮುಖ ಕರ್ತವ್ಯ. ಪ್ರಸ್ತುತ ದೇಶದ ಟೀ ಉದ್ಯಮ ಅಧಿಕ ಉತ್ಪಾದನಾ ವೆಚ್ಚ, ಸಾಮಾಜಿಕ ಜವಾಬ್ದಾರಿ, ಕಾರ್ಮಿಕರ ಸಮಸ್ಯೆ ಹಾಗೂ ವೇತನಗಳ ಸಮಸ್ಯೆಯಿಂದ ಭಾದಿತವಾಗಿದೆ.

**ಎಂ ಎಸ್ ಬೋಜೆಗೌಡ:**

ಪ್ರಖ್ಯಾತ ಕಾಫಿ ಬೆಳೆಗಾರ ಎಂ ಎಸ್ ಬೋಜೆಗೌಡ ಅವರನ್ನು ಕಾಫಿ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಬೋಜೆಗೌಡ ಅವರು ಡಿಸೆಂಬರ್ 14, 2018 ರವರೆಗೆ ಅಧಿಕಾರದಲ್ಲಿ ಇರಲ್ಲಿದ್ದಾರೆ.

www.karunaduexams.com

ಬೆಂಗಳೂರು ಮೂಲಕ ಕಾಫಿ ಮಂಡಳಿ ಕಾಫಿ ಬೆಳೆಗಾರರ ಹಿತಾಸಕ್ತಿಯನ್ನು ಕಾಯುವ ಉದ್ದೇಶವನ್ನು ಹೊಂದಿದೆ.

## **ಅಶಿಸ್ತು ಪ್ರಯಾಣಿಕರ ಮೇಲೆ ನಿಷೇಧ ಹೇರುವ "ನೋ-ಫ್ಲೈ ಪಟ್ಟಿ" ಕರಡು ನಿಯಮ**




ಅಶಿಸ್ತು ಪ್ರಯಾಣಿಕರನ್ನು ನಿಷೇಧಿಸುವ ನಿಟ್ಟಿನಲ್ಲಿ "ನೋ-ಫ್ಲೈ ಪಟ್ಟಿ (No Fly List)" ಕರಡು ನಿಯಮಗಳನ್ನು ಕೇಂದ್ರ ಸರ್ಕಾರ ಬಿಡುಗಡೆಗೊಳಿಸಿದೆ. ಅಂತಿಮ ನಿಯಮಗಳನ್ನು ರೂಪಿಸುವ ಸಲುವಾಗಿ ಕೇಂದ್ರ ವಿಮಾನಯಾನ ಸಚಿವಾಲಯ ಸಮಿತಿಯೊಂದನ್ನು ಸಹ ರಚಿಸಿದೆ. ಹೊಸ ನಿಯಮಗಳ ಬಗ್ಗೆ ಸಲಹೆ/ಆಕ್ಷೇಪಗಳನ್ನು ಸಲ್ಲಿಸಲು ಸಾರ್ವಜನಿಕರಿಗೆ ಒಂದು ತಿಂಗಳ ಕಾಲಾವಧಿಯನ್ನು ನೀಡಲಾಗುವುದು. ಸಲಹೆ/ಆಕ್ಷೇಪಣೆಗಳನ್ನು ಪರಿಶೀಲಿಸಿ, ಸೂಕ್ತ ಸಲಹೆಗಳನ್ನು ಪರಿಗಣಿಸಿ ಅಂತಿಮ ನಿಯಮಗಳನ್ನು ಬಿಡುಗಡೆಗೊಳಿಸಲಾಗುವುದು.

**ಪ್ರಮುಖಾಂಶಗಳು:**

ಮೂರು ಹಂತಗಳಲ್ಲಿ ವಿಮಾನ ಪ್ರಯಾಣ ನಿಷೇಧಿಸುವ ನಿಯಮಗಳನ್ನು ರೂಪಿಸಲಾಗಿದೆ.

**ಹಂತ -**1:

ಭೌತಿಕ ಸನ್ನೆಗಳಂತಹ ವಿಚ್ಛಿದ್ರಕಾರಕ ನಡವಳಿಕೆಗಳನ್ನು ತೋರುವ ಪ್ರಯಾಣಿಕರಿಗೆ ಮೂರು ತಿಂಗಳ ಕಾಲ ನಿಷೇಧ ಹೇರಲಾಗುವುದು.

**ಹಂತ-2:**

ದೈಹಿಕವಾಗಿ ನಿಂದಿಸುವ ಹಾಗೂ ಲೈಂಗಿಕ ಕಿರುಕುಳ ಅಪಾದಿತ ಪ್ರಯಾಣಿಕರ ಮೇಲೆ ಆರು ತಿಂಗಳ ಕಾಲ ವಿಮಾನಯಾನದ ಮೇಲೆ ನಿಷೇಧ ವಿಧಿಸಲಾಗುವುದು.

**ಹಂತ-3**:

ಕೊಲೆ ಬೆದರಿಕೆ,ಮಾರಣಾಂತಿಕ ಹಲ್ಲೆ, ವಿಮಾನ ಕಾರ್ಯಾಚರಣೆಗೆ ಅಡ್ಡಿಪಡಿಸುವವರಿಗೆ 2 ವರ್ಷ ಅಥವಾ ಅದಕ್ಕಿಂತಲೂ ಅಧಿಕ ಅವಧಿಯವರೆಗೆ ವಿಮಾನಯಾನ ರದ್ದುಪಡಿಸಲಾಗುವುದು.

ಈ ಮೇಲಿನ ಎಲ್ಲಾ ನಿಯಮಗಳು ಪ್ರಾದೇಶಿಕ ವಿಮಾನ ಸಂಚಾರಕ್ಕೆ ಮಾತ್ರ ಅನ್ವಯವಾಗಲಿದೆ.

**ಹಿನ್ನಲೆ:**

ಶಿವ ಸೇನಾ ಪಕ್ಷದ ಸಂಸದ ರವೀಂದ್ರ ಗಾಯಕ್ವಾಡ್ ಅವರು ಏರ್ ಇಂಡಿಯಾ ಕಾರ್ಮಿಕನ ಮೇಲೆ ಹಲ್ಲೆ ನಡೆಸಿದ್ದು, ದೇಶದಾದ್ಯಂತ ವಿರೋಧ ವ್ಯಕ್ತವಾದ ಹಿನ್ನಲೆಯಲ್ಲಿ ಹೊಸ ನಿಯಮಗಳನ್ನು ಜಾರಿಗೆ ತರಲು ಕೇಂದ್ರ ಸರ್ಕಾರ ಚಿಂತಿಸಿದೆ.

## **ಫೇಸ್ಬುಕ್ ನಿಂದ "ಎಕ್ಸ್ ಪ್ರೆಸ್ ವೈ-ಫೈ"ಗೆ ಚಾಲನೆ**

ಪ್ರಸಿದ್ಧ ಸಾಮಾಜಿಕ ಜಾಲತಾಣ ಫೇಸ್ಬುಕ್ ಭಾರತದಲ್ಲಿ "ಎಕ್ಸ್ ಪ್ರೆಸ್ ವೈ-ಫೈ" ಅಂತರ್ಜಾಲ ಸೇವೆಗೆ ಚಾಲನೆ ನೀಡಿದೆ. ಪ್ರಸ್ತುತ ಉತ್ತರಖಂಡ,

www.karunaduexams.com

ಗುಜರಾತ್, ರಾಜಸ್ತಾನ ಮತ್ತು ಮೇಘಾಲಯ ಈ ನಾಲ್ಕು ರಾಜ್ಯಗಳ 700 ಸ್ಥಳಗಳಲ್ಲಿ ಈ ಸೇವೆ ಲಭ್ಯವಿದೆ.

ಯೋಜನೆಯನ್ನು ವಿಸ್ತರಿಸುವ ಸಲುವಾಗಿ ಭಾರತಿ ಏರ್ಟೆಲ್ ನೊಂದಿಗೆ ಫೇಸ್ಬುಕ್ ಒಪ್ಪಂದಕ್ಕೆ ಸಹಿಹಾಕಿದೆ. ಈ ಪಾಲುದಾರಿಕೆಯಡಿ ದೇಶದಾದ್ಯಂತ 20000 ಹಾಟ್ ಸ್ಪಾಟ್ ಗಳನ್ನು ಸ್ಥಾಪಿಸುವ ಮೂಲಕ ಮಿಲಿಯನ್ ಭಾರತೀಯರಿಗೆ ಅಂತರ್ಜಾಲ ಸೇವೆಯನ್ನು ಒದಗಿಸಲಾಗುವುದು.

ಭಾರತ ರಾಷ್ಟ್ರವನ್ನು ಹೊರತುಪಡಿಸಿ "ಎಕ್ಸ್ ಪ್ರೆಸ್ ವೈ-ಫೈ" ಸೇವೆಯನ್ನು ಇಂಡೋನೇಷಿಯಾ, ಕೀನ್ಯಾ, ನೈಜೀರಿಯಾ ಮತ್ತು ತಾಂಜಾನಿಯಾದಲ್ಲಿ ಫೇಸ್ಬುಕ್ ಜಾರಿಗೊಳಿಸಿದೆ.

**ಪ್ರಮುಖಾಂಶಗಳು**:

"ಎಕ್ಸ್ ಪ್ರೆಸ್ ವೈ-ಫೈ" ಸೇವೆ ಬಳಕೆದಾರರಿಗೆ ಅಂತರ್ಜಾಲ ಬಳಕೆ, ಆ್ಯಪ್ ಡೌನ್ ಲೋಡ್ ಸೇರಿದಂತೆ ಇನ್ನಿತರ ಸೇವೆಯನ್ನು ನೀಡಲಿದೆ. ಬಳಕೆದಾರರು ಮೊದಲು "ಎಕ್ಸ್ ಪ್ರೆಸ್ ವೈ-ಫೈ" ನೆಟ್ ವರ್ಕ್ ಗೆ ನೋಂದಾಯಿಸಿಕೊಂಡು ಆನಂತರ ಡಾಟಾ ಪ್ಯಾಕ್ ಖರೀದಿಸುವ ಮೂಲಕ ಬಳಸಬಹುದಾಗಿದೆ.

## <u>ದೇಶದ ಮೊದಲ ಖಾಸಗಿ ವಲಯದ ಸಣ್ಣ ಶಸ್ತ್ರಾಸ್ತ್ರ ಉತ್ಪಾದನಾ ಘಟಕ ಕಾರ್ಯಾರಂಭ</u>



ಭಾರತದ ಮೊದಲ ಖಾಸಗಿ ವಲಯದ ಸಣ್ಣ ಶಸ್ತ್ರಾಸ್ತ್ರ ತಯಾರಿಕಾ ಘಟಕವನ್ನು ಮಧ್ಯಪ್ರದೇಶದಲ್ಲಿ ಆರಂಭಿಸಲಾಗಿದೆ. ವಿಶ್ವದರ್ಜೆಯ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಭಾರತೀಯ ಸೇನೆಗೆ ಈ ಘಟಕ ಪೂರೈಸಲಿದೆ. ಭಾರತದ ಪುಂಜ್ ಲಾಯ್ಡ್ ಮತ್ತು ಇಸ್ರೇಲ್ ವೆಪನ್ ಸಿಸ್ಟಂ ನಡುವಿನ ಜಂಟಿ ಉಧ್ಯಮ ಇದಾಗಿದೆ. ಈ ಘಟಕದಲ್ಲಿ ಪ್ರಮುಖವಾಗಿ ನಾಲ್ಕು ಶಸ್ತ್ರಾಸ್ತ್ರಗಳಾದ X95 ಕಾರ್ಬೈನ್ & ಅಸಾಲ್ಟ್ ರೈಫಲ್, ಗಲಿಲ್ ಸ್ನಿಪರ್ ರೈಫಲ್, ಟವೊರ್ ಅಸಾಲ್ಟ್ ರೈಫಲ್ ಮತ್ತು ನೆಗೆವ್ ಲೈಟ್ ಮಷಿನ್ ಗನ್ ತಯಾರಿಸಲಾಗುವುದು.

ಈ ಘಟಕಕ್ಕೆ "ಪುಂಜ್ ಲಾಯ್ಡ್ ರಕ್ಷಾ ಸಿಸ್ಟಂ" ಎಂದು ಹೆಸರಿಡಲಾಗಿದೆ.

- ಪ್ರಧಾನಿ ನರೇಂದ್ರ ಮೋದಿ ಅವರು ಇಸ್ರೇಲ್ ಭೇಟಿ ನೀಡುತ್ತಿರುವಾಗಲೇ ಈ ಘಟಕವನ್ನು ಆರಂಭಿಸಲಾಗಿದ್ದು, ಇಸ್ರೇಲ್ ನೊಂದಿಗೆ ಮತ್ತಷ್ಟು ರಕ್ಷಣಾ ಒಪ್ಪಂದಗಳನ್ನು ನಿರೀಕ್ಷಿಸಲಾಗಿದೆ.
- ಬಾರತ ಇಸ್ರೇಲ್ ನಿಂದ ಅತಿ ಹೆಚ್ಚು ಮಿಲಿಟರಿ ಹಾರ್ಡ್ ವೇರ್ ಖರೀದಿಸುತ್ತಿರುವ ರಾಷ್ಟ್ರವಾಗಿದೆ.
- ಕಳೆದ ಕೆಲವು ವರ್ಷಗಳಲ್ಲಿ ವಿವಿಧ ಶಸ್ತ್ರಾಸ್ತ್ರಗಳನ್ನು ಇಸ್ರೇಲ್ ನಿಂದ ಭಾರತ ಖರೀದಿಸಿದೆ.

www.karunaduexams.com

## 7 ಸಾರ್ವಜನಿಕ ವಲಯ ಬ್ಯಾಂಕುಗಳಿಗೆ ಮುಖ್ಯಸ್ಥರ ನೇಮಕ



ಬ್ಯಾಂಕಿಂಗ್ ಕ್ಷೇತ್ರದ ಪುನರ್ ನಿರ್ಮಾಣಕ್ಕೆ ಒತ್ತು ನೀಡುತ್ತಿರುವ ಕೇಂದ್ರ ಸರ್ಕಾರ 7 ಸಾರ್ವಜನಿಕ ವಲಯ ಬ್ಯಾಂಕುಗಳಿಗೆ ಮುಖ್ಯಸ್ಥರನ್ನು ನೇಮಕ ಮಾಡಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಂಪುಟ ನೇಮಕಾತಿ ಸಮಿತಿ ಏಳು ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ಮುಖ್ಯಸ್ಥರನ್ನು ನೇಮಕ ಮಾಡಿದೆ.

- ಪಂಜಾಬ್ ನ್ಯಾಷನಲ್ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್ ಉಷಾ ಅನಂತಸುಬ್ರಮಣ್ಯಂ ಅವರನ್ನು ಕಲ್ಕತ್ತಾ ಮೂಲದ ಅಲಹಬಾದ್ ಬ್ಯಾಂಕಿನ ಮುಖ್ಯಸ್ಥರಾಗಿ ನೇಮಕ ಮಾಡಲಾಗಿದೆ.
- ಓರಿಯೆಂಟಲ್ ಬ್ಯಾಂಕ್ ಆಫ್ ಕಾಮರ್ಸ್ ಕಾರ್ಯನಿರ್ವಾಹಕ ನಿರ್ದೇಶಕ ರಾಜ್ ಕಿರಣ್ ರಾಯ್ ಅವರನ್ನು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಸಿಇಓ ಆಗಿ ಮೂರು ವರ್ಷಗಳ ಅವಧಿಗೆ ನೇಮಕ ಮಾಡಲಾಗಿದೆ.
- ಆರ್ ಸುಬ್ರಮಣ್ಯಂ, ಇಂಡಿಯನ್ ಓವರ್ಸೀಸ್ ಬ್ಯಾಂಕಿನ ಪ್ರಸ್ತುತ ಕಾರ್ಯನಿರ್ವಾಹಕ ನಿರ್ದೇಶಕ ಇವರನ್ನು ಇದೇ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಸಿಇಓ ಆಗಿ ನೇಮಕ ಮಾಡಲಾಗಿದೆ.
- ಕಾರ್ಪೋರೇಶನ್ ಬ್ಯಾಂಕಿನ ಕಾರ್ಯನಿರ್ವಾಹಕ ನಿರ್ದೇಶಕ ಸುನೀಲ್ ಮೆಹ್ತಾ ಅವರನ್ನು ಪಂಜಾಬ್ ನ್ಯಾಷನಲ್ ಬ್ಯಾಂಕಿನ ಮುಖ್ಯಸ್ಥರಾಗಿ ನೇಮಿಸಲಾಗಿದೆ.
- ಕೆನರಾ ಬ್ಯಾಂಕಿನ ಕಾರ್ಯನಿರ್ವಾಹಕ ನಿರ್ದೇಶಕ ಧೀನಬಂಧು ಮೊಹಪತ್ರ ಅವರನ್ನು ಬ್ಯಾಂಕ್ ಆಫ್ ಇಂಡಿಯಾದ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಸಿಇಓ ನೇಮಕ ಮಾಡಲಾಗಿದೆ.
- ಆರ್, ಎ, ಶಂಕರ್ ನಾರಾಯಣ್ ಅವರನ್ನು ವಿಜಯ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಸಿಇಓ ಆಗಿ ನೇಮಕ ಮಾಡಲಾಗಿದೆ.

www.karunaduexams.com

## ವಿಶ್ವಾಸರ್ಹ ಉದ್ಯೋಗ ಮಾಹಿತಿಯನ್ನು ಸೃಷ್ಟಿಸಲು ಕಾರ್ಯಪಡೆ ರಚನೆ



ಸಮಯೋಚಿತ ಮತ್ತು ವಿಶ್ವಾಸಾರ್ಹ ಉದ್ಯೋಗ ಮಾಹಿತಿಯನ್ನು ಸೃಷ್ಟಿಸಲು ಸೂಕ್ತ ವಿಧಾನವನ್ನು ಅಭಿವೃದ್ಧಿಪಡಿಸಲು ನೀತಿ ಆಯೋಗದ ಉಪಾಧ್ಯಕ್ಷ ಅರವಿಂದ ಪನಾಗರಿಯಾ ನೇತೃತ್ವದ ಟಾಸ್ಕ್ ಫೋರ್ಸ್ ಅನ್ನು ಸರ್ಕಾರ ಸ್ಥಾಪಿಸಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಸ್ವತಃ ಈ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದು ಮತ್ತು ಅದಷ್ಟು ಬೇಗನೆ ತನ್ನ ಶಿಫಾರಸನ್ನು ಸಲ್ಲಿಸಲು ಕಾರ್ಯಪಡೆಗೆ ಸೂಚಿಸಲಾಗಿದೆ. ಕಾರ್ಯಪಡೆಯ ಇತರ ಸದಸ್ಯರು ಕಾರ್ಮಿಕ ಕಾರ್ಯದರ್ಶಿ ಎ. ಸತ್ಯಾವತಿ, ಸಂಖ್ಯಾಶಾಸ್ತ್ರ ಇಲಾಖೆಯ ಕಾರ್ಯದರ್ಶಿ ಟಿ.ಸಿ.ಎ. ಅನಂತ್, ನೀತಿ ಆಯೋಗದ ಪುಲಕ್ ಘೋಷ್ ಮತ್ತು ಟೀಮ್ಲೈಸ್ ಸರ್ವಿಸಸ್ ಲಿಮಿಟೆಡ್ ಅಧ್ಯಕ್ಷ ಮತ್ತು ಸಹ ಸಂಸ್ಥಾಪಕ ಮನೀಶ್ ಸಭರ್ವಾಲ್.

**ಅಗತ್ಯತೆ**:

- ಭಾರತದಲ್ಲಿ ಉದ್ಯೋಗಕ್ಕೆ ಸಂಬಂಧಿಸಿದಂತೆ ವಿಶ್ವಾಸಾರ್ಹ ಮಾಹಿತಿ ಇಲ್ಲ. ಪ್ರಸ್ತುತ ಲಭ್ಯವಿರುವ ಮಾಹಿತಿ ಅವಧಿಯನ್ನು ಮೀರಿದೆ. ದೇಶದ ಬಹುಪಾಲು ಉದ್ಯೋಗಿಗಳನ್ನು ನೇಮಕ ಮಾಡುವ ಅನೌಪಚಾರಿಕ ವಲಯದಲ್ಲಿನ ಉದ್ಯೋಗಗಳ ಮೇಲಿನ ಮಾಹಿತಿಯು ಸುಲಭವಾಗಿ ಲಭ್ಯವಾಗುವುದಿಲ್ಲ. ಅಲ್ಲದೆ, ಲೇಬರ್ ಬ್ಯೂರೋ ಬಿಡುಗಡೆ ಮಾಡುವ ಮಾಹಿತಿ ಸಂಘಟಿತ ವಲಯಕ್ಕೆ ಮಾತ್ರ ಮೀಸಲು. ಉದ್ಯೋಗಗಳಲ್ಲಿ ಲಭ್ಯವಿರುವ ಅತ್ಯಂತ ಸಮಗ್ರವಾದ ದತ್ತಾಂಶವಾದ ರಾಷ್ಟ್ರೀಯ ಮಾದರಿ ಸಮೀಕ್ಷಾ ಕಚೇರಿ (ಎನ್ಎಸ್ಎಸ್ಒ) ಮಾಹಿತಿಯನ್ನು ಸಮಯ ವಿಳಂಬದೊಂದಿಗೆ ಹೊರತರಲಾಗುತ್ತಿದೆ.

**<u>ವಿಶ್ವಬ್ಯಾಂಕ್ ವಿದ್ಯುತ್ ಲಭ್ಯತೆ ಪಟ್ಟಿ: ಭಾರತಕ್ಕೆ 26ನೇ ಸ್ಥಾನ</u>**



ವಿಶ್ವಬ್ಯಾಂಕಿನ ವಿದ್ಯುತ್ ಲಭ್ಯತೆ ಪಟ್ಟಿಯಲ್ಲಿ 73 ಸ್ಥಾನಗಳ ಏರಿಕೆ ಕಂಡಿರುವ ಭಾರತ 26ನೇ ಸ್ಥಾನವನ್ನು ಪಡೆದುಕೊಂಡಿದೆ. 2014ರಲ್ಲಿ ಭಾರತ 99ನೇ ಸ್ಥಾನವನ್ನು ಪಡೆದುಕೊಂಡಿತ್ತು. ವಿದ್ಯುತ್ ಕೊರತೆಯಿರುವ 18,452 ಗ್ರಾಮಗಳಲ್ಲಿ 13,000ಕ್ಕಿಂತಲೂ ಹೆಚ್ಚಿನ ಗ್ರಾಮಗಳಿಗೆ ವಿದ್ಯುತ್ ಸೌಲಭ್ಯವನ್ನು ಒದಗಿಸಲಾಗಿದೆ. ಹೊಸ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸುವ ವ್ಯಕ್ತಿಯು ವಿದ್ಯುತ್ ಮೂಲಸೌಲಭ್ಯ ಇರುವ ಪ್ರದೇಶಗಳಲ್ಲಿ 24 ಗಂಟೆಗಳ ಒಳಗೆ ಸಂಪರ್ಕವನ್ನು ಪಡೆಯಲು ಸಾಧ್ಯವಾಗುತ್ತದೆ ಮತ್ತು ವಿದ್ಯುತ್ ಮೂಲಸೌಕರ್ಯವಿಲ್ಲದ ಪ್ರದೇಶಗಳಲ್ಲಿ, ವಿದ್ಯುತ್ ಸಂಪರ್ಕವನ್ನು ವಾರದೊಳಗೆ ನೀಡಲಾಗುತ್ತದೆ. ಸರ್ಕಾರದ ಗ್ರಾಮೀಣ ವಿದ್ಯುದೀಕರಣ ಕಾರ್ಯಕ್ರಮವು ಪ್ರಗತಿಯಲ್ಲಿದ್ದು, ಉದ್ದೇಶಿತ 1,000 ದಿನಗಳಲ್ಲಿ ಪೂರ್ಣಗೊಳ್ಳುವ ಹಾದಿಯಲ್ಲಿದೆ.

**ಹಿನ್ನಲೆ**:

2022 ರೊಳಗೆ ದೇಶಾದ್ಯಂತ ಪ್ರತಿ ಗ್ರಾಮೀಣ ಕುಟುಂಬಕ್ಕೆ 24 × 7 ನಿರಂತರ ವಿದ್ಯುತ್ ಸರಬರಾಜು ಒದಗಿಸುವ ಉದ್ದೇಶದಿಂದ ದೀನ್ದಯಾಲ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ (ಡಿಡಿಯುಜಿಜೆವೈ) ಅನ್ನು ಆರಂಭಿಸಲಾಗಿದೆ. ಇದು ವಿದ್ಯುತ್ ನಷ್ಟವನ್ನು ತಡೆಯಲು ಉಪ-ಪ್ರಸರಣ ಮತ್ತು ವಿತರಣಾ ಜಾಲವನ್ನು ಬಲಪಡಿಸುವ ಗುರಿಯನ್ನು ಹೊಂದಿದೆ. ಇದರಡಿ ಗ್ರಾಮೀಣ ಮನೆಗಳಿಗೆ ಮತ್ತು ಕೃಷಿ ಉದ್ದೇಶಕ್ಕಾಗಿ ಪ್ರತ್ಯೇಕ ಫೀಡರ್ ಅಳವಡಿಸಲಾಗುವುದು. ಇತ್ತೀಚೆಗೆ ಕೇಂದ್ರ ಇಂಧನ ಸಚಿವಾಲಯ ರಾಷ್ಟ್ರದ ಎಲ್ಲಾ ಆರು ಲಕ್ಷ ಗ್ರಾಮಗಳ ನೈಜ-ಸಮಯದ ಮಾಹಿತಿಯನ್ನು ಒದಗಿಸಲು GARV-II ಹೊಸ ಅಪ್ಲಿಕೇಶನ್ ಅನ್ನು ಪ್ರಾರಂಭಿಸಿದೆ. ಗ್ರಾಮೀಣ ವಿದ್ಯುದೀಕರಣ ಕಾರ್ಯಕ್ರಮದ ಅನುಷ್ಠಾನದಲ್ಲಿ ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಅಪ್ಲಿಕೇಶನ್ ಅನ್ನು ರೂಪಿಸಲಾಗಿದೆ.

www.karunaduexams.com

## ಉನ್ನತ ತಂತ್ರಜ್ಞಾನದ ಉಡುಪುಗಳನ್ನು ಭಾರತಕ್ಕೆ ಮಾರಾಟ ಮಾಡಲಿರುವ ಅಮೆರಿಕ



ಅಮೆರಿಕ $75 ಮಿಲಿಯನ್ ಮೌಲ್ಯದ "ಹೈಟೆಕ್ ಜಾಯಿಂಟ್ ಸರ್ವೀಸ್ ಲೈಟ್ವೈಟ್ ಇಂಟಿಗ್ರೇಟೆಡ್ ಸೂಟ್ ಟೆಕ್ನಾಲಜಿ (ಜೆಎಸ್ಲಿಸ್ಟ್)" ರಕ್ಷಣಾತ್ಮಕ ಉಡುಪುಗಳನ್ನು ಭಾರತಕ್ಕೆ ಮಾರಾಟ ಮಾಡಲಿದೆ. ಇದೇ ಮೊದಲ ಬಾರಿಗೆ, ಯುಎಸ್ ಕಾಂಗ್ರೆಸ್ಗೆ CBRN (ರಾಸಾಯನಿಕ, ಜೈವಿಕ, ವಿಕಿರಣ ಮತ್ತು ಪರಮಾಣು) ಬೆಂಬಲ ಸಲಕರಣೆ, ಜಾಯಿಂಟ್ ಸರ್ವೀಸ್ ಲೈಟ್ವೈಟ್ ಇಂಟಿಗ್ರೇಟೆಡ್ ಸೂಟ್ ಟೆಕ್ನಾಲಜಿ (ಜೆಎಸ್ಲಿಸ್ಟ್) ರಕ್ಷಣಾತ್ಮಕ ಉಡುಪುಗಳನ್ನು ಮಾರಾಟ ಮಾಡಲು ಪೆಂಟಗನ್ ಸೂಚಿಸಿದೆ. ಸಂಪೂರ್ಣ ಪ್ಯಾಕೇಜ್ 38,034 M50 ಸಾಮಾನ್ಯ ಮುಖವಾಡಗಳು, 38,034 ಸೂಟ್ಗಳು, ಪ್ಯಾಂಟ್ಗಳು, ಕೈಗವಸುಗಳು, ಬೂಟುಗಳು ಮತ್ತು ಎನ್ಬಿಸಿ ಚೀಲಗಳನ್ನು ಒಳಗೊಂಡಿದೆ.

**ವೈಶಿಷ್ಟತೆ**:

ಜಾಯಿಂಟ್ ಸರ್ವೀಸ್ ಲೈಟ್‌ವೇಟ್ ಇಂಟಿಗ್ರೇಟೆಡ್ ಸೂಟ್ ಟೆಕ್ನಾಲಜಿ ಬಳಸಿ ತಯಾರಾಗಿರುವ ಈ ಉಡುಪುಗಳು, ವಿಕಿರಣ ಹಾಗೂ ಪರಮಾಣು ದಾಳಿಗಳನ್ನೂ ತಡೆಯುವ ಸಾಮರ್ಥ್ಯ ಹೊಂದಿವೆ.

**ಭಾರತ-ಯುಎಸ್ ರಕ್ಷಣಾ ಸಂಬಂಧ:**

ಭಾರತ-ಅಮೆರಿಕ ನಡುವಿನ ರಕ್ಷಣಾ ಪಾಲುದಾರಿಕೆಯು ವಿಶ್ವದಲ್ಲೇ ಅತಿ ವೇಗವಾಗಿ ಬೆಳೆಯುತ್ತಿದೆ. ಕಳೆದ ಕೆಲವು ವರ್ಷಗಳಲ್ಲಿ, ಉಭಯ ದೇಶಗಳ ನಡುವೆ ರಕ್ಷಣಾ ಕ್ಷೇತ್ರದಲ್ಲಿ $ 10 ಬಿಲಿಯನ್ ಗಿಂತಲೂ ಹೆಚ್ಚು ಒಪ್ಪಂದಗಳಿಗೆ ಸಹಿಹಾಕಲಾಗಿದೆ. ಇದು ಡೋನಾಲ್ಡ್ ಟ್ರಂಪ್ ಆಡಳಿತವು ಅನುಮೋದಿಸಿದ ಮೊದಲ ಪ್ರಮುಖ ವಿದೇಶಿ ರಕ್ಷಣಾ ಮಾರಾಟವಾಗಿದೆ. ಒಬಾಮಾ ಆಡಳಿತವು ಭಾರತವನ್ನು ಪ್ರಮುಖ ರಕ್ಷಣಾ ಪಾಲುದಾರ ರಾಷ್ಟ್ರವೆಂದು ನೇಮಿಸಿತ್ತು. ಇದರಿಂದ ರಕ್ಷಣಾತ್ಮಕ ವ್ಯಾಪಾರ ಮತ್ತು ತಂತ್ರಜ್ಞಾನಗಳ ಹಂಚಿಕೆಗೆ ಸಂಬಂಧಿಸಿದಂತೆ USನ ಇತರ ಪ್ರಮುಖ ಮೈತ್ರಿಕೂಟಗಳೊಂದಿಗೆ ಭಾರತ ಸಮಾನ ಸ್ಥಾನವನ್ನು ಪಡೆದುಕೊಂಡತಾಗಿದೆ. ಜೂನ್ 2015 ರಲ್ಲಿ, ಭಾರತ ಮತ್ತು ಯುಎಸ್ ಡಿಫೆನ್ಸ್ ಫ್ರೇಂವರ್ಕ್ ಒಪ್ಪಂದವನ್ನು ಮುಂದಿನ 10 ವರ್ಷಗಳ ಅವಧಿಗೆ ನವೀಕರಿಸಿವೆ. ಈ ಒಪ್ಪಂದ ಎರಡೂ ರಾಷ್ಟ್ರಗಳ ಸಶಸ್ತ್ರ ಪಡೆಗಳ ನಡುವಿನ ನಿರಂತರ ವಿನಿಮಯ ಮತ್ತು ಸಾಮರ್ಥ್ಯಗಳನ್ನುಬಲಪಡಿಸುತ್ತದೆ.

www.karunaduexams.com

**2017ರಲ್ಲಿ ಭಾರತದ ಜಿಡಿಪಿ ಬೆಳವಣಿಗೆ ದರ ಶೇ 7.3%: ವಿಶ್ವಸಂಸ್ಥೆ**



ವಿಶ್ವ ಸಂಸ್ಥೆ ಬಿಡುಗಡೆಗೊಳಿಸಿರುವ "ವಿಶ್ವ ಆರ್ಥಿಕ ಪರಿಸ್ಥಿತಿ ಮತ್ತು ಮುನ್ನೋಟ" ಶೀರ್ಷಿಕೆಯ ವರದಿಯಲ್ಲಿ, 2017 ರಲ್ಲಿ ಭಾರತದ ಜಿಡಿಪಿ ಶೇ 7.3%ರಷ್ಟು ಬೆಳವಣಿಗೆಯನ್ನು ಕಾಣಲಿದೆ. ವಿಶ್ವಸಂಸ್ಥೆ ಕಳೆದ ಜನವರಿಯಲ್ಲಿ ಬಿಡುಗಡೆಗೊಳಿಸಿದ ವರದಿಯಲ್ಲಿ 2017ರಲ್ಲಿ ಶೇ 7.7% ರಷ್ಟು ಬೆಳವಣಿಗೆ ಇರಲಿದೆ ಎಂದು ಅಂದಾಜಿಸಲಾಗಿತ್ತು. ಪರಿಷ್ಕೃತ ವರದಿಯಲ್ಲಿ 2018ನೇ ವರ್ಷದಲ್ಲಿ ಶೇ 7.9% ನಷ್ಟು ಜಿಡಿಪಿ ಬೆಳವಣಿಗೆಯನ್ನು ನಿರೀಕ್ಷಿಸಲಾಗಿದೆ. ಜನವರಿಯಲ್ಲಿ ಬಿಡುಗಡೆಗೊಂಡ ವರದಿಯಲ್ಲಿ ಶೇ.7.6%ರಷ್ಟು ಅಂದಾಜಿಸಲಾಗಿತ್ತು.

**ಪ್ರಮುಖಾಂಶಗಳು**:

ಪರಿಷ್ಕೃತ ವರದಿಯಲ್ಲಿ ಭಾರತದ ಜಿಡಿಪಿ ಬೆಳವಣಿಗೆ ಕುಂಠಿತಗೊಳ್ಳಲಿದೆ ಎಂದು ಹೇಳಲಾದರೂ, ಭಾರತವು ವೇಗವಾಗಿ ಬೆಳೆಯುತ್ತಿರುವ ಅಭಿವೃದ್ದಿಶೀಲ ಆರ್ಥಿಕ ವ್ಯವಸ್ಥೆಯಲ್ಲಿ ಒಂದಾಗಿದ್ದು, ಚೀನಾಕ್ಕಿಂತಲೂ ಮುಂದಿದೆ. 2017 ಮತ್ತು 2018 ರಲ್ಲಿ ಚೀನಾವು 6.5% ರಷ್ಟು ಬೆಳೆಯಲಿದೆ ಎಂದು ವರದಿ ಹೇಳಿದೆ. ನೋಟು ರದ್ದತಿ ನೀತಿಯಿಂದ ಉಂಟಾದ ತಾತ್ಕಾಲಿಕ ಅಡೆತಡೆಗಳ ಹೊರತಾಗಿಯೂ, ಹಣಕಾಸು ಮತ್ತು ಆರ್ಥಿಕ ನೀತಿಗಳಿಂದ ಆರ್ಥಿಕ ಪರಿಸ್ಥಿತಿಗಳು ದೃಢವಾಗಿದೆ.

**ವಿಶ್ವ ಆರ್ಥಿಕ ಪರಿಸ್ಥಿತಿ ಮತ್ತು ಮುನ್ನೋಟ:**

ವಿಶ್ವ ಆರ್ಥಿಕ ಪರಿಸ್ಥಿತಿ ಮತ್ತು ಮುನ್ನೋಟ ವಿಶ್ವಸಂಸ್ಥೆ ಹೊರತರುವ ಪ್ರಮುಖ ವರದಿಯಾಗಿದೆ. ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ವ್ಯವಹಾರಗಳ ಇಲಾಖೆ (UN / DESA), ಯುನೈಟೆಡ್ ನೇಷನ್ಸ್ ಕಾನ್ಫರೆನ್ಸ್ ಆಫ್ ಟ್ರೇಡ್ ಅಂಡ್ ಡೆವಲಪ್ಮೆಂಟ್ (UNCTAD) ಮತ್ತು ಐದು ಯುನೈಟೆಡ್ ನೇಷನ್ಸ್ ಪ್ರಾದೇಶಿಕ ಆಯೋಗಗಳಾದ: ಆಫ್ರಿಕಾದ ಆರ್ಥಿಕ ಆಯೋಗ(ಇಸಿಎ), ಯುರೋಪಿಯನ್ ಎಕನಾಮಿಕ್ ಕಮಿಷನ್ (ಇಸಿಇ), ಲ್ಯಾಟಿನ್ ಅಮೇರಿಕಾ ಮತ್ತು ಕೆರಿಬಿಯನ್ ಆರ್ಥಿಕ ಇಲಾಖೆ (ಇಸಿಎಲ್ಸಿಸಿ), ಏಷ್ಯಾ ಮತ್ತು ಪೆಸಿಫಿಕ್ (ಇಎಸ್ಸಿಎಪಿ) ಆರ್ಥಿಕ ಮತ್ತು ಸಾಮಾಜಿಕ ಆಯೋಗ ಮತ್ತು ಪಶ್ಚಿಮ ಏಷ್ಯಾ ಆರ್ಥಿಕ ಮತ್ತು ಸಾಮಾಜಿಕ ಆಯೋಗ (ಇಎಸ್ಸಿಡಬ್ಲ್ಯೂಎ) ಜಂಟಿಯಾಗಿ ವರದಿಯನ್ನು ಹೊರತರುತ್ತಿವೆ. ಮೇಲಿನ ಸಂಸ್ಥೆಗಳು ಹೊರತುಪಡಿಸಿ, ಯುನೈಟೆಡ್ ನೇಷನ್ಸ್ ವರ್ಲ್ಡ್ ಟೂರಿಸಮ್ ಆರ್ಗನೈಸೇಶನ್ (ಯುಎನ್ಡಬ್ಲ್ಯೂಟಿಒ) ಸಹ ವರದಿಗೆ ಕೊಡುಗೆ ನೀಡುತ್ತದೆ.

www.karunaduexams.com

## ಫೋರ್ಬ್ಸ್ "ಗ್ಲೋಬಲ್ ಗೇಮ್ ಚೇಂಜರ್ಸ್" ಪಟ್ಟಿ ಮುಖೇಶ್ ಅಂಬಾನಿಗೆ ಅಗ್ರಸ್ಥಾನ



ರಿಲಯನ್ಸ್ ಇಂಡಸ್ಟ್ರೀಸ್‌ನ ಮುಖ್ಯಸ್ಥ ಮುಕೇಶ್ ಅಂಬಾನಿ ಅವರು, ಫೋರ್ಬ್ಸ್ ನಿಯತಕಾಲಿಕೆ ಬಿಡುಗಡೆ ಮಾಡಿರುವ "ಗ್ಲೋಬಲ್ ಗೇಮ್ ಚೇಂಜರ್' ಪಟ್ಟಿಯಲ್ಲಿ ಅಗ್ರ ಸ್ಥಾನ ಕಾಯ್ದುಕೊಂಡಿದ್ದಾರೆ. ರಿಲಯನ್ಸ್ ಜಿಯೋದಿಂದಾಗಿ ದೇಶದ ದೂರಸಂಪರ್ಕ ಕ್ಷೇತ್ರದಲ್ಲಿ ಮಾತ್ರವಲ್ಲದೆ, ಕೋಟ್ಯಂತರ ಮಂದಿಯ ಬದುಕಿಧಿನಲ್ಲೂ ಮಹತ್ವದ ಬದಲಾವಣೆ ಆಗಿದೆ. ಈ ಹಿನ್ನೆಲೆಯಲ್ಲಿ ಮುಖೇಶ್ ಅಂಬಾನಿ ಅವರನ್ನು ಜಾಗತಿಕ ಗೇಮ್ ಚೇಂಜರ್ಸ್ ಪಟ್ಟಿಯಲ್ಲಿ ಸೇರಿಸಲಾಗಿದೆ. ಭಾರತೀಯ ಜನಸಮುದಾಯಕ್ಕೆ ಇಂಟರ್ನೆಟ್ ತಲುಪಿಸುವಲ್ಲಿ ಅವರ ಕಾರ್ಯ ಮಹತ್ವದ್ದು ಎಂದು ಫೋಬ್ಸ್ ಹೇಳಿದೆ.

ಇದು ಫೋರ್ಬ್ಸ್ ನ ಎರಡನೆ ವಾರ್ಷಿಕ ಗ್ಲೋಬಲ್ ಗೇಮ್ ಚೇಂಜರ್ಸ್ ಪಟ್ಟಿಯಾಗಿದ್ದು, ಜಗತ್ತಿನಾದ್ಯಂತದ ಶತಕೋಟಿ ಜನರ ಜೀವನಕ್ಕೆ ಬದಲಾವಣೆಗಳನ್ನು ಬದಲಾಯಿಸುವ 25 ವ್ಯವಹಾರ ನಾಯಕರು" ಅನ್ನು ಒಳಗೊಂಡಿದೆ.

**ಟಾಪ್ 10 ಸ್ಥಾನ ಪಡೆದಿರುವವರು:**

ಭಾರತದ ಮುಕೇಶ್ ಅಂಬಾನಿ (1 ನೇ ಸ್ಥಾನ), ಜಿವ್ ಅವಿರಾಮ್, ಇಸ್ರೇಲಿನ ಶಶುವಾ (2 ನೇ ಸ್ಥಾನ), ಅಮೆರಿಕದ ಸ್ಟೀವರ್ಟ್ ಬಟರ್ಫೀಲ್ಡ್ (3 ನೇ ಸ್ಥಾನ), ಜಾನ್ ಮತ್ತು ಪ್ಯಾಟ್ರಿಕ್ ಕೊಲ್ಲಿಸನ್, ಅಮೆರಿಕ (4 ನೇಯವರು) , ಯುನೈಟೆಡ್ ಕಿಂಗ್ಡಮ್ನ ಜೇಮ್ಸ್ ಡೈಸನ್ (5 ನೇ ಸ್ಥಾನ), ಸ್ಕಾಟ್ ಫರ್ಕುಹಾರ್, ಮೈಕ್ ಕ್ಯಾನನ್-ಬ್ರೂಕ್ಸ್ ಆಫ್ ಆಸ್ಟ್ರೇಲಿಯಾ (6 ನೇ ಸ್ಥಾನ), ಅಮೆರಿಕದ ಲ್ಯಾರಿ ಫಿಂಕ್ (7 ನೇಯ), ಅಮೆರಿಕದ ಕೆನ್ ಫ್ರೇಜಿಯರ್ (8 ನೇ ಸ್ಥಾನ), ತಾವೆಟ್ ಹಿನ್ರಿಕಸ್, ಕ್ರಿಸ್ಟೋ ಕಾರ್ಮಾರ್ನ್ ಯುಕೆ (9 ನೇ ಸ್ಥಾನ), ಯುನೈಟೆಡ್ ಸ್ಟೇಟ್ಸ್ನ ರಾಬರ್ಟ್ ಕಾಟ್ಜ್ (10 ನೇ ಸ್ಥಾನ).

## ತೆರಿಗೆ ಇಲಾಖೆಯಿಂದ "ಆಪರೇಶನ್ ಕ್ಲೀನ್ ಮನಿ"ಗೆ ಚಾಲನೆ



ಆದಾಯ ತೆರಿಗೆ ಇಲಾಖೆ (ಐಟಿಡಿ) ತೆರಿಗೆ ವಂಚಕರನ್ನು ತನಿಖೆ ಮಾಡಲು "ಆಪರೇಷನ್ ಕ್ಲೀನ್ ಮನಿ" ಅನ್ನು ಪ್ರಾರಂಭಿಸಿದೆ. ಈ ಕಾರ್ಯಾಚರಣೆಯ ಒಂದು ಭಾಗವಾಗಿ, ಸರ್ಕಾರವು 'ಆಪರೇಶನ್ ಕ್ಲೀನ್ ಮನಿ' ವೆಬ್ ಸೈಟ್ ಅನ್ನು ಪ್ರಾರಂಭಿಸಿದೆ.

**ಪ್ರಮುಖಾಂಶಗಳು**:

ಆಪರೇಷನ್ ಕ್ಲೀನ್ ಮನಿ 'ಪೋರ್ಟಲ್ ಅನ್ನು ಕೇಂದ್ರ ನೇರತೆರಿಗೆ ಮಂಡಳಿ (ಸಿಬಿಡಿಟಿ) ವಿನ್ಯಾಸಗೊಳಿಸಿದೆ. ಕಾರ್ಯಾಚರಣೆಯ ಪ್ರಾಥಮಿಕ ಹಂತದಲ್ಲಿ 2016ರ ನವೆಂಬರ್ 9 ರಿಂದ ಡಿಸೆಂಬರ್ 30 ರವರೆಗೆ ದೊಡ್ಡ ಮೊತ್ತದ ಠೇವಣಿ ಅಥವಾ ಖರೀದಿಗಳನ್ನು ಮಾಡಿರುವ ತೆರಿಗೆ ಪಾವತಿದಾರರ ಪಟ್ಟಿಯಲ್ಲಿ ಇಲ್ಲದ ಸುಮಾರು 18 ಲಕ್ಷ ಜನರನ್ನು ಗುರುತಿಸಲಾಗುವುದು,

ಪಾನ್ ಕಾರ್ಡ್ ಹೊಂದಿರುವವರು ಪೋರ್ಟಲ್ನಲ್ಲಿ ಮಾಹಿತಿಯನ್ನು ವೀಕ್ಷಿಸಬಹುದು. ಆದಾಯ ತೆರಿಗೆ ಕಛೇರಿಗೆ ಭೇಟಿ ನೀಡುವ ಅಗತ್ಯವಿಲ್ಲದೆ ಆನ್ಲೈನ್ ವಿವರಣೆಯನ್ನು ಸಲ್ಲಿಸಲು

www.karunaduexams.com

ತೆರಿಗೆದಾರರಿಗೆ ಅನುಕೂಲ ಮಾಡಲಾಗಿದೆ. ಪೋರ್ಟಲ್‌ನಲ್ಲಿ ಆನ್ಲೈನ್ ಪ್ರತಿಕ್ರಿಯೆಯನ್ನು ಸಲ್ಲಿಸಲು ತೆರಿಗೆದಾರರಿಗೆ ಇ-ಮೇಲ್ ಮತ್ತು ಎಸ್ಎಂಎಸ್ ಮೂಲಕ ಮಾಹಿತಿ ಕಳುಹಿಸಲಾಗುವುದು.

**ಹಿನ್ನಲೆ**:

ಅಘೋಷಿತ ಆಸ್ತಿ, ಆದಾಯದೊಂದಿಗೆ ತೆರಿಗೆ ವಂಚನೆದಾರರನ್ನು ತೆರಿಗೆ ಪಾವತಿಸುವಂತೆ ಮಾಡಲು "ಆಪರೇಷನ್ ಕ್ಲೀನ್ ಮನಿ"ಗೆ ಕೇಂದ್ರ ಸರ್ಕಾರದ ನೋಟು ರದ್ದತಿ ಬೆನ್ನಲ್ಲೆ ಚಾಲನೆ ನೀಡಲಾಯಿತು. ದುರ್ಘಟನೆಯ ಡ್ರೈವ್ ಪ್ರಾರಂಭಿಸಿದ ತಕ್ಷಣ ಪ್ರಾರಂಭಿಸಲಾಯಿತು. ಆದಾಯ ತೆರಿಗೆ ಇಲಾಖೆ ಇಲ್ಲಿಯವರೆಗೆ ಸುಮಾರು 1.8 ಮಿಲಿಯನ್ ಜನರನ್ನು ಗುರುತಿಸಿದ್ದು, ಪ್ರಧಾನ್ ಮಂತ್ರಿ ಗರೀಬ್ ಕಲ್ಯಾಣ ಯೋಜನೆ ಮೂಲಕ ಅವರ ಠೇವಣಿಗಳ ಬಗ್ಗೆ ವಿವರ ನೀಡಲು, ತೆರಿಗೆ ಪಾವತಿಸಿಲು ಅಥವಾ ಹಿಂದೆ ಬಹಿರಂಗಪಡಿಸದ ಆದಾಯವನ್ನು ಬಹಿರಂಗಪಡಿಸಬೇಕೆಂದು ಆದೇಶಿಸಿದೆ.

**ಟಾಟಾ ಗ್ರೂಪ್ ದೇಶದ ಅತ್ಯಂತ ಮೌಲ್ಯಯುತ ಬ್ರಾಂಡ್**

ಬ್ರಾಂಡ್ ಫೈನಾನ್ಸ್ ಹೊರತಂದಿರುವ ಭಾರತದ 100 ಅತ್ಯಂತ ಮೌಲ್ಯಯುತ ಬ್ರಾಂಡ್ಗಳನ್ನು 2017 ಪಟ್ಟಿಯಲ್ಲಿ ಟಾಟಾ ಗ್ರೂಪ್ ಮೊದಲ ಸ್ಥಾನವನ್ನು ಪಡೆದುಕೊಂಡಿದೆ. ಟಾಟಾ ಗ್ರೂಪ್ 13.1 ಶತಕೋಟಿ ಡಾಲರ್ ಮೌಲ್ಯವನ್ನು ಹೊಂದಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.. ಬ್ರ್ಯಾಂಡ್ ಫೈನಾನ್ಸ್ ಜಾಗತಿಕ ಬ್ರ್ಯಾಂಡ್ ಮೌಲ್ಯಮಾಪನ ಮತ್ತು ತಂತ್ರ ಸಲಹಾ ಸಂಸ್ಥೆ. ಟಾಟಾ ಗ್ರೂಪ್ನ ಬ್ರಾಂಡ್ ಮೌಲ್ಯವು 2016 ರಲ್ಲಿ 13.7 ಶತಕೋಟಿ ಡಾಲರ್ನಿಂದ ಶೇ 4% ಇಳಿಮುಖವಾಗಿದ್ದರೂ ಸಹ ಈ ಪಟ್ಟಿಯಲ್ಲಿ ಅಗ್ರ ಸ್ಥಾನದಲ್ಲಿದೆ.

ವರದಿಯ ಪ್ರಕಾರ, ಭಾರತದ ಅಗ್ರ 100 ಬ್ರ್ಯಾಂಡ್ಗಳ ಒಟ್ಟು ಬ್ರ್ಯಾಂಡ್ ಮೌಲ್ಯವು 2017 ರಲ್ಲಿ 15% ರಷ್ಟು ಏರಿಕೆಯಾಗಿದೆ. 100 ಮೌಲ್ಯಯುತ ಬ್ರಾಂಡ್ಗಳ ಪೈಕಿ ಒಟ್ಟು 68 ಬ್ರಾಂಡ್ಗಳು ಈ ವರ್ಷ ಮೌಲ್ಯವನ್ನು ಹೆಚ್ಚಿಸಿಕೊಂಡಿವೆ.

- ದೂರಸಂಪರ್ಕ ಸಂಸ್ಥೆ ಏರ್ಟೆಲ್ ಅಂದಾಜು 7.7 ಶತಕೋಟಿ ಡಾಲರ್ ಮೌಲ್ಯದ ಮೂಲಕ ಎರಡನೇ ಸ್ಥಾನದಲ್ಲಿದೆ. ಲೈಫ್ ಇನ್ಶುರೆನ್ಸ್ ಕಾರ್ಪೊರೇಶನ್ ಆಫ್ ಇಂಡಿಯಾ (ಎಲ್ಐಸಿ) 6.8 ಶತಕೋಟಿ ಡಾಲರ್ ಮೂಲಕ ಮೂರನೇ ಸ್ಥಾನವನ್ನು ಪಡೆದುಕೊಂಡಿದೆ.
- ಐಟಿ ಸಂಸ್ಥೆ ಇನ್ಫೋಸಿಸ್ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕ್ರಮವಾಗಿ 6.2 ಶತಕೋಟಿ ಡಾಲರ್ ಮತ್ತು 5.5 ಶತಕೋಟಿ $ ನಷ್ಟು ಮೌಲ್ಯದೊಂದಿಗೆ ಪಟ್ಟಿಯಲ್ಲಿ ನಾಲ್ಕನೇ ಮತ್ತು ಐದನೇ ಸ್ಥಾನವನ್ನು ಪಡೆದುಕೊಂಡಿವೆ.
- ಇಂಡಿಗೋ ಏರ್ಲೈನ್ಸ್ ಈ ಬಾರಿ 62ನೇ ಸ್ಥಾನವನ್ನು ಪಡೆದುಕೊಂಡಿದೆ. ಕಳೆದ ವರ್ಷ 95ನೇ ಸ್ಥಾನದಲ್ಲಿತ್ತು.
- ಮೊಬೈಲ್ ತಯಾರಕ ಸಂಸ್ಥೆ ಮೈಕ್ರೋಮ್ಯಾಕ್ಸ್ ತನ್ನ ಬ್ರ್ಯಾಂಡ್ ಮೌಲ್ಯ ಶೇ.39% ಇಳಿಕೆಯಾಗಿದ್ದು, ಪಟ್ಟಿಯಲ್ಲಿ 95 ನೇ ಸ್ಥಾನಕ್ಕೆ ಕುಸಿದಿದೆ.

www.karunaduexams.com

- ವರದಿಯಲ್ಲಿ ಐಟಿಸಿ ದೇಶದ ಅತ್ಯಂತ ಶಕ್ತಿಶಾಲಿ ಬ್ರ್ಯಾಂಡ್ ಎಂದು ಹೆಸರಿಸಲಾಗಿದೆ. ಸ್ಟ್ರಂತ್ ಇಂಡೆಕ್ಸ್ ಸ್ಕೋರ್ 86 ಮೂಲಕ AAA ರೇಟ್ ಬ್ರ್ಯಾಂಡ್ ಎನಿಸಿರುವ ಭಾರತದ ಏಕೈಕ ಬ್ರ್ಯಾಂಡ್ ಐಟಿಸಿ.

## <u>ಜಿಎಸ್‌ಟಿ ಪರಿಷತ್ ನಿಂದ ಜಿಎಸ್‌ಟಿ ದರ ನಿಗದಿ</u>




ಕೇಂದ್ರ ಹಣಕಾಸು ಮಂತ್ರಿ ಅರುಣ್ ಜೇಟ್ಲಿ ನೇತೃತ್ವದ ಜಿಎಸ್‌ಟಿ ಪರಿಷತ್ ತೆರಿಗೆ ದರವನ್ನು ಅಂತಿಮಗೊಳಿಸಿದೆ ಮತ್ತು ಜಿಎಸ್‌ಟಿ ಪರಿಷತ್ ಆಡಳಿತಕ್ಕೆ ಪೂರಕವಾದ ಏಳು ನಿಯಮಗಳನ್ನು ಅನುಮೋದಿಸಿದ್ದು, ಜುಲೈ 1 ರಿಂದ ಜಾರಿಗೆ ಬರಲಿದೆ. ಜಿಎಸ್‌ಟಿಯ ಉಳಿದ ಎರಡು ನಿಯಮಗಳಾದ ಟ್ರಾನ್ಸಿಷನ್ ಮತ್ತು ರಿಟರ್ನ್ ಕಾನೂನು ಸಮಿತಿಯ ಪರಿಶೀಲನೆಯಲ್ಲಿವೆ. ಒಟ್ಟಾರೆಯಾಗಿ, ಪರಿಷತ್ 1211 ಸರಕುಗಳ ದರಗಳನ್ನು ನಿಗದಿಪಡಿಸಿದೆ. ಮುಂಬರುವ ದಿನಗಳಲ್ಲಿ ಕೆಲವು ಇತರ ಸರಕುಗಳ ಮತ್ತು ಸೇವೆಗಳ ದರಗಳನ್ನು ನಿರ್ಧರಿಸಲಿದೆ.

**ಪ್ರಮುಖಾಂಶಗಳು**:

- 1211 ಸರಕುಗಳ ಪೈಕಿ ಶೇ. 81% ರಷ್ಟು ಸರಕುಗಳು ಶೇ. 18% ಅಥವಾ ಅದಕ್ಕಿಂತ ಕಡಿಮೆ ತೆರಿಗೆಗೆ ಒಳಪಡಲಿವೆ. ಉಳಿದ ಶೇ.19% ರಷ್ಟು ಸರಕುಗಳಿಗೆ 28% ಗರಿಷ್ಠ ತೆರಿಗೆ ದರ ಅನ್ವಯವಾಗಲಿದೆ.
- ಸಕ್ಕರೆ, ಚಹಾ, ಖಾದ್ಯ ಮತ್ತು ಖಾದ್ಯ ತೈಲಗಳಂತಹ ಗೃಹೋಪಯೋಗಿ ವಸ್ತುಗಳು ಶೇ.5% ತೆರಿಗೆಯನ್ನು ಆಕರ್ಷಿಸಲಿವೆ. ಧಾನ್ಯಗಳು ಮತ್ತು ಹಾಲಿಗೆ ತೆರಿಗೆಯಿಂದ ವಿನಾಯಿತಿ ನೀಡಲಾಗಿದೆ.
- ಮನುಫ್ಯಾಕ್ಚರ್ಡ್ ಸರಕುಗಳಿಗೆ ಶೇ 18% ಸುಂಕವನ್ನು ವಿಧಿಸಲಾಗುವುದು.
- ಐಷಾರಾಮಿ ಕಾರುಗಳು ಶೇ.28% ಜಿಎಸ್‌ಟಿ ಜೊತೆಗೆ ಶೇ.15% ಸೆಸ್ ವಿಧಿಸಲಾಗುವುದು. ಸಣ್ಣ ಪೆಟ್ರೋಲ್ ಕಾರುಗಳು ಶೇ.28% ಜಿಎಸ್‌ಟಿ ಮತ್ತು ಶೇ.1% ಸೆಸ್ ಮತ್ತು ಡೀಸೆಲ್ ಕಾರುಗಳನ್ನು 28% ಮತ್ತು 3% ಸೆಸ್ ಗೆ ಒಳಪಡಲಿವೆ.
- ತಂಪು ಪಾನೀಯಗಳು ಶೇ.28% ತೆರಿಗೆ ವ್ಯಾಪ್ತಿಗೆ ಬರಲಿವೆ.

**ಮಹತ್ವ**:

- ಜಿಎಸ್‌ಟಿ ಕೌನ್ಸಿಲ್ 1211 ಸರಕುಗಳ ಯಾವುದೇ ಸರಕಿನ ಒಟ್ಟಾರೆ ತೆರಿಗೆಯನ್ನು ಹೆಚ್ಚಿಸಿಲ್ಲ. ಆದರೆ ಅನೇಕ ವಸ್ತುಗಳ ಮೇಲೆ ತೆರಿಗೆ ಕಡಿಮೆಯಾಗಿದೆ. ಉದಾಹರಣೆಗೆ

www.karunaduexams.com

ಸಾಬೂನಿಗೆ ಶೇ.22-24% ನಷ್ಟು ತೆರಿಗೆ ವಿಧಿಸಲ್ಪಡುತ್ತಿದ್ದು, ಈಗ ಶೇ.18% ನಷ್ಟು ತೆರಿಗೆಯನ್ನು ವಿಧಿಸಲಾಗುವುದು.

- ಐಷಾರಾಮಿ ವಸ್ತುಗಳ ಮೇಲೆ ಶೇ.28% ಕ್ಕಿಂತಲೂ ವಿಧಿಸಲಾಗುವು ಹೆಚ್ಚು ತೆರಿಗೆಯನ್ನು ಸೆಸ್ ಎಂದು ಪರಿಗಣಿಸಲಾಗುತ್ತದೆ. ಈ ಸೆಸ್ ಅನ್ನು ಆದಾಯ ನಷ್ಟವನ್ನು ಅನುಭವಿಸುವ ರಾಜ್ಯಗಳಿಗೆ ಪರಿಹಾರಗಳನ್ನು ನೀಡಲು ಬಳಸಲಾಗುತ್ತದೆ.
- ಆಹಾರ ಪದಾರ್ಥಗಳು ಅಗ್ಗವಾಗಬಹುದು ಎಂದು ನಿರೀಕ್ಷಿಸಲಾಗಿದೆ. ಕೇಶತೈಲ, ಟೂತ್ಪೇಸ್ಟ ಮತ್ತು ಸಾಬೂನಿನಂತಹ ದಿನನಿತ್ಯದ ಬಳಕೆಯ ವಸ್ತುಗಳು ಶೇ.28% ರ ಬದಲು ಶೇ.18% ತೆರಿಗೆ ವ್ಯಾಪ್ತಿಯಲ್ಲಿ ಇಡಲಾಗಿದೆ.
- ಕಲ್ಲಿದ್ದಲಿನ ಮೇಲೆ ತೆರಿಗೆ ದರ ಶೇ.11% ರಿಂದ ಶೇ.5% ಕ್ಕೆ ಇಳಿದಿರುವ ಕಾರಣ ಇಂಧನ ಉತ್ಪಾದನೆಯ ವೆಚ್ಚವು ಕಡಿಮೆಯಾಗಲಿದೆ ಎಂದು ನಿರೀಕ್ಷಿಸಲಾಗಿದೆ.

## ಆಫ್ರಿಕಾ ಅಭಿವೃದ್ದಿ ಬ್ಯಾಂಕಿನ 52ನೇ ವಾರ್ಷಿಕ ಸಾಮಾನ್ಯ ಸಭೆ



ಆಫ್ರಿಕನ್ ಅಭಿವೃದ್ದಿ ಬ್ಯಾಂಕಿನ 52 ನೇ ವಾರ್ಷಿಕ ಸಾಮಾನ್ಯ ಸಭೆ (ಎಫ್ಡಿಬಿ) ಯನ್ನು ಮೇ 22-26, 2017ರಿಂದ ಗುಜರಾತ್ನ ಗಾಂಧಿನಗರದಲ್ಲಿ ಆಯೋಜಿಸಲಾಗಿತ್ತು. ಇದೇ ಮೊದಲ ಭಾರಿಗೆ ಭಾರತದಲ್ಲಿ ಈ ಸಭೆಯನ್ನು ಆಯೋಜಿಸಲಾಗಿದೆ. ಈ ಸಭೆಯಲ್ಲಿ ಆಫ್ರಿಕಾ ಅಭಿವೃದ್ದಿ ಬ್ಯಾಂಕಿನ ಸದಸ್ಯ ಮತ್ತು ಸದಸ್ಯರಲ್ಲದ ರಾಷ್ಟ್ರಗಳ ಹಣಕಾಸು ಮಂತ್ರಿಗಳು ಮತ್ತು ಕೇಂದ್ರ ಬ್ಯಾಂಕ್ ಗವರ್ನರ್ಗಳು ಸೇರಿದಂತೆ ಸುಮಾರು 4500 ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

**ಆಫ್ರಿಕಾ ಅಭಿವೃದ್ದಿ ಬ್ಯಾಂಕ್:**

ಆಫ್ರಿಕಾ ಅಭಿವೃದ್ದಿ ಬ್ಯಾಂಕ್ ಗ್ರೂಪ್ (ಎಎಫ್ಡಿಬಿ) ಅನ್ನು "ಬಾಂಕ್ ಆಫ್ರಿಕಾನ್ ಡೆ ಡೆವಲ್ಪ್ಮೆಂಟ್ (ಬಿಎಡಿ)" ಎಂದು ಸಹ ಕರೆಯಲಾಗುತ್ತದೆ. 1964ರಲ್ಲಿ ಈ ಬ್ಯಾಂಕನ್ನು ಸ್ಥಾಪಿಸಲಾಗಿದೆ. ಸರ್ಕಾರ ಮತ್ತು ಖಾಸಗಿ ಬಂಡವಾಳ ಅಭಿವೃದ್ದಿ ಯೋಜನೆಗಳಲ್ಲಿ ಹೂಡಿಕೆ ಮಾಡುವುದರ ಮೂಲಕ ಆಫ್ರಿಕಾದ ಖಂಡದಲ್ಲಿ ಬಡತನದ ವಿರುದ್ದ ಹೋರಾಡಲು ಮತ್ತು ಜನರ ಜೀವನಮಟ್ಟವನ್ನು ಸುಧಾರಿಸುವ ಉದ್ದೇಶದಿಂದ ಸ್ಥಾಪಿಸಲಾಯಿತು. ಆಫ್ರಿಕಾ ಅಭಿವೃದ್ದಿ ಬ್ಯಾಂಕ್ ಮೂರು ಘಟಕಗಳನ್ನು ಒಳಗೊಂಡಿದೆ. ಅವುಗಳೆಂದರೆ ಆಫ್ರಿಕನ್ ಡೆವಲಪ್ಮೆಂಟ್ ಬ್ಯಾಂಕ್, ಆಫ್ರಿಕನ್ ಡೆವಲಪ್ಮೆಂಟ್ ಫಂಡ್ ಮತ್ತು ನೈಜೀರಿಯಾ ಟ್ರಸ್ಟ್ ಫಂಡ್. ಇದರ ಪ್ರಧಾನ ಕಛೇರಿ, ಕೋಟ್ ಡಿ ಐವೊರ್ (ಐವರಿ ಕೋಸ್ಟ್)ನ ಅಬಿಡ್ಜಾನ್ನಲ್ಲಿದೆ ಬ್ಯಾಂಕಿನ ಧ್ಯೇಯವಾಕ್ಯವು "Building today, a better Africa tomorrow" ಆಗಿದ್ದು, ಭಾರತ ಸೇರಿದಂತೆ ಒಟ್ಟು 78 ಸದಸ್ಯರನ್ನು ಹೊಂದಿದೆ. 1983ರಲ್ಲಿ ಭಾರತ ಈ ಬ್ಯಾಂಕಿಗೆ ಸೇರ್ಪಡೆಗೊಂಡಿತು.

ಭಾರತವು ಆಫ್ರಿಕಾ ಅಭಿವೃದ್ದಿ ಬ್ಯಾಂಕಿನ ಆಫ್ರಿಕೇತರ ಸದಸ್ಯ ರಾಷ್ಟ್ರ. ಆಫ್ರಿಕಾ ಅಭಿವೃದ್ದಿ ಬ್ಯಾಂಕಿನಲ್ಲಿ ಮತದಾನ ಅಧಿಕಾರಗಳ ಆಧಾರದ ಮೇಲೆ ನೈಜೀರಿಯಾವು ಅತಿ ದೊಡ್ಡ ರಾಷ್ಟ್ರವಾಗಿದೆ,

www.karunaduexams.com

ನಂತರದ ಸ್ಥಾನದಲ್ಲಿ ಅಮೆರಿಕ ಇದೆ. ಅಮೇರಿಕಾ, ಜಪಾನ್, ಜರ್ಮನಿ, ಕೆನಡಾ, ಫ್ರಾನ್ಸ್, ಚೀನಾ ಇತರೆ ಆಫ್ರಿಕೇತರ ರಾಷ್ಟ್ರಗಳು.

**ಮಹತ್ವ**:

ಇಲ್ಲಿಯವರೆಗೆ ಬ್ಯಾಂಕಿನ ವಾರ್ಷಿಕ ಸಮ್ಮೇಳನಗಳು ಆಫ್ರಿಕಾದ ಖಂಡದಲ್ಲಿ ಮಾತ್ರವೇ ನಡೆದಿವೆ. 2017ರಲ್ಲಿ ಮೊದಲ ಬಾರಿಗೆ ಬ್ಯಾಂಕ್ ತನ್ನ ಮೊದಲ ವಾರ್ಷಿಕ ಸಭೆಯು ಆಫ್ರಿಕಾದ ಹೊರಗೆ ಗುಜರಾತಿನ ಗಾಂಧಿನಗರದಲ್ಲಿ ನಡೆಯಿತು. ಈ ಸಭೆಯನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದರು. ದೆಹಲಿಯಲ್ಲಿ 2015ರಲ್ಲಿ ನಡೆದ ಭಾರತ ಆಫ್ರಿಕಾ ಫೋರಮ್ ಶೃಂಗಸಭೆಯ ಬೆನ್ನಲ್ಲೇ ಈ ಸಭೆಯನ್ನು ಭಾರತದಲ್ಲಿ ಆಯೋಜಿಸಲಾಗಿದ್ದು ವಿಶೇಷ.

## <u>ಸೆಪ್ಟೆಂಬರ್ ನಲ್ಲಿ ಇಂಡಿಯಾ ಮೊಬೈಲ್ ಕಾಂಗ್ರೆಸ್</u>

ಭಾರತ ಮೊಬೈಲ್ ಕಾಂಗ್ರೆಸ್ 2017 (ಐಎಂಸಿ 2017) ನವದೆಹಲಿಯಲ್ಲಿ ಸೆಪ್ಟೆಂಬರ್ 27 ರಿಂದ 297 ರವರೆಗೆ ಮೂರು ದಿನಗಳ ಕಾಲ ನಡೆಯಲಿದೆ ಎಂದು ಕೇಂದ್ರ ಸಂವಹನ ಸಚಿವಾಲಯ ಖಾತೆ ಸಚಿವ ಮನೋಜ್ ಸಿನ್ಹಾ ಅವರು ಘೋಷಿಸಿದ್ದಾರೆ. ಇದೇ ಮೊದಲ ಬಾರಿಗೆ ಭಾರತವು ಮೊಬೈಲ್ ಕಾಂಗ್ರೆಸ್ ಅನ್ನು ಆಯೋಜಿಸುತ್ತಿದೆ. ಚೀನಾದ ನಂತರ ಟೆಲಿಕಾಂ ಮಾರುಕಟ್ಟೆಯಲ್ಲಿ ಭಾರತ ಎರಡನೇ ಸ್ಥಾನದಲ್ಲಿದೆ. 1.18 ಶತಕೋಟಿ ಚಂದಾದಾರರ ಸಂಖ್ಯೆಯನ್ನು ಭಾರತ ಹೊಂದಿದೆ.

**ಪ್ರಮುಖಾಂಶಗಳು**:

ಇಂಡಿಯಾ ಮೊಬೈಲ್ ಕಾಂಗ್ರೆಸ್ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ (ಐಸಿಟಿ) ಕ್ಷೇತ್ರದ ಮತ್ತು ಸರ್ಕಾರದ ಎಲ್ಲಾ ಪಾಲುದಾರರನ್ನು ಒಗ್ಗೂಡಿಸುವ ಅತಿ ದೊಡ್ಡ ವೇದಿಕೆಯನಿಸಲಿದೆ. ಸರ್ಕಾರಿ ಸಂಸ್ಥೆಗಳು, ಟೆಲಿಕಾಂ ಸೇವೆ ಒದಗಿಸುವ ಸಂಸ್ಥೆಗಳು, ಟೆಲಿಕಾಂ ಉಪಕರಣ ತಯಾರಕರು, ಹ್ಯಾಂಡ್ಸೆಟ್ ತಯಾರಕರು ಮತ್ತು ಅಪ್ಲಿಕೇಶನ್ ಪೂರೈಕೆದಾರರು ಭಾಗವಹಿಸಲಿದ್ದಾರೆ.

ಶಾಂಘೈ ಮತ್ತು ಬಾರ್ಸಿಲೋನಾದ ಮೊಬೈಲ್ ವರ್ಲ್ಡ್ ಕಾಂಗ್ರೆಸ್ ನಂತಯೇ ಇಂಡಿಯಾ ಮೊಬೈಲ್ ಕಾಂಗ್ರೆಸ್ ಅನ್ನು ಆಯೋಜಿಸಲಾಗುತ್ತಿದ್ದು, ಈ ಕಾರ್ಯಕ್ರಮವು ಭಾರತೀಯ ಟೆಲಿಕಾಂ ಉದ್ಯಮವನ್ನು ಅಂತಾರಾಷ್ಟ್ರೀಯ ಉದ್ಯಮದೊಂದಿಗೆ ಪ್ರತಿಸ್ಪರ್ಧಿಯಾಗಿ ಹೊರಹೊಮ್ಮುವ ಉದ್ದೇಶವನ್ನು ಹೊಂದಿದೆ. ಈ ಮೊಬೈಲ್ ಕಾಂಗ್ರೆಸಿನಲ್ಲಿ ಅತ್ಯಾಕರ್ಷಕ ಹೊಸ ಉತ್ಪನ್ನಗಳು ಮತ್ತು ನಾವೀನ್ಯತೆಗಳನ್ನು ಪ್ರದರ್ಶಿಸಲಾಗುವುದು. ಸೆಲ್ಯುಲರ್ ಆಪರೇಟರ್ಸ್ ಅಸೋಸಿಯೇಶನ್ ಆಫ್ ಇಂಡಿಯಾ (COAI) ಮತ್ತು ಇತರೆ ಪಾಲುದಾರಿಕೆ ಸಂಸ್ಥೆಗಳ ಸಹಯೋಗದೊಂದಿಗೆ ಈ ಕಾರ್ಯಕ್ರಮವನ್ನು ದೂರಸಂಪರ್ಕ ಇಲಾಖೆ ಆಯೋಜಿಸುತ್ತದೆ.

ಅಮೆರಿಕ, ಯುಕೆ, ಸ್ವೀಡನ್, ಫಿನ್ಲ್ಯಾಂಡ್, ಜರ್ಮನಿ, ಕೊರಿಯಾ, ಫಿಲಿಪೈನ್ಸ್, ಭೂತಾನ್ ಮತ್ತು ಜಪಾನ್ ದೇಶಗಳ 5000 ಪ್ರತಿನಿಧಿಗಳು ಕಾಂಗ್ರೆಸ್ನಲ್ಲಿ ಭಾಗವಹಿಸಲಿದ್ದಾರೆ. ಇದಲ್ಲದೆ, ಹುವಾವೇ,

www.karunaduexams.com

ಎರಿಕ್ಸನ್, ನೋಕಿಯಾ, ಭಾರ್ತಿ ಏರ್ಟೆಲ್, ವೊಡಾಫೋನ್ ಮತ್ತು ಐಡಿಯಾ ಸೆಲ್ಯುಲಾರ್‌ಗಳಂತಹ ಟೆಲಿಕಾಂ ದೈತ್ಯ ಸಂಸ್ಥೆಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲ್ಲಿವೆ ಎಂದು ನಿರೀಕ್ಷಿಸಲಾಗಿದೆ.

## ಹೊಸ ಒಂದು ರೂಪಾಯಿ ನೋಟು ಶೀಘ್ರ ಚಾಲನೆಗೆ



ಹೊಸ ಒಂದು ರೂಪಾಯಿ ನೋಟ್ ಗಳನ್ನು ಸರಕಾರ ಮುದ್ರಿಸಿದ್ದು, ಶೀಘ್ರದಲ್ಲೇ ಚಲಾವಣೆಗೆ ತರುವುದಾಗಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಪ್ರಕಟಿಸಿದೆ. ಒಂದು ರೂಪಾಯಿ ನೋಟುಗಳನ್ನು 1994 ರಲ್ಲಿ ಸ್ಥಗಿತಗೊಳಿಸಲಾಗಿತ್ತು. ಒಂದು ರೂಪಾಯಿ ನಾಣ್ಯಗಳಿಗೆ ಹೋಲಿಸಿದರೆ ನೋಟುಗಳ ಮುದ್ರಣ ದುಬಾರಿ ಎನಿಸಿದ ಕಾರಣ ಚಲಾವಣೆಯನ್ನು ನಿಲ್ಲಿಸಲಾಗಿತ್ತು. ಅಧಿಕ ಮುಖಬೆಲೆ ನೋಟುಗಳನ್ನು ಮುದ್ರಿಸುವ ಸಲುವಾಗಿ ಮುಂದಿನ ವರ್ಷಗಳಲ್ಲಿ ರೂ. 2 ಮತ್ತು ರೂ. 5 ಮುಖಬೆಲೆಯ ನೋಟುಗಳ ಮುದ್ರಣವನ್ನು ನಿಲ್ಲಿಸುವುದಾಗಿ ಹೇಳಿದೆ. ಆದಾಗ್ಯೂ, ಈ ಹಳೆಯ ನೋಟುಗಳು ಚಲಾವಣೆಯಲ್ಲಿ ಮುಂದುವರಿಯಲಿವೆ ಎಂದು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಹೇಳಿದೆ.

**ಪ್ರಮುಖಾಂಶಗಳು**:

ಹೊಸ ರೂ 1 ನೋಟುಗಳು ಗುಲಾಬಿ-ಹಸಿರು ಬಣ್ಣವನ್ನು ಹೊಂದಿರಲಿವೆ. ಈ ನೋಟು ರೂಪಾಯಿ ಸಂಕೇತವನ್ನು ಹೊಂದಿರಲಿದ್ದು 8.3 X 9.7 ಸೆಂಮೀ ಇರಲಿದೆ.

## BSNL ನಿಂದ ಸ್ಯಾಟೆಲ್ಲೈಟ್ ಫೋನ್ ಸೇವೆ ಆರಂಭ

ಸರ್ಕಾರಿ ಸ್ವಾಮ್ಯದ ಬಿಎಸ್‌ಎನ್‌ಎಲ್ ಸ್ಯಾಟಲೈಟ್ ಫೋನ್ ಸೇವೆಯನ್ನು ಆರಂಭಿಸಿದೆ. ಅಂತಾರಾಷ್ಟ್ರೀಯ ಮೊಬೈಲ್ ಉಪಗ್ರಹ ಸಂಘಟನೆ (ಇನ್ ಮಾರ್‌ಸ್ಯಾಟ್) ಮೂಲಕ ಈ ಸೇವೆ ಒದಗಿಸಲಾಗುತ್ತಿದೆ. ಈ ಸೇವೆಗೆ ಅಗತ್ಯವಾದ ಭೂ ವಿನಿಮಯ ಕೇಂದ್ರವನ್ನು ಪುಣೆಯಲ್ಲಿ ಪ್ರಾರಂಭಿಸಲಾಗಿದೆ. ಸದ್ಯ ಸ್ಯಾಟಲೈಟ್ ಫೋನ್ ಸೇವೆಯನ್ನು ಟಾಟಾ ಕಮ್ಯುನಿಕೇಷನ್ಸ್ ಲಿ. (ಟಿಸಿಎಲ್ ) ಒದಗಿಸುತ್ತಿದೆ. ಜೂನ್ 30ರಿಂದ ಈ ಸೇವೆ ಸ್ಥಗಿತವಾಗಲಿದೆ.

**ಸ್ಯಾಟಲೈಟ್ ಫೋನ್ :**

- ಸ್ಯಾಟಲೈಟ್ ಫೋನ್ ಮೊಬೈಲ್ ಫೋನ್ ಮಾದರಿಯಲ್ಲಿ ಕಾರ್ಯನಿರ್ವಹಿಸಲಿದೆ. ದೊಡ್ಡ ಉಪಕರಣ ಇರುವುದಿಲ್ಲ.
- ಈ ಫೋನ್ ಅನ್ನು ವಿಕೋಪ ಪರಿಹಾರ ಸಂಸ್ಥೆಗಳು, ಪೊಲೀಸ್, ರೈಲ್ವೆ, ಗಡಿ ಭದ್ರತಾ ಪಡೆ, ಸರ್ಕಾರದ ಇತರ ಸಂಸ್ಥೆಗಳು, ಹಡಗುಗಳು/ದೋಣಿಗಳು *ಬಳಸಲಾಗುವುದು.*

**ಇನ್‌ಮಾರ್‌ಸ್ಯಾಟ್?**

ಹಡಗುಗಳು ಸಮುದ್ರ ಮಧ್ಯೆ ಇದ್ದಾಗ ಬಂದರಿನೊಂದಿಗೆ ಸಂಪರ್ಕ ಸಾಧಿಸಲು ಮತ್ತು ಅಪಾಯದ ಸಂದರ್ಭದಲ್ಲಿ ನೆರವು ಕೋರಲು 1979ರಲ್ಲಿ ಅಂತರರಾಷ್ಟ್ರೀಯ ಜಲ ಸಾರಿಗೆ

www.karunaduexams.com

ಸಂಘಟನೆ (ಐಎಂಒ) ಈ ಸೇವೆಯನ್ನು ಆರಂಭಿಸಿತು. ಇನ್‌ಮಾರ್‌ಸ್ಯಾಟ್ ಒಟ್ಟು 14 ಉಪಗ್ರಹಗಳನ್ನು ಹೊಂದಿದೆ.

**ಮಹತ್ವ**:

ಈ ತನಕ ವಿದೇಶಿ ಸಂಸ್ಥೆಗಳು ಪೂರೈಸಿರುವ ಉಪಕರಣಗಳನ್ನು ಭದ್ರತಾ ಸಂಸ್ಥೆಗಳು ಬಳಸುತ್ತಿದ್ದವು. ಇವುಗಳ ವಿನಿಮಯ ಕೇಂದ್ರಗಳು ಭಾರತದಿಂದ ಹೊರಗೆ ಇವೆ. ಹಾಗಾಗಿ ಇಂತಹ ಉಪಕರಣಗಳನ್ನು ಬಳಸಬಾರದು ಎಂದು ಗುಪ್ತಚರ ಸಂಸ್ಥೆಗಳು ಎಚ್ಚರಿಸಿದ್ದವು. ದೇಶದೊಳಗೆ ವಿನಿಮಯ ಕೇಂದ್ರ ಹೊಂದುವ ಬಹುಕಾಲದ ಬೇಡಿಕೆ ಈಗ ಈಡೇರಿದೆ.

**<u>IAMAI ಅಧ್ಯಕ್ಷರಾಗಿ ಗೂಗಲ್ನ ರಾಜನ್ ಆನಂದನ್ ನೇಮಕ</u>**



ಆಗ್ನೇಯ ಏಷ್ಯಾ ಮತ್ತು ಭಾರತಕ್ಕೆ ಗೂಗಲ್ನ ಉಪಾಧ್ಯಕ್ಷರಾಗಿದ್ದ ರಾಜನ್ ಆನಂದನ್ ಅವರು ಇಂಟರ್ನೆಟ್ ಮತ್ತು ಮೊಬೈಲ್ ಅಸೋಸಿಯೇಷನ್ ಆಫ್ ಇಂಡಿಯಾ (ಐಎಎಂಎಐ)ದ ನೂತನ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಫ್ರೀಚಾರ್ಜ್ ಸಹ-ಸಂಸ್ಥಾಪಕ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕುನಾಲ್ ಷಾ ಅವರ ಉತ್ತರಾಧಿಕಾರಿಯಾಗಿ ರಾಜನ್ ನೇಮಕಗೊಂಡಿದ್ದಾರೆ. ಮೇಕ್ ಮೈ ಟ್ರಿಪ್ ಅಧ್ಯಕ್ಷ ಮತ್ತು ಗುಂಪು CEO ದೀಪ್ ಕಲ್ರಾ ಅವರು IAMAIನ ಉಪ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಫೇಸ್ಬುಕ್ನ ವ್ಯವಸ್ಥಾಪಕ ನಿರ್ದೇಶಕ (ಭಾರತ ಮತ್ತು ದಕ್ಷಿಣ ಏಷ್ಯಾ), ಉಮಾಂಗ್ ಬೇಡಿ ಐಎಎಂಎಐನ ಹೊಸ ಖಜಾಂಚಿಯಾಗಿದ್ದು ಸಬೊ ರೇ IAMAI ಅಧ್ಯಕ್ಷರಾಗಿ ಮುಂದುವರಿದಿದ್ದಾರೆ.

**IAMAI ಮುಂದಿದೆ ಗುರಿ<u>:</u>**

ಹೊಸ ಮಂಡಳಿ ಅಂತರ್ಜಾಲ ಸಂಪರ್ಕವನ್ನು ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸುಧಾರಿಸಲು ಪ್ರಯತ್ನಿಸಬೇಕಿದೆ. 906 ಮಿಲಿಯನ್ ಜನಸಂಖ್ಯೆಯಲ್ಲಿ 156 ಮಿಲಿಯನ್ ಜನರು ಗ್ರಾಮೀಣ ಪ್ರದೇಶಗಳಲ್ಲಿ ಅಂತರ್ಜಾಲವನ್ನು ಬಳಸುತ್ತಿದ್ದಾರೆಂದು ಅಂದಾಜಿಸಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ 750 ಮಿಲಿಯನ್ ಬಳಕೆದಾರರಿಗೆ ಇಂಟರ್ನೆಟ್ ಸೌಲಭ್ಯ ಕಲ್ಪಿಸುವ ಕ್ರಮಗಳನ್ನು IAMAI ಕೈಗೊಳ್ಳಬೇಕಿದೆ.

**IAMAI:**

IAMAI ಸೊಸೈಟೀಸ್ ಆಕ್ಟ್, 1986 ಅಡಿಯಲ್ಲಿ ನೋಂದಾಯಿಸಲಾಗಿರುವ ಲಾಭರಹಿತ ಉದ್ಯಮ ಸಂಸ್ಥೆಯಾಗಿದೆ. ಇದನ್ನು 2004 ರಲ್ಲಿ ಸ್ಥಾಪಿಸಲಾಗಿದೆ. ಮೊಬೈಲ್ ಮತ್ತು ಹಲವಾರು ಆನ್ಲೈನ್ ಸೇವೆಗಳಿಗೆ ಸಂಬಂಧಿಸಿದ ಮೌಲ್ಯ ಸೇರ್ಪಡೆ ಸೇವೆಗಳನ್ನು ಸುಧಾರಿಸುವುದು ಮತ್ತು ವಿಸ್ತರಿಸುವುದು ಇದರ ಗುರಿಯಾಗಿದೆ.

www.karunadu exams.com

## ಮುಂಬೈ ಮತ್ತು ಕೋಟಾ ವಿಶ್ವದ ಜನದಟ್ಟಣೆ ನಗರಗಳು



ವಿಶ್ವ ಆರ್ಥಿಕ ವೇದಿಕೆಯು ವಿಶ್ವಸಂಸ್ಥೆ-ಆವಾಸಸ್ಥಾನದ ಮಾಹಿತಿಯನ್ನು ಉದಾಹರಿಸಿ ಭಾರತದ ಮುಂಬೈ ಮತ್ತು ಕೋಟಾವನ್ನು ವಿಶ್ವದ ಅತಿ ಹೆಚ್ಚು ಜನದಟ್ಟಣೆ ನಗರಗಳು ಎಂದು ಗುರುತಿಸಿದೆ. ಪಟ್ಟಿಯಲ್ಲಿ ಬಾಂಗ್ಲಾದೇಶದ ರಾಜಧಾನಿ ಢಾಕ ಮೊದಲ ಸ್ಥಾನದಲ್ಲಿದೆ. ದೇಶದ ಆರ್ಥಿಕ ರಾಜಧಾನಿ ಮುಂಬೈ ಎರಡನೇ ಸ್ಥಾನದಲ್ಲಿದೆ. ಢಾಕಾ ಪ್ರತಿ ಚದರ ಕಿಲೋಮೀಟರಿಗೆ 44,500 ಜನಸಾಂದ್ರತೆ ಹೊಂದಿದೆ. ಮುಂಬೈ ಒಂದು ಚದರ ಕಿಲೋಮೀಟರಿಗೆ 31,700 ಜನಸಾಂದ್ರತೆಯನ್ನು ಹೊಂದಿದೆ. ಭಾರತದ ಮತ್ತೊಂದು ನಗರ ರಾಜಸ್ಥಾನದ ಕೋಟಾ ಪ್ರತಿ ಚದರ ಕಿಲೋಮೀಟರಿಗೆ 12,100 ಜನಸಾಂದ್ರತೆಯನ್ನು ಹೊಂದಿದ್ದು, ಏಳನೇ ಸ್ಥಾನದಲ್ಲಿದೆ.

ಪ್ರತಿ ಚದರ ಕಿಲೋಮೀಟರಿಗೆ 19,700 ಜನಸಂಖ್ಯೆ ಹೊಂದಿರುವ ಕೊಲಂಬಿಯಾದ ಮೆಡೆಲಿನ್ ಮೂರನೇ ಸ್ಥಾನದಲ್ಲಿದೆ, ನಂತರ ಫಿಲಿಪ್ಪೀನ್ಸ್‌ನ ಮನಿಲಾ 14,800 ಜನಸಾಂದ್ರತೆಯೊಂದಿಗೆ 4ನೇ ಸ್ಥಾನದಲ್ಲಿದೆ; ಮೊರಾಕೊದ ಕಾಸಾಬ್ಲಾಂಕಾ 5ನೇ ಸ್ಥಾನ (14,200 ಜನಸಾಂದ್ರತೆ), ನೈಜೀರಿಯಾದ ಲಾಗೋಸ್ 6ನೇ ಸ್ಥಾನ(13,300 ಜನ ಸಾಂದ್ರತೆ), ಸಿಂಗಪುರ 8 ನೇ ಸ್ಥಾನ (10,200) ಸ್ಥಾನದಲ್ಲಿವೆ.

ವಿಶ್ವದ ಜನಸಂಖ್ಯೆಯ ಅರ್ಧಕ್ಕಿಂತಲೂ ಹೆಚ್ಚು ಜನರು ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆಂದು ಅಂದಾಜಿಸಲಾಗಿದೆ. 2050ರ ಹೊತ್ತಿಗೆ ಈ ಪ್ರಮಾಣ ಶೇ.66% ಕ್ಕೆ ಏರಿಕೆಯಾಗಲಿದೆ ಎಂದು ನಿರೀಕ್ಷಿಸಲಾಗಿದೆ. ಏಷ್ಯಾ ಮತ್ತು ಆಫ್ರಿಕಾದಲ್ಲಿ ಶೇ. 90% ಹೆಚ್ಚಳವಾಗಲಿದೆ.


**ವಿಶ್ವಸಂಸ್ಥೆ-ಆವಾಸಸ್ಥಾನ (UN-Habitat):**

ಯುಎನ್-ಹ್ಯಾಬಿಟೇಟ್ ಅಥವಾ ಯುನೈಟೆಡ್ ನೇಷನ್ಸ್ ಹ್ಯೂಮನ್ ಸೆಟ್ಲ್‌ಮೆಂಟ್ಸ್ ಪ್ರೋಗ್ರಾಂ ವಿಶ್ವಸಂಸ್ಥೆಯ ವಿಶೇಷ ಏಜೆನ್ಸಿಯಾಗಿದ್ದು, ಸಮರ್ಥನೀಯ ನಗರ ಅಭಿವೃದ್ಧಿ ಮತ್ತು ಮಾನವ ನೆಲೆ ಅಭಿವೃದ್ಧಿಪಡಿಸಲು ಸ್ಥಾಪಿಸಲಾಗಿದೆ. 1978 ರಲ್ಲಿ ಸ್ಥಾಪನೆಗೊಂಡಿದ್ದು, ಇದರ ಕೇಂದ್ರ ಕಚೇರಿ ಕೀನ್ಯಾದ ನೈರೋಬಿಯಲ್ಲಿದೆ.

www.karunaduexams.com

# ರಾಷ್ಟ್ರೀಯ

**ಆಂಧ್ರಪ್ರದೇಶ ಸಿಎಂ ಚಂದ್ರಬಾಬು ನಾಯ್ಡು ರವರಿಗೆ USIBC ಪ್ರಶಸ್ತಿ**



ಆಂಧ್ರ ಪ್ರದೇಶದ ಮುಖ್ಯಮಂತ್ರಿ ಎನ್ ಚಂದ್ರಬಾಬು ನಾಯ್ಡು ಅವರನ್ನು ಪ್ರತಿಷ್ಠಿತ ಯುಎಸ್-ಇಂಡಿಯಾ ಬ್ಯುಸಿನೆಸ್ ಕೌನ್ಸಿಲ್ (USIBC)ನ ಪರಿವರ್ತನ ಮುಖ್ಯಮಂತ್ರಿ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಭಾರತ ಮತ್ತು ಅಮೆರಿಕ ಪಾಲುದಾರಿಕೆ ಸಂಬಂಧವನ್ನು ಸುಧಾರಿಸುವಲ್ಲಿ ಶ್ರಮಿಸಿದಕ್ಕಾಗಿ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಮೇ 8 ರಂದು ಸಿಲಿಕಾನ್ ವ್ಯಾಲಿಯಲ್ಲಿ ನಡೆಯಲಿರುವ USIBC ವೆಸ್ಟ್ ಕೋಸ್ಟ್ ಶೃಂಗಸಭೆಯಲ್ಲಿ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗುವುದು. ಈ ಶೃಂಗಸಭೆಯಲ್ಲಿ ಭಾರತದ ಅಧಿಕಾರಿಗಳು ಸೇರಿದಂತೆ ಮಾಹಿತಿ ಮತ್ತು ತಂತ್ರಜ್ಞಾನ, ಆಹಾರ ಸಂಸ್ಕರಣೆ, ಆರೋಗ್ಯ, ಸ್ವಚ್ಛ ಇಂಧನ, ಡಿಜಿಟಲ್ ವ್ಯವಹಾರ ಹಾಗೂ ಇನ್ನಿತರ 150 ಕೈಗಾರಿಕೆ ವಲಯಗಳ ಪ್ರಮುಖ ನಾಯಕರು ಭಾಗವಹಿಸಲಿದ್ದಾರೆ.

ಇದಲ್ಲದೆ ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಕಾರ್ಯದರ್ಶಿ ಅರುಣ ಸುಂದರರಾಜನ್ ಅವರಿಗೆ ಪರಿವರ್ತನ ನಾಯಕತ್ವ ಪ್ರಶಸ್ತಿಯನ್ನು ನೀಡಲಾಗುವುದು. ಕಳೆದ ವರ್ಷ ನೀತಿ ಆಯೋಗದ ಸಿಇಓ ಅಮಿತಾಬ್ ಕಾಂತ್ ಅವರಿಗೆ ಈ ಪ್ರಶಸ್ತಿಯನ್ನು ನೀಡಲಾಗಿತ್ತು.

**USIBC**:

ಅಮೆರಿಕ ಮತ್ತು ಭಾರತದಲ್ಲಿ ವ್ಯವಹಾರ ಕ್ಷೇತ್ರಗಳಲ್ಲಿ ಬಂಡವಾಳ ಹೂಡಿಕೆಯನ್ನು ಉತ್ತೇಜಿಸುವ ಸಲುವಾಗಿ USIBC ಯನ್ನು 1975ರಲ್ಲಿ ಸ್ಥಾಪಿಸಲಾಗಿದೆ. ಉಭಯ ರಾಷ್ಟ್ರಗಳ ನಡುವೆ ವ್ಯಾಪಾರ ಮತ್ತು ಬಂಡವಾಳವನ್ನು ಪ್ರೋತ್ಸಾಹಿಸುವಲ್ಲಿ ಈ ಸಂಸ್ಥೆ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿದೆ. ಭಾರತದ ಪ್ರಮುಖ ವ್ಯಾಪಾರ ಒಕ್ಕೂಟಗಳಾದ ಫಿಕ್ಕಿ, ಸಿಐಐ ಮತ್ತು ನಾಸ್ಕಾಂನೊಂದಿಗೆ ಪಾಲುದಾರಿಕೆ ಹೊಂದುವ ಮೂಲಕ ಈ ಸಂಸ್ಥೆ ಕಾರ್ಯನಿರ್ವಹಿಸುತ್ತಿದೆ. ಮಾಸ್ಟರ್ ಕಾರ್ಡ್ ನ ಸಿಇಓ ಮತ್ತು ಅಧ್ಯಕ್ಷ ಅಜಯ್ ಬಂಗ ಅವರು USIBC ನ ಪ್ರಸ್ತುತ ಅಧ್ಯಕ್ಷರಾಗಿದ್ದಾರೆ.

**ಹೈಕೋರ್ಟ್ನ ಮೊದಲ ಮಹಿಳಾ ಮುಖ್ಯ ನ್ಯಾಯಮೂರ್ತಿ ನ್ಯಾ.ಲೀಲಾ ಸೇಠ್ ನಿಧನ**



ಭಾರತದಲ್ಲಿ ರಾಜ್ಯ ಹೈಕೋರ್ಟ್ ಒಂದರ ಮೊದಲ ಮಹಿಳಾ ಮುಖ್ಯ ನ್ಯಾಯಮೂರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದ ನ್ಯಾ.ಲೀಲಾ ಸೇಠ್(86) ರಾತ್ರಿ ನಿಧನರಾದರು. ಹೃದಯಾಘಾತದಿಂದ ನೋಯಿಡಾದಲ್ಲಿನ ತನ್ನ ನಿವಾಸದಲ್ಲಿ ನಿವೃತ್ತ ಮುಖ್ಯ ನ್ಯಾಯಮೂರ್ತಿ ಲೀಲಾ ಸೇಠ್ ನಿಧನರಾಗಿದ್ದಾರೆ. ಪ್ರಸಿದ್ಧ ಲೇಖಕ ವಿಕ್ರಮ್ ಸೇಠ್ ಇವರ ಮೂವರು ಮಕ್ಕಳಲ್ಲಿ ಒಬ್ಬರು.

- ಲೀಲಾ ಸೇಠ್ ಅವರು 1959ರಲ್ಲಿ ಕಲ್ಕತ್ತಾ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟಿನಲ್ಲಿ ಅಡ್ವೋಕೇಟ್ ಆಗಿ ವೃತ್ತಿಯನ್ನು ಆರಂಭಿಸಿದರು.

www.karunaduexams.com

- ಲಂಡನ್ ಬಾರ್ ಎಗ್ಸಾಮ್‌ನಲ್ಲಿ ಟಾಪರ್ ಆದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಯನ್ನು ಹೊಂದಿದ್ದಾರೆ.
- ಬಿಹಾರ ಮತ್ತು ಪಶ್ಚಿಮ ಬಂಗಾಳ ಸರ್ಕಾರಗಳ ವಕೀಲರ ಸಮಿತಿಯ ಸದಸ್ಯರಾಗಿದ್ದರು.
- 1980ರಲ್ಲಿ ದೆಹಲಿ ಹೈಕೋರ್ಟಿನ ನ್ಯಾಯಾಧೀಶೆಯಾಗಿ ನೇಮಕ.
- 1991ರಲ್ಲಿ ಹಿಮಾಚಲ ಪ್ರದೇಶ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿ ನೇಮಕ.
- ದೆಹಲಿ ಹೈಕೋರ್ಟ್‌ನ ಮೊದಲ ಮಹಿಳಾ ನ್ಯಾಯಮೂರ್ತಿ ಹಾಗೂ ದೇಶದ ಮೊದಲ ಮಹಿಳಾ ಮುಖ್ಯ ನ್ಯಾಯಮೂರ್ತಿ (ಹಿಮಾಚಲ ಪ್ರದೇಶ ರಾಜ್ಯ ಹೈಕೋರ್ಟ್) ಎಂಬ ಹೆಗ್ಗಳಿಕೆ ಲೀಲಾ ಅವರದು.
- ಲೀಲಾ ಸೇಠ್ ಅವರು 15ನೇ ಕಾನೂನು ಆಯೋಗ (1997-2000) ಸದಸ್ಯರಾಗಿ ಸಹ ಕಾರ್ಯನಿರ್ವಹಿಸಿದ್ದರು.
- ದೆಹಲಿ ಗ್ಯಾಂಗ್ ರೇಪ್ ಹಿನ್ನಲೆಯಲ್ಲಿ ಕ್ರಿಮಿನಲ್ ಕಾನೂನುಗಳ ತಿದ್ದುಪಡಿ ತರಲು ರಚಿಸಲಾದ ನ್ಯಾ. ವರ್ಮಾ ಸಮಿತಿಯ ಸದಸ್ಯರು ಸಹ ಆಗಿದ್ದರು.
- 'On Balance', 'We, the Children of India' (2010), 'Talking of Justice: People's Rights in Modern India' (2014) ಸೇಠ್ ಅವರು ಬರೆದಿರುವ ಪುಸ್ತಕಗಳು.

**<u>ನ್ಯಾಯಾಂಗ ನಿಂದನೆ: ನ್ಯಾಯಾಮೂರ್ತಿ ಕರ್ಣನ್ ಗೆ 6 ತಿಂಗಳ ಶಿಕ್ಷೆ</u>**



ಕಲ್ಕತ್ತಾ ನ್ಯಾಯಾಮೂರ್ತಿ ಸಿ.ಎಸ್. ಕರ್ಣನ್ ಅವರಿಗೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಾಮೂರ್ತಿ ನ್ಯಾ.ಖೇಹರ್ ಸಿಂಗ್ ನೇತೃತ್ವದ ಏಳು ಮಂದಿ ನ್ಯಾಯಾಧೀಶರ ಪೀಠ 6 ತಿಂಗಳ ಜೈಲ ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದೆ. ನ್ಯಾಯಾಂಗ ನಿಂದನೆ ಹಿನ್ನಲೆಯಲ್ಲಿ ಕರ್ಣನ್ ಅವರಿಗೆ ಶಿಕ್ಷೆಯನ್ನು ವಿಧಿಸಲಾಗಿದೆ. ಹೈಕೋರ್ಟ್ ನ್ಯಾಯಾಧೀಶರೊಬ್ಬರಿಗೆ ನ್ಯಾಯಾಂಗ ನಿಂದನೆ ಹಿನ್ನಲೆಯಲ್ಲಿ ಶಿಕ್ಷೆ ವಿಧಿಸುತ್ತಿರುವುದು ಇದೇ ಮೊದಲು. ಇದೇ ವೇಳೆ ಕರ್ಣನ್ ಅವರು ಹೊರಡಿಸುವ ಯಾವುದೇ ಆದೇಶವನ್ನು ಪ್ರಕಟಿಸದಂತೆ ಪ್ರಿಂಟ್ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳಿಗೆ ಸುಪ್ರೀಂ ಕೋರ್ಟ್ ಆದೇಶಿಸಿದೆ.

**ಹಿನ್ನಲೆ:**

ನ್ಯಾ. ಕರ್ಣನ್ ಅವರು ಕೆಲವು ನ್ಯಾಯಾಧೀಶರ ವಿರುದ್ಧ ಭ್ರಷ್ಟಾಚಾರ, ಜಾತಿ ನಿಂದನೆ ಆರೋಪ ವರಿಸಿ ನಿಂದಿಸಿದ ಹಿನ್ನಲೆಯಲ್ಲಿ ಮುಖ್ಯನ್ಯಾಯಾಮೂರ್ತಿ ನ್ಯಾ.ಖೇಹರ್ ಸಿಂಗ್ ಅವರು ಕರ್ಣನ್ ವಿರುದ್ಧ ನ್ಯಾಯಾಂಗ ನಿಂದನೆ ನೋಟಿಸು ಜಾರಿ ಮಾಡಿದ್ದರು. ಮಾರ್ಚ್ 1 ರಂದು ಕರ್ಣನ್ ಅವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲು ವೈದ್ಯರ ತಂಡವನ್ನು ರಚಿಸಿ ವರದಿಯನ್ನು ಸಲ್ಲಿಸುವಂತೆ ಆದೇಶಿಸಿತ್ತು. ಆದರೆ ನ್ಯಾ. ಕರ್ಣನ್ ಅವರು ಸುಪ್ರೀಂ ಕೋರ್ಟಿನ ಆದೇಶವನ್ನು ತಿರಸ್ಕರಿಸಿದರಲ್ಲದೆ, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಜೆಎಸ್ ಖೆಹರ್ ಹಾಗೂ ಇತರೆ 7 ಮಂದಿ ನ್ಯಾಯಾಧೀಶರಿಗೆ ಐದು ವರ್ಷ ಕಠಿಣ ಸಜೆ ಮತ್ತು 1 ಲಕ್ಷ ರು.ದಂಡ ವಿಧಿಸಿ ಸುಪ್ರೀಂಕೋರ್ಟ್ ನ ಕೆಂಗಣ್ಣಿಗೆ ತುತ್ತಾಗಿದ್ದರು. ಅದರ ಪರಿಣಾಮ ಎಂಬಂತೆ ಇದೀಗ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಕರ್ಣನ್ ಅವರಿಗೆ 6 ತಿಂಗಳ ಸೆರೆವಾಸ ಶಿಕ್ಷೆ ನೀಡಿ ಆದೇಶ ಹೊರಡಿಸಿದೆ.

www.karunaduexams.com

**<u>ಒಡಿಶಾದ ಸುಲ್ಗಿರಿ ಮತ್ತು ಸ್ವಾಲ್ಗಿರಿ ಸಮುದಾಯಗಳನ್ನು ಪರಿಶಿಷ್ಟ ಜಾತಿಗೆ ಸೇರ್ಪಡೆ</u>**





ಒಡಿಶಾದ ಸುಲ್ಗಿರಿ ಮತ್ತು ಸ್ವಾಲ್ಗಿರಿ ಸಮುದಾಯಗಳನ್ನು ಪರಿಶಿಷ್ಟ ಜಾತಿಗಳನ್ನಾಗಿ ಸೂಚಿಸಲಾಗಿದೆ. ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರು ಸಂವಿಧಾನದ (ಪರಿಶಿಷ್ಟ ಜಾತಿ) ಆದೇಶ (ತಿದ್ದುಪಡಿ) ಕಾಯಿದೆ, 2017 ಕ್ಕೆ ಅನುಮೋದನೆ ನೀಡಿದ್ದಾರೆ. ಕಳೆದ ಮಾರ್ಚಿನಲ್ಲಿ ಲೋಕಸಭೆ ಮಸೂದೆಗೆ ಅಂಗೀಕಾರ ನೀಡಿತ್ತು. ಆ ನಂತರ ರಾಜ್ಯಸಭೆ ಮಸೂದೆಯನ್ನು ಅಂಗೀಕರಿತ್ತು. ಅದರಂತೆ ಸುಲ್ಗಿರಿ, ಸ್ವಾಲ್ಗಿರಿ ಸಮುದಾಯಗಳನ್ನು ಒಡಿಶಾದ ಪರಿಷ್ಕೃತ ಪಟ್ಟಿಯಲ್ಲಿ ಪರಿಶಿಷ್ಟ ಜಾತಿಗಳಂತೆ ಸೂಚಿಸಲಾಗಿದೆ.

**ಅನುಕೂಲ**:

ಸಂವಿಧಾನದ ವಿಧಿ 341ರ ನಿಬಂಧನೆಗಳ ಅಡಿಯಲ್ಲಿ ಸೂಚಿಸಲಾದ ಪರಿಶಿಷ್ಟ ಜಾತಿ ಸಮುದಾಯದವರಿಗೆ ಕೆಲವು ಸೌಲಭ್ಯಗಳು ಮತ್ತು ರಿಯಾಯಿತಿಗಳನ್ನು ಸಂವಿಧಾನವು ಒದಗಿಸುತ್ತದೆ. ಪರಿಶಿಷ್ಟ ಜಾತಿಗಳ ಸ್ಥಾನಮಾನವು ಈ ಸಮುದಾಯಗಳಿಗೆ ಸರಕಾರಿ ಉದ್ಯೋಗಗಳಲ್ಲಿ ಮೀಸಲಾತಿ ಪಡೆಯಲು ಮತ್ತು ಶೈಕ್ಷಣಿಕ ಸಂಸ್ಥೆಗಳಿಗೆ ಸೇರ್ಪಡೆಯಾಗುವುದರ ಜೊತೆಗೆ ಕೆಲವು ಇತರ ಹಣಕಾಸಿನ ಪ್ರಯೋಜನಗಳನ್ನು ಒದಗಿಸುತ್ತದೆ. ಇದರ ಜೊತೆಗೆ ವಿವಿಧ ಯೋಜನೆಗಳನ್ನು ಸರ್ಕಾರ ಜಾರಿಗೆ ತಂದಿದೆ.

**<u>ಮಧ್ಯಪ್ರದೇಶದಲ್ಲಿ ಜನವರಿ-ಡಿಸೆಂಬರ್ ವರೆಗೆ ಆರ್ಥಿಕ ವರ್ಷ</u>**



ಮಧ್ಯಪ್ರದೇಶ ಸರ್ಕಾರ ನೂತನ ಆರ್ಥಿಕ ವರ್ಷವನ್ನು ಏಪ್ರಿಲ್-ಮಾರ್ಚ್ ಬದಲಾಗಿ  ಜನವರಿಯಿಂದ ಡಿಸೆಂಬರ್‌ಗೆ ಬದಲಾಯಿಸಿದೆ. ಆ ಮೂಲಕ ಆರ್ಥಿಕ ವರ್ಷವನ್ನು ಜನವರಿಯಿಂದ ಡಿಸೆಂಬರ್‌ಗೆ ಅಳವಡಿಸಿಕೊಂಡ ಮೊದಲ ರಾಜ್ಯವೆನಿಸಿದೆ. ಮುಂದಿನ ಆರ್ಥಿಕ ವರ್ಷದ ಬಜೆಟ್ ಅನ್ನು ಡಿಸೆಂಬರ್-ಜನವರಿ ಅವಧಿಯಲ್ಲಿ ಮಂಡಿಸಲಾಗುವುದು.

- ನೂತನ ಆರ್ಥಿಕ ವರ್ಷವನ್ನು ಏಪ್ರಿಲ್-ಮಾರ್ಚ್ ಬದಲಾವಣೆಯಿಂದ ತೆರಿಗೆ ಪರಿಷ್ಕರಣೆ ವರ್ಷ ಸಹ ಬದಲಾಗಬೇಕಿದೆ. ಅಲ್ಲದೇ ಸಂಸ್ಥೆಗಳ ಮಟ್ಟದಲ್ಲೂ ಸಹ ಮೂಲಭೂತ ಸೌಕರ್ಯಗಳ ಬದಲಾವಣೆ ಆಗಬೇಕಿದೆ.

**ಹಿನ್ನಲೆ**:

ಕಳೆದ ತಿಂಗಳು 23ರಂದು ನವದೆಹಲಿಯಲ್ಲಿ ನಡೆದಿದ್ದ ನೀತಿ ಆಯೋಗದ ಸಭೆಯಲ್ಲಿ ದೇಶದ ಎಲ್ಲ ಮುಖ್ಯಮಂತ್ರಿಗಳನ್ನು ಉದ್ದೇಶಿಸಿ ಮಾತನಾಡಿದ್ದ ಪ್ರಧಾನಿ ಮೋದಿ, ಹಣಕಾಸು ವರ್ಷವನ್ನು ಜನವರಿಯಿಂದಲೇ ಪ್ರಾರಂಭಿಸುವ ಕುರಿತು ಪ್ರಸ್ತಾಪಿಸಿದ್ದರು. ಅದರ ಸಾಧ್ಯತೆ ಕುರಿತು ಚರ್ಚಿಸಿ ಅನುಷ್ಠಾನಕ್ಕೆ ತರುವಂತೆ ಸೂಚಿಸಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿರುವ ಮಧ್ಯ ಪ್ರದೇಶ ಸಿಎಂ ಶಿವರಾಜ್ ಸಿಂಗ್ ಚೌಹಾಣ್ ಸರ್ಕಾರ, ಮುಂದಿನ ಡಿಸೆಂಬರ್‌ನಲ್ಲಿ ಬಜೆಟ್ ಮಂಡಿಸಿ 2018ರ

www.karunaduexams.com

ಜನವರಿಯಿಂದ ನೂತನ ಹಣಕಾಸು ವರ್ಷ ಆರಂಭಿಸಲು ನಿರ್ಧರಿಸಿದೆ. ಹಣಕಾಸು ವರ್ಷದ ಬದಲಾವಣೆ ಸಾಧ್ಯತೆ ಬಗ್ಗೆ ಈಗಾಗಲೇ ಉನ್ನತಮಟ್ಟದ ಸಮಿತಿಯೊಂದು ಕೇಂದ್ರ ಸರ್ಕಾರಕ್ಕೆ ವರದಿ ನೀಡಿದೆ. ಜಾಗತಿಕ ಮಟ್ಟದಲ್ಲಿ ಬಹುತೇಕ ರಾಷ್ಟ್ರಗಳು ಜನವರಿಯಿಂದ ಡಿಸೆಂಬರ್ ವರೆಗೆ ಆರ್ಥಿಕ ವರ್ಷ ನಿಗದಿಗೊಳಿಸಿವೆ.

**ಆಂಧ್ರಪ್ರದೇಶದ ಬಂಗನಾಪಲ್ಲಿ ಮಾವಿಗೆ GI ಟ್ಯಾಗ್**



ಆಂಧ್ರಪ್ರದೇಶದ ಪ್ರಸಿದ್ದ ಬಂಗನಾಪಲ್ಲಿ ಮಾವಿಗೆ ಚೆನ್ನೈನ ರಿಜಿಸ್ಟ್ರಾರ್ ಆಫ್ ಜಿಯಾಗ್ರಫಿಕಲ್ ಇಂಡಿಕೇಷನ್ ರಿಜಿಸ್ಟ್ರಿ ಜಿಐ ಟ್ಯಾಗ್ ನೀಡಿದೆ. ಹಾಗಾಗಿ ಇನ್ನು ಮುಂದೆ ಆಂಧ್ರಪ್ರದೇಶ ಸರ್ಕಾರಕ್ಕೆ ಬಂಗನಾಪಲ್ಲಿ ಮಾವಿನಹಣ್ಣುಗಳ ಜಿಐ ಟ್ಯಾಗ್ನ ನೋಂದಾಯಿತ ಒಡೆತನ ದೊರೆತಂತಾಗಿದೆ.

Geographical Identification Tag:

GI ಟ್ಯಾಗ್ ಯಾವುದೇ ಉತ್ಪನ್ನದ ನಿರ್ದಿಷ್ಟ ಪ್ರದೇಶವನ್ನು ಸೂಚಿಸುತ್ತದೆ.. ಉತ್ಪನ್ನಗಳ ಭೌಗೋಳಿಕ ಸೂಚನೆಗಳು ಕೈಗಾರಿಕಾ ಆಸ್ತಿಯ ಒಂದು ಅಂಶವೆಂದು ವ್ಯಾಖ್ಯಾನಿಸಲಾಗಿದೆ, ಇದು ಭೌಗೋಳಿಕ ಸೂಚನೆಯನ್ನು ಒಂದು ದೇಶ ಅಥವಾ ಅದರ ಉತ್ಪನ್ನದ ಮೂಲ ಅಥವಾ ಸ್ಥಳವೆಂದು ಕರೆಯಲ್ಪಡುವ ಒಂದು ಸ್ಥಳವನ್ನು ಉಲ್ಲೇಖಿಸುತ್ತದೆ. ವಿಶಿಷ್ಟವಾಗಿ, ಇಂತಹ ಹೆಸರು ಗುಣಮಟ್ಟ ಮತ್ತು ವಿಶಿಷ್ಟತೆಯ ಭರವಸೆ ನೀಡುತ್ತದೆ.

**ಬಂಗನಾಪಲ್ಲಿ ಮಾವು:**

ಬಂಗನಾಪಲ್ಲಿ ಮಾವಿನ ಹಣ್ಣುಗಳು ಸಿಹಿಗೆ ಹೆಸರುವಾಸಿಯಾಗಿದೆ ಮತ್ತು "ಹಣ್ಣುಗಳ ರಾಜ" ಎಂದು ಪ್ರಸಿದ್ದವಾಗಿವೆ. ಬಂಗನಾಪಲ್ಲಿ ಮಾವಿನ ಹಣ್ಣುಗಳು ಶೀತಲ ಶೇಖರಣೆಯಲ್ಲಿ ಮೂರು ತಿಂಗಳವರೆಗೆ ಗುಣಮಟ್ಟ ಹಾಳಾಗದಂತೆ ಶೇಖರಿಡಿಸಬಹುದಾಗಿದೆ. ಈ ಮಾವುಗಳನ್ನು 100 ವರ್ಷಗಳಿಂದ ಆಂಧ್ರಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಕರ್ನೂಲ್ ಜಿಲ್ಲೆ ಈ ತಳಿಯ ಮೂಲವೆನ್ನಲಾಗಿದೆ.. ಖಮ್ಮಂ, ಮಹಾಬೂಬ್ನಗರ, ರಂಗರೆಡ್ಡಿ, ತೆಲಂಗಾಣದಲ್ಲಿ ಮೆಡಾಕ್ ಮತ್ತು ಅದಿಲಾಬಾದ್ ಜಿಲ್ಲೆಗಳಲ್ಲೂ ಹೇರಳವಾಗಿ ಬೆಳೆಯಲಾಗುತ್ತದೆ. ಯು.ಎಸ್ ಮತ್ತು ಯುಕೆ ಮುಂತಾದ ದೇಶಗಳಿಗೆ 5,500 ಟನ್ನಳಷ್ಟು ಬಂಗಾನಪ್ಪಲ್ಲಿ ಮಾವಿನ ಹಣ್ಣುಗಳನ್ನು ಭಾರತ ರಫ್ತುಮಾಡಿದೆ.

## <u>ವಾಸಯೋಗ್ಯ ನಗರ ಸೂಚ್ಯಂಕ ಹೊರತರಲಿರುವ ಕೇಂದ್ರ ಸರ್ಕಾರ</u>



ಕೇಂದ್ರ ನಗರಾಭಿವೃದ್ದಿ ಸಚಿವಾಲಯ ದೇಶದ ವಾಸಯೋಗ್ಯ ನಗರ ಸಮೀಕ್ಷೆಯನ್ನು ಮುಂದಿನ ತಿಂಗಳು ಆರಂಭಿಸಲಿದೆ. ಸ್ವಳೀಯವಾಗಿ ಅಭಿವೃದ್ದಿಪಡಿಸಲಾಗಿರುವ ವಿಧಾನವನ್ನು ಆಧರಿಸಿ ಸೂಚ್ಯಂಕವನ್ನು ಹೊರತರಲಾಗುವುದು. ನಗರಾಭಿವೃದ್ದಿ ಸಚಿವಾಲಯವು ಈಗಾಗಲೇ "ನಗರಗಳಲ್ಲಿನ ಜೀವವೈವಿಧ್ಯ ಮಾನದಂಡಗಳ ಸಂಗ್ರಹ ಮತ್ತು ಗಣನೆಗೆ ಸಂಬಂಧಿಸಿದ ವಿಧಾನ" ದ ಬಗ್ಗೆ ವಿವರವಾದ ದಾಖಲೆಗಳನ್ನು ಬಿಡುಗಡೆ ಮಾಡಿದೆ. ಸೂಚ್ಯಂಕವು 140 ನಗರಗಳ ವಾಸಯೋಗ್ಯ ಗುಣಮಟ್ಟವನ್ನು ಅಳೆಯಲಿದೆ. ಇದರಲ್ಲಿ 1 ಮಿಲಿಯನ್ ಮತ್ತು ಹೆಚ್ಚಿನ ಜನಸಂಖ್ಯೆ ಇರುವ 53 ನಗರಗಳು ಇರಲಿವೆ. ಮೌಲ್ಯಮಾಪನ ಕೈಗೊಳ್ಳಲು, ನಗರಭಿವೃದ್ದಿ ಸಚಿವಾಲಯ ಅರ್ಹ ಸಂಸ್ಥೆಗಳಿಂದ ಬಿಡ್ ಆಹ್ವಾನಿಸಿದೆ.

ದೇಶದಲ್ಲಿನ ನಗರಗಳು ಮತ್ತು ಪಟ್ಟಣಗಳ ನಡುವೆ ಆರೋಗ್ಯಕರ ಸ್ಪರ್ಧೆಯ ಪ್ರಜ್ಞೆಯನ್ನು ಹುಟ್ಟುಹಾಕಲು ಮತ್ತು ಆಡಳಿತ ಮತ್ತು ಮೂಲಸೌಕರ್ಯ ಲಭ್ಯತೆಯನ್ನು ಸುಧಾರಿಸುವಲ್ಲಿ ತಮ್ಮ ಗಮನವನ್ನು ಕೇಂದ್ರೀಕರಿಸಲು ಸಹಾಯ ಮಾಡುವುದು ಮೌಲ್ಯಮಾಪನ ಗುರಿಯಾಗಿದೆ.

**ಸಮೀಕ್ಷೆಯ ಮಾನದಂಡ**:

40% -ಭೌತಿಕ ಮೂಲಸೌಕರ್ಯ ಸೂಚ್ಯಂಕ (ನೀರು, ಇಂಧನ, ತ್ಯಾಜ್ಯ ನೀರು, ಘನ ತ್ಯಾಜ್ಯ, ವಸತಿ, ಬಯಲು ಪ್ರದೇಶ, ಸಂಚಾರ ವ್ಯವಸ್ಥೆ ಮತ್ತು ಮಾಲಿನ್ಯ ನಿಯಂತ್ರಣ), 30% -ಆಡಳಿತ ಸೂಚ್ಯಂಕ, 20% - ಸಾಮಾಜಿಕ ಸೂಚ್ಯಂಕ (ಆರೋಗ್ಯ, ಶಿಕ್ಷಣ, ಸಂಸ್ಕೃತಿ ಮತ್ತು ಸುರಕ್ಷತೆ), 10% -ಆರ್ಥಿಕ ಸೂಚ್ಯಂಕ (ನಿರುದ್ಯೋಗದ ಪ್ರಮಾಣ, ವಾಣಿಜ್ಯ ಸಂಸ್ಥೆಗಳ ಸಂಖ್ಯೆ ).

## <u>ಸುಪ್ರೀಂಕೋರ್ಟ್ ICMIS ವ್ಯವಸ್ಥೆ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ</u>



ಪ್ರಧಾನಿ ನರೇಂದ್ರ ಮೋದಿ ಅವರು ಸುಪ್ರೀಂ ಕೋರ್ಟ್ನ ಇಂಟಿಗ್ರೇಟೆಡ್ ಕೇಸ್ ಮ್ಯಾನೇಜ್ಮೆಂಟ್ ಇನ್ಫರ್ಮೇಷನ್ ಸಿಸ್ಟಮ್ (ಐಸಿಎಂಐಎಸ್) ಅನ್ನು ಉದ್ಘಾಟಿಸಿದ್ದಾರೆ. ಈ ಡಿಜಿಟಲ್ ಫೈಲಿಂಗ್ ಸಿಸ್ಟಮ್ ಸುಪ್ರೀಂ ಕೋರ್ಟ್ ಅನ್ನು ಮೊದಲ ಬಾರಿಗೆ ಕಾಗದ ರಹಿತ, ಡಿಜಿಟಲ್ ಕೋರ್ಟ್ ಆಗಿ ಮಾರ್ಪಡಿಸಲಿದೆ. ಪ್ರಧಾನಿ ಮೋದಿ ಸುಪ್ರೀಂ ಕೋರ್ಟ್ ವೆಬ್ಸೈಟ್ನೊಂದಿಗೆ ಇಂಟಿಗ್ರೇಟೆಡ್ ಕೇಸ್ ಮ್ಯಾನೇಜ್ಮೆಂಟ್ ಸಿಸ್ಟಮ್ ಅನ್ನು ಅಪ್ಲೋಡ್ ಮಾಡುವ ಉದ್ಘಾಟನಾ ಕಾರ್ಯವನ್ನು ವಿಜ್ಞಾನ ಭವನದಲ್ಲಿ ಆಯೋಜಿಸಲಾಗಿತ್ತು. ಕಾನೂನು ಸಚಿವ ರವಿ ಶಂಕರ್ ಪ್ರಸಾದ್ ಮತ್ತು ಸುಪ್ರೀಂ ಕೋರ್ಟ್ನ ಇತರ ನ್ಯಾಯಾಧೀಶರು ಸಮಾರಂಭದಲ್ಲಿ ಹಾಜರಿದ್ದರು. ನ್ಯಾಯಾಂಗ ವ್ಯವಸ್ಥೆಯಲ್ಲಿ ಐಸಿಎಂಐಎಸ್ ಅನ್ನು ಮಹತ್ವದ ಸುಧಾರಣೆ ಎಂದು ಪ್ರಶಂಸಿಸಲಾಗಿದೆ. ಮುಂದಿನ ದಿನಗಳಲ್ಲಿ ಎಲ್ಲಾ ಹೈಕೋರ್ಟ್ಗಳು, ಜಿಲ್ಲಾ ನ್ಯಾಯಾಲಯಗಳು, ಉಪ-ವಿಭಾಗ ನ್ಯಾಯಾಲಯಗಳು ಹೊಸ ವ್ಯವಸ್ಥೆಯೊಂದಿಗೆ ಸಂಯೋಜಿಸಲ್ಪಡುತ್ತವೆ. ನಂತರ, ದೇಶದ ಎಲ್ಲ ಜೈಲುಗಳನ್ನು ಐಸಿಎಂಐಎಸ್ ಸಾಫ್ಟ್ವೇರ್ ನೊಂದಿಗೆ ಜೋಡಣೆ ಮಾಡಲಾಗುವುದು.

www.karunaduexams.com

**ICMIS ಮಹತ್ವ:**

ಐಸಿಎಂಐಎಸ್ ವ್ಯವಸ್ಥೆಯಡಿ ದೂರುದಾರರು ಮಾಹಿತಿಯನ್ನು ಪಡೆಯಲು, ಅರ್ಜಿ ದಾಖಲಿಸಲು ಮತ್ತು ವಿಳಂಬ ಇತ್ಯಾದಿಗಳ ಬಗ್ಗೆ ಮಾಹಿತಿ ಪಡೆಯಲು ಸಹಾಯವಾಗಲಿದೆ. ಇದು ದೇಶದ ಎಲ್ಲ ನ್ಯಾಯಾಲಯಗಳ ಏಕೀಕರಣಕ್ಕೆ ದಾರಿ ಮಾಡಿಕೊಡುತ್ತದೆ. ಈ ವ್ಯವಸ್ಥೆಯಡಿ ಇನ್ನು ಮುಂದೆ ಮೇಲ್ಮನವಿ ದಾಖಲೆಗಳನ್ನು ಸಲ್ಲಿಸುವ ಅಗತ್ಯವಿರುವುದಿಲ್ಲ ಬದಲಿಗೆ ವಿಚಾರಣಾ ನ್ಯಾಯಾಲಯಗಳು ಮತ್ತು ಉನ್ನತ ನ್ಯಾಯಾಲಯಗಳಿಂದ ವಿದ್ಯುನ್ಮಾನವಾಗಿ ದಾಖಲೆಗಳನ್ನು ತೆಗೆದುಕೊಳ್ಳಲಾಗುವುದು. ಈ ವ್ಯವಸ್ಥೆಯಡಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳಲು ಸಹಾಯವಾಗಲಿದೆ.

## ಉತ್ತರ ಪ್ರದೇಶ ಸರ್ಕಾರದಿಂದ ಹಸುಗಳಿಗೆ ಅಂಬುಲೆನ್ಸ್ ಸೇವೆ



ಉತ್ತರ ಪ್ರದೇಶ ಉಪ ಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಅವರು ಹಸುಗಳಿಗಾಗಿ ಪ್ರತ್ಯೇಕ ಅಂಬುಲೆನ್ಸ್ ಸೇವೆಗೆ ಚಾಲನೆ ನೀಡಿದರು. ರಾಸುಗಳ ಅಗತ್ಯತೆಯನ್ನು ಈ ಅಂಬುಲೆನ್ಸ್ ಪೂರೈಸಲಿದೆ. "ಗೋವಂಶ ಚಿಕಿತ್ಸೆ ಮೊಬೈಲ್ ವಾಹನ" ಯೋಜನೆಯನ್ನು ವಾರಣಾಸಿ, ಗೋರಖಪುರ, ಮಥುರಾ ಮತ್ತು ಅಲಹಬಾದ್ ನಗರಗಳಲ್ಲಿ ಪ್ರಾರಂಭಿಕ ಹಂತದಲ್ಲಿ ಐದು ಅಂಬುಲೆನ್ಸ್ ವಾಹನಗಳಿಗೆ ಚಾಲನೆ ನೀಡಲಾಗಿದೆ. ಪ್ರತಿಯೊಂದು ಅಂಬುಲೆನ್ಸ್ ಒಬ್ಬ ಪಶು ವೈದ್ಯ ಹಾಗೂ ಸಹಾಯಕರನ್ನು ಒಳಗೊಂಡಿರಲಿದ್ದು, ರೋಗ ಪೀಡಿತ ಅಥವಾ ಗಾಯಗೊಂಡ ರಾಸುಗಳನ್ನು ಗೋಶಾಲೆಗೆ ಸಾಗಿಸುವ ಅಥವಾ ಪಶು ಆರೋಗ್ಯ ಕೇಂದ್ರಕ್ಕೆ ಸಾಗಿಸಿ ಚಿಕಿತ್ಸೆ ನೀಡಲಾಗುವುದು.

- ಇದರ ಜೊತೆಗೆ ಗೋ ಸೇವಾ ಉಚಿತ ಟೋಲ್ ನಂಬರ್ ಗೆ ಸಹ ಚಾಲನೆ ನೀಡಲಾಗಿದೆ. ಆ ಮೂಲಕ ಸಾಮಾನ್ಯ ಜನರು ಗೋಗಳ ರಕ್ಷಣೆಗೆ ಧಾವಿಸಬಹುದು.
- ಎಂಜಿಎನ್‌ಆರ್‌ಇಜಿಎ ಮಝ್ದೂರ್ ಕಲ್ಯಾಣ ಸಂಘಟನೆ ಸಹಭಾಗಿತ್ವದೊಂದಿಗೆ ಅಂಬುಲೆನ್ಸ್ ಸೇವೆಗೆ ಚಾಲನೆ ನೀಡಲಾಗಿದೆ.
- ಮಝ್ದೂರ್ ಕಲ್ಯಾಣ ಸಂಘಟನೆ ಕಾರ್ಮಿಕರ ಹಾಗೂ ಅಸಂಘಟಿತ ವಲಯದಲ್ಲಿ ಕಾರ್ಯನಿರ್ವಹಿಸುವವರ ಹಿತಾರಕ್ಷಣೆ ಕಾಯುವ ಕಾಯಕ ಮಾಡುತ್ತಿದೆ. ಈ ಸಂಘಟನೆ ಐದು ರಾಜ್ಯಗಳಲ್ಲಿ ಕಾರ್ಯಪ್ರವೃತ್ತವಾಗಿದೆ.

## ಕೊಚ್ಚಿ ಮೆಟ್ರೋದಲ್ಲಿ ತೃತೀಯ ಲಿಂಗಿಗಳ ನೇಮಕ



ಕೊಚ್ಚಿ ಮೆಟ್ರೊ ರೈಲು ನಿಗಮ 23 ತೃತೀಯ ಲಿಂಗಿಗಳಿಗೆ ಉದ್ಯೋಗ ನೀಡಲು ಮುಂದಾಗಿದೆ. ಈ ಮೂಲಕ ದೇಶದಲ್ಲಿ ಮೊದಲ ಬಾರಿಗೆ ತೃತೀಯ ಲಿಂಗಿಗಳನ್ನು ಕೆಲಸಕ್ಕೆ ನೇಮಿಸಿಕೊಂಡ ಮೊದಲ ಸರ್ಕಾರಿ ಸಂಸ್ಥೆ ಎಂಬ ಗೌರವಕ್ಕೆ ಕೊಚ್ಚಿ ಮೆಟ್ರೊ ರೈಲು ನಿಗಮ ಪಾತ್ರವಾಗಿದೆ. ಅಲುವಾ–ಪಲರಿವಟ್ಟೊಮ್ ಕಾರಿಡಾರ್‌ನಲ್ಲಿ ಸಂಚರಿಸುವ ಮೆಟ್ರೋ ರೈಲಿನ 530 ಉದ್ಯೋಗಿಗಳ ಪೈಕಿ

www.karunaduexams.com

ಈ 23 ಉದ್ಯೋಗಿಗಳು ಕೆಲಸ ಮಾಡಲಿದ್ದಾರೆ. ಉತ್ತಮ ವಿದ್ಯಾಹರ್ತೆ ಹೊಂದಿರುವವರು ಟಿಕೆಟ್ ಕೌಂಟರ್ ಗಳಲ್ಲಿ ಉಳಿದವರನ್ನು ಪಾರ್ಕಿಂಗ್, ಹೌಸ್ ಕೀಪಿಂಗ್, ಉದ್ಯಾನವನದಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳಲಾಗುವುದು. ಸ್ಪರ್ಧಾತ್ಮಕ ಪರೀಕ್ಷೆ ಹಾಗೂ ವೈಯುಕ್ತಿಕ ಸಂದರ್ಶನ ನಡೆಸುವ ಮೂಲಕ ಅಭ್ಯರ್ಥಿಗಳನ್ನು ಆಯ್ಕೆಮಾಡಲಾಗಿದ್ದು, ಸೂಕ್ತ ತರಭೇತಿಯನ್ನ ನೀಡಲಾಗುವುದು.

**ಕೊಚ್ಚಿ ಮೆಟ್ರೋ:**

ಕೊಚ್ಚಿ ಮೆಟ್ರೋ ಕೇರಳದ ಕೊಚ್ಚಿ ನಗರದ ಅಗತ್ಯತೆಗಳನ್ನು ಪೂರೈಸಲು ನಿರ್ಮಾಣ ಹಂತದಲ್ಲಿರುವ ಮೆಟ್ರೋ ವ್ಯವಸ್ಥೆಯಾಗಿದೆ. ಅಲುವಾದಿಂದ ಪಾಲರಿವ್ಯಾಟಮ್ಗೆ 13.4 ಕಿ.ಮೀ ದೂರದಲ್ಲಿರುವ ಮೆಟ್ರೊ ಯೋಜನೆಯ ಮೊದಲ ಹಂತ ಶೀಘ್ರದಲ್ಲೇ ಕಾರ್ಯರೂಪಕ್ಕೆ ಬರಲಿದೆ. ಪಾಲರಿವಟ್ಟಂನಿಂದ ಮಹಾರಾಜ ಕಾಲೇಜ್ ವರೆಗಿನ ಎರಡನೆಯ ಹಂತದ 5 ಕಿ.ಮೀ ವಿಭಾಗವು ಕಾರ್ಯಾಚರಣೆಯನ್ನು ಪ್ರಾರಂಭಿಸಲಿದೆ.

## <u>ರಕ್ಷಣಾ ಕಾರ್ಯದರ್ಶಿಯಾಗಿ ಸಂಜಯ್ ಮಿತ್ರಾ ನೇಮಕ</u>



ಪಶ್ಚಿಮ ಬಂಗಾಳದ ಐಎಎಸ್ ಅಧಿಕಾರಿ ಸಂಜಯ್ ಮಿತ್ರರನ್ನು ಮುಂದಿನ ರಕ್ಷಣಾ ಕಾರ್ಯದರ್ಶಿಯಾಗಿ ನೇಮಸಿರುವುದನ್ನು ಸಂಪುಟ ನೇಮಕಾತಿ ಸಮಿತಿಯು ಅನುಮೋದಿಸಿದೆ. ಸಂಜಯ್ ಅವರು ಎರಡು ವರ್ಷಗಳ ನಿಶ್ಚಿತ ಅಧಿಕಾರಾವಧಿಯನ್ನು ಹೊಂದಿರಲಿದ್ದಾರೆ. ಈ ನೇಮಕಾತಿಯ ಮೊದಲು, ಮಿತ್ರಾ ಅವರು ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದಲ್ಲಿ ಕಾರ್ಯದರ್ಶಿಯಾಗಿದ್ದರು.

**ಇತರೆ ನೇಮಕಾತಿಗಳು:**

**ಅನಂತ್ ಕುಮಾರ್ ಸಿಂಗ್:** ಉತ್ತರ ಪ್ರದೇಶದ 1984 ಬ್ಯಾಚ್ ಐಎಎಸ್ ಅಧಿಕಾರಿ ಅನಂತ್ ಕುಮಾರ್ ಸಿಂಗ್ ಅವರು ಜವಳಿ ಸಚಿವಾಲಯದ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ. 1984ರ ಬ್ಯಾಚ್ನಿಂದ ಕಾರ್ಯದರ್ಶಿ ಮಟ್ಟದ ಹುದ್ದೆಗೆ ನೇಮಕಗೊಂಡ ಮೊದಲ ಅಧಿಕಾರಿ ಅನಂತ್ ಕುಮಾರ್ ಸಿಂಗ್.

**ರಶ್ಮಿ ವರ್ಮಾ:** ಜವಳಿ ಸಚಿವಾಲಯದ ಕಾರ್ಯದರ್ಶಿಯಾಗಿದ್ದ ರಶ್ಮಿ ವರ್ಮಾ ಪ್ರವಾಸೋದ್ಯಮ ಸಚಿವಾಲಯದಲ್ಲಿ ಕಾರ್ಯದರ್ಶಿ ಸ್ಥಾನಕ್ಕೆ ಸ್ಥಳಾಂತರಗೊಂಡಿದ್ದಾರೆ.

**ರಾಜೀವ್ ಶ್ರೀವಾಸ್ತವ**:, 1981 ಬ್ಯಾಚ್ ಐಎಎಸ್ ಅಧಿಕಾರಿ ರಾಜೀವ್ ಶ್ರೀವಾಸ್ತವ ಅವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಮುಂದಿನ ಕಾರ್ಯದರ್ಶಿಯಾಗಿದ್ದಾರೆ.

www.karunaduexams.com

**ಲೀನಾ ನಾಯರ್**: 1982 ಬ್ಯಾಚ್ ಐಎಎಸ್ ತಮಿಳುನಾಡಿನ ಕ್ಯಾಡೆರ್ನ ಲೀನಾ ನಾಯರ್ ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿಯಾಗಿದ್ದಾರೆ.

**ಜಗದೀಶ್ ಪ್ರಸಾದ್ ಮೀನಾ**: ಗ್ರಾಹಕ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿಯಾಗಿ ಜಗದೀಶ್ ಪ್ರಸಾದ್ ಮೀನಾ ಅವರನ್ನು ನೇಮಿಸಲಾಗಿದೆ.

**ಬಿ.ಆರ್.ಶರ್ಮಾ**: ಜಮ್ಮು ಮತ್ತು ಕಾಶ್ಮೀರ ಕೇಡರ್ನ 1984 ಬ್ಯಾಚ್ ಐಎಎಸ್ ಅಧಿಕಾರಿಯಾಗಿದ್ದ ಬಿ.ಆರ್.ಶರ್ಮಾ ಗೃಹ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ.

## ಫಿಫಾ ಆಡಳಿತ ಸಮಿತಿಯ ಅಧ್ಯಕ್ಷರಾಗಿ ಮುದ್ಗಲ್ ಆಯ್ಕೆ



ಫಿಫಾ ಆಡಳಿತ ಸಮಿತಿಯ ಅಧ್ಯಕ್ಷರನ್ನಾಗಿ ದೆಹಲಿ ಹೈಕೋರ್ಟಿನ ಮಾಜಿ ನ್ಯಾಯಮೂರ್ತಿ ಮುಕುಲ್ ಮುದ್ಗಲ್ ಅವರು ಆಯ್ಕೆಯಾಗಿದ್ದಾರೆ. ಬಹ್ರೇನ್ ರಾಜಧಾನಿಯಾದ ಮನಮಾದಲ್ಲಿ ನಡೆದ ಫಿಫಾನ 67ನೇ ಕಾಂಗ್ರೆಸ್ನಲ್ಲಿ ನ್ಯಾಯಮೂರ್ತಿ ಮುಕುಲ್ ಮುದ್ಗಲ್ ಅವರನ್ನು ಆಯ್ಕೆ ಮಾಡಲಾಯಿತು. ಫಿಫಾದ ಹಿಂದಿನ ಅಧ್ಯಕ್ಷ ಮಿಗುಯೆಲ್ ಮಡುರೊ ಅವರನ್ನು ಆಡಳಿತ ಮಂಡಳಿಯಿಂದ ಪದಚ್ಯುತಿಗೊಳಿಸಿದ ಕಾರಣ ಈ ಹುದ್ದೆಗೆ ಮುದ್ಗಲ್ ಅವರ ಹೆಸರನ್ನು ಸೂಚಿಸಲಾಗಿತ್ತು. ಜಸ್ಟಿಸ್ ಮುದ್ಗಲ್ ಅವರು ನಾಲ್ಕು ವರ್ಷಗಳ ಕಾಲ ಅಧಿಕಾರದಲ್ಲಿ ಇರಲಿದ್ದಾರೆ.

ಫಿನ್ಲೆಂಡ್ನ ಒಲ್ಲಿ ರೆಹ್ನ್ ಅವರು ಫಿಫಾದ ಉಪನಾಯಕರಾಗಿ ಆಯ್ಕೆಯಾಗಿದ್ದಾರೆ. ಒಲ್ಲಿ ರೆಹ್ನ್ ಯುರೋಪಿಯನ್ ಕಮಿಷನ್ನ ಮಾಜಿ ಉಪಾಧ್ಯಕ್ಷರಾಗಿದ್ದಾರೆ.

ಜಸ್ಟಿಸ್ ಮುದ್ಗಲ್ ರವರು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ನ ಮುಖ್ಯ ನ್ಯಾಯಾಧೀಶರಾಗಿ 2009 ರಿಂದ 2011ರ ವರೆಗೆ ಸೇವೆ ಸಲ್ಲಿಸಿದ್ದಾರೆ. ಕಳೆದ ವರ್ಷ ಮೇ ತಿಂಗಳಲ್ಲಿ ಮೆಕ್ಸಿಕೋದಲ್ಲಿ ಫೀಫಾ ಕಾಂಗ್ರೆಸ್ನ ಆಡಳಿತ ಮಂಡಳಿಯ ಉಪ ಅಧ್ಯಕ್ಷರಾಗಿ ನೇಮಕಗೊಂಡಿದ್ದರು.

## ಹೆಪಟೈಟಿಸ್ ಬಗ್ಗೆ ಜಾಗೃತಿ ಮೂಡಿಸಲು ಅಮಿತಾಬ್ ಬಚ್ಚನ್ ರಾಯಭಾರಿ



ವಿಶ್ವ ಆರೋಗ್ಯ ಸಂಸ್ಥೆ (WHO) ಆಗ್ನೇಯ ಏಷ್ಯಾ ಪ್ರದೇಶದಲ್ಲಿನ ಹೆಪಟೈಟಿಸ್ ಬಗ್ಗೆ ಜಾಗೃತಿ ಮೂಡಿಸಲು ಅಮಿತಾಬ್ ಬಚ್ಚನ್ ಅವರನ್ನು ರಾಯಭಾರಿಯನ್ನಾಗಿ ನೇಮಕ ಮಾಡಿದೆ. ಯಕೃತ್ತಿನ ಕ್ಯಾನ್ಸರ್ ಮತ್ತು ಸಿರೋಸಿಸ್‌ಗೆ ಪ್ರಮುಖ ಕಾರಣಗಳಲ್ಲಿ ಒಂದಾದ ಹೆಪಟೈಟಿಸ್ ಹರಡುವುದನ್ನು ತಡೆಯಲು ಜಾಗೃತಿ ಮೂಡಿಸಲು ಅವರನ್ನು ನೇಮಕ ಮಾಡಲಾಗಿದೆ.

www.karunaduexams.com

ರಾಯಭಾರಿಯಾಗಿ, ಅಮಿತಾಭ್ ಬಚ್ಚನ್ ಅವರು ಹೆಪಟೈಟಿಸ್ ತಡೆಗಟ್ಟುವ ಕ್ರಮಗಳು, ರೋಗ ನಿಯಂತ್ರಣ ಮತ್ತು ಚಿಕಿತ್ಸೆ ಬಗ್ಗೆ ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

ಪ್ರಪಂಚದಾದ್ಯಂತ ಸುಮಾರು 325 ಮಿಲಿಯನ್ ಜನರು ಹೆಪಟೈಟಿಸ್ ಬಳಲುತ್ತಿದ್ದಾರೆ ಎಂದು ಅಂದಾಜಿಸಲಾಗಿದೆ. ಹೆಪಟೈಟಿಸ್ ಯಕೃತ್ತಿನ ಉರಿಯೂತವಾಗಿದ್ದು, ಯಕೃತ್ತಿನ ಕ್ಯಾನ್ಸರ್‌ಗೆ ದಾರಿ ಮಾಡಿಕೊಡುತ್ತದೆ. ಚಿಕಿತ್ಸೆ ಪಡೆಯದಿದ್ದರೆ ಸಾವು ಖಚಿತ.

**ಹೆಪಟೈಟಿಸ್:**

ಯಕೃತ್ತಿನಲ್ಲಿ ಉರಿಯೂತವನ್ನುಂಟು ಮಾಡುವ ಲಕ್ಷಣಗಳು ಅಥವಾ ರೋಗಗಳಿಗೆ ಹೆಪಟೈಟಿಸ್ ಎಂದು ಹೇಳಲಾಗುತ್ತದೆ. ಹೆಪಟೈಟಿಸ್ ರೋಗ ವೈರಸ್ ಅಲ್ಲದೆ ಸತತ ಮದ್ಯಪಾನ ಸೇವನೆ, ಕಲುಷಿತ ಆಹಾರ ಸೇವನೆ, ಕೆಟ್ಟ ಜೀವನ ಶೈಲಿಯಿಂದಲೂ ಉಂಟಾಗಬಹುದು. ಹೈಪಟೈಟಿಸ್ ವೈರಸ್ ಗಳನ್ನು ಎ, ಬಿ. ಸಿ, ಡಿ ಮತ್ತು ಇ ಎಂದು ಗುರುತಿಸಲಾಗಿದ್ದು, ಬಿ ಮತ್ತು ಇ ವೈರಸ್ ಅತ್ಯಂತ ಅಪಾಯಕಾರಿ. ಹೆಪಟೈಟಿಸ್ ಬಿ, ಸಿ ಮತ್ತು ಡಿ ರಕ್ತ ಅಥವಾ ದೇಹದ ಸ್ರವದಿಂದ ಹರಡಬಲ್ಲದಾಗಿದೆ. ಹೆಪಟೈಟಿಸ್ ಇ ಮತ್ತು ಎ ಕಲುಷಿತ ಆಹಾರ ಮತ್ತು ನೀರಿನ ಸೇವನೆಯಿಂದ ಉಂಟಾಗುತ್ತದೆ. ಹೆಪಾಟೈಟಿಸ್ ಬಿ ಲಸಿಕೆಯನ್ನು ರೋಗದ ವಿರುದ್ದ ರಕ್ಷಿಸಲು 0, 1, 2, ಮತ್ತು 6 ತಿಂಗಳುಗಳಲ್ಲಿ ಮಗುವಿಗೆ ನೀಡಲಾಗುತ್ತದೆ ಮತ್ತು ತಾಯಿಯಿಂದ ಮಗುವಿಗೆ ರೋಗದ ಹರಡುವಿಕೆ ತಡೆಗಟ್ಟಲು ಬಳಸಲಾಗುತ್ತದೆ.

## <u>ಭಯೋತ್ಪಾದನೆ ನಿಗ್ರಹ ಕಾರ್ಯಾಚರಣೆ ಭಾಗವಾಗಿ "CASO" ಮರು ಪರಿಚಯಿಸಲಿರುವ ಸೇನೆ</u>



ಭಾರತೀಯ ಸೇನೆ 15 ವರ್ಷಗಳ ನಂತರ ತನ್ನ ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆಗಳ ಅಂಗವಾಗಿ ಕಾರ್ಡನ್ ಮತ್ತು ಸರ್ಚ್ ಕಾರ್ಯಾಚರಣೆಗಳನ್ನು (Cordon And Search Operation) ಮರು-ಪರಿಚಯಿಸಲು ಯೋಜಿಸಿದೆ. ಕಾಶ್ಮೀರ ಕಣಿವೆಯಲ್ಲಿ ಪರಿಸ್ಥಿತಿಯನ್ನು ನಿಯಂತ್ರಿಸುವುದು CASO ಕಾರ್ಯಾಚರಣೆಯನ್ನು ಮರು-ಪರಿಚಯಿಸುವುದುರ ಹಿಂದಿನ ಪ್ರಮುಖ ಉದ್ದೇಶವಾಗಿದೆ. ಇದಾದ ನಂತರ, ದಕ್ಷಿಣ ಕಾಶ್ಮೀರದಲ್ಲಿನ ಕುಲ್ಗಮ್, ಪುಲ್ವಾಮಾ, ಟ್ರಾಲ್, ಬಡ್ಗಮ್ ಮತ್ತು ಸ್ಯಾಪಿಯಾನ್ಸ್‌ಳ ಉಗ್ರಗಾಮಿ ಹಿಂಸಾತ್ಮಕ ಪ್ರದೇಶಗಳಲ್ಲಿ ಉಗ್ರಗಾಮಿಗಳನ್ನು ಸೆದೆಬಡಿಯಲು CASOವನ್ನು ಪ್ರಮುಖ ರೀತಿಯಲ್ಲಿ ಸೇನೆ ಕೈಗೊಳ್ಳಲಿದೆ.

**ಹಿನ್ನಲೆ**:

CASO 1990ರ ದಶಕದಲ್ಲಿ ಸೈನ್ಯದ ಭಯೋತ್ಪಾದನಾ ಕಾರ್ಯಾಚರಣೆಗಳ ಸಾಮಾನ್ಯ ವಿಧಾನವಾಗಿತ್ತು. ಭದ್ರತಾ ಪಡೆಗಳು 1990ರ ದಶಕದಲ್ಲಿ "ಪ್ರದೇಶ ಪ್ರಾಬಲ್ಯ ಮತ್ತು ಸ್ವೀಪ್" ಕಾರ್ಯಾಚರಣೆಗಳನ್ನು ಪ್ರಬಲವಾಗಿ ಬಳಸುತ್ತಿದ್ದವು. ಆ ಕಾಲದಲ್ಲಿ, ಅಂತಹ ಕಾರ್ಯಾಚರಣೆಗಳನ್ನು ಭಾರತೀಯ ಸೇನೆಯು ಸಾಮಾನ್ಯವಾಗಿ ನಡೆಸಿತು. ನಂತರ, ಸ್ಥಳೀಯ ಜನರಿಂದ ದೂರುಗಳು ಬರಲು ಆರಂಭಿಸದ ವೇಳೆ, ಸೈನ್ಯವು ಸಣ್ಣ ತಂಡಗಳನ್ನು ಒಳಗೊಂಡ ನಿರ್ದಿಷ್ಟ ಗುಪ್ತಚರ-ಆಧಾರಿತ ಕಾರ್ಯಾಚರಣೆಗಳಿಗೆ ಒತ್ತು ನೀಡುವ ಮೂಲಕ CASO ಅನ್ನು ನಿಲ್ಲಿಸಲಾಯಿತು.

ಇತ್ತೀಚೆಗೆ ಉಗ್ರಗಾಮಿಗಳಿಂದ ಕಾಶ್ಮೀರಿ ಸೇನಾಧಿಕಾರಿ ಲೆಫ್ಟಿನೆಂಟ್ ಉಮ್ಮರ್

www.karunaduexams.com

ಭಯೋತ್ಪಾದಕರ ಹಿನ್ನಲೆಯಲ್ಲಿ CASO ಅನ್ನು ಮರು-ಪರಿಚಯಿಸುವ ನಿರ್ಧಾರವನ್ನು ಕೈಗೊಳ್ಳಲಾಗಿದೆ. ಇತ್ತೀಚೆಗೆ ಪೊಲೀಸರು ಮತ್ತು ಬ್ಯಾಂಕಿಂಗ್ ಸೌಲಭ್ಯಗಳ ಮೇಲೆ ಉಗ್ರಗಾಮಿಗಳ ದಾಳಿಯ ನಂತರ ಸೇನಾ ಭದ್ರತಾ ಪಡೆಗಳು ಮತ್ತು ಪೊಲೀಸರು ದಕ್ಷಿಣ ಕಾಶ್ಮೀರದ ಸ್ಯಾಪಿಯಾನ್ ಜಿಲ್ಲೆಯಲ್ಲಿ ಬೃಹತ್ ಕಾರ್ಡನ್ ಮತ್ತು ಸೈನಿಕ ಕಾರ್ಯಾಚರಣೆ ನಡೆಸಿದ್ದರು. 15 ವರ್ಷಗಳಲ್ಲಿ ಮೊದಲ ಬಾರಿಗೆ 4,000 ಪಡೆಗಳನ್ನು ಒಳಗೊಂಡ ಈ ಪ್ರಮಾಣದ ಕಾರ್ಯಾಚರಣೆಯನ್ನು ಭದ್ರತಾ ಪಡೆಗಳು ನಡೆಸಿದವು.

## "ವನ್ನಾಕ್ರೈ ಕುತಂತ್ರಾಂಶ"ಕ್ಕೆ ಭಾರತ ಸೇರಿದಂತೆ ಹಲವು ರಾಷ್ಟ್ರಗಳು ಬಲಿ



ಜಾಗತಿಕ ಸೈಬರ್ ದಾಳಿಗೆ ಭಾರತ ಸೇರಿದಂತೆ ಸುಮಾರು ನೂರ ದೇಶಗಳನ್ನು ತುತ್ತಾಗಿವೆ. "ಶಾಡೋ ಬ್ರೋಕರ್ಸ್" ಹೆಸರಿನ ಸೈಬರ್ ಗ್ಯಾಂಗ್ ಈ ಕೃತ್ಯವನ್ನು ನಡೆಸಿರುವ ನಿಗೂಢ ಸಂಘಟನೆ ಎನ್ನಲಾಗಿದೆ.. ಅಮೆರಿಕದ ಪ್ರಬಲ ಮಿಲಿಟರಿ ಗುಪ್ತಚರ ಘಟಕವಾದ ನ್ಯಾಷನಲ್ ಸೆಕ್ಯುರಿಟಿ ಏಜೆನ್ಸಿ (ಎನ್‌ಎಸ್‌ಎ) ನಿಂದ 'ಎಟರ್ನಲ್ ಬ್ಲೂ' ಎಂಬ ಹ್ಯಾಕಿಂಗ್ ಉಪಕರಣವನ್ನು ಕದಿಯುವ ಮೂಲಕ ಈ ಸಂಘಟನೆಯು ದಾಳಿ ನಡೆಸಿದೆ. ಹ್ಯಾಕಿಂಗ್ ಉಪಕರಣ 'ಎಟರ್ನಲ್ ಬ್ಲೂ' ಮೈಕ್ರೋಸಾಫ್ಟ್ ವಿಂಡೋಸ್ ಬಳಸಿಕೊಂಡು ಎಲ್ಲಾ ಕಂಪ್ಯೂಟರ್ಗಳ ಮಾಹಿತಿಯನ್ನು ಸುಲಭವಾಗಿ ಪಡೆಯುತ್ತದೆ. ಭಯೋತ್ಪಾದಕರು ಮತ್ತು ಶತ್ರು ರಾಷ್ಟ್ರಗಳು ಬಳಸುವ ಕಂಪ್ಯೂಟರ್ಗಳಿಂದ ಮಾಹಿತಿ ಪಡೆಯಲು ಎನ್‌ಎಸ್‌ಎ ಇದನ್ನು ಅಭಿವೃದ್ಧಿಪಡಿಸಿದೆ. ಸೈಬರ್ ಅಟ್ಯಾಕ್ ಅನ್ನು ದೊಡ್ಡ ರಾನ್ಸಮ್ವೇರ್ ದಾಳಿ ಎಂದು ಪರಿಗಣಿಸಲಾಗಿದೆ. ಭದ್ರತಾ ಸಾಫ್ಟ್‌ವೇರ್ ಕಂಪನಿ ಅವಾಸ್ಟ್ ಪ್ರಕಾರ, ಅದರ ಸಂಶೋಧಕರು ಯುಕೆ, ರಷ್ಯಾ, ಉಕ್ರೇನ್, ಭಾರತ, ಚೀನಾ, ಇಟಲಿ ಮತ್ತು ಈಜಿಪ್ಟ್ ಸೇರಿದಂತೆ 99 ದೇಶಗಳಲ್ಲಿ 75,000 ಕ್ಕಿಂತ ಹೆಚ್ಚು ದಾಳಿಗಳನ್ನು ಗುರುತಿಸಿದ್ದಾರೆ.

ಹ್ಯಾಕರ್ಗಳು WannaCry, WanaCrypt0r 2.0, WannaCry ಮತ್ತು WCry ಎಂದು ಕರೆಯಲ್ಪಡುವ ರಾನ್ಸಮ್ವೇರ್ (ransomware) ಅನ್ನು, ಸಾಮಾನ್ಯವಾಗಿ ಇಮೇಲ್ಗಳ ಮೂಲಕ ವ್ಯಾಪಿಸಿವೆ. ದಾಳಿಗೊಳಗಾದ ಕಂಪ್ಯೂಟರ್ಗಳಲ್ಲಿರುವ ಫೈಲ್ಗಳನ್ನು ಬಳಕೆದಾರರು ಅವುಗಳನ್ನು ಪ್ರವೇಶಿಸಲು ಸಾಧ್ಯವಿಲ್ಲದ ರೀತಿಯಲ್ಲಿಯೇ ಲಾಕ್ ಮಾಡಲಾಗುತ್ತದೆ. ಲಾಕ್ ಆಗಿರುವ ಫೈಲ್ಗಳನ್ನು ಹಿಂಪಡೆಯಲು cryptocurrency Bitcoin ನಲ್ಲಿ ಪಾವತಿಯನ್ನು ಮಾಡಬೇಕಾಗುತ್ತದೆ.

### ದಾಳಿಯ ಪರಿಣಾಮ:

ಯುರೋಪ್ ಮತ್ತು ಏಷ್ಯಾದಲ್ಲಿ ಈ ಸೈಬರ್ ದಾಳಿಯಿಂದ ಅನೇಕ ಆಸ್ಪತ್ರೆಗಳು, ಶಾಲೆಗಳು ಮತ್ತು ವಿಶ್ವವಿದ್ಯಾಲಯಗಳ ಕಾರ್ಯಾಚರಣೆಗೆ ತೊಡಕಾಗಿದೆ. ಬ್ರಿಟನ್ನ ರಾಷ್ಟ್ರೀಯ ಆರೋಗ್ಯ ಸೇವೆ (ಎನ್‌ಎಚ್‌ಎಸ್) ತೀವ್ರ ದಾಳಿಗೆ ತುತ್ತಾಗಿದೆ. ದಾಳಿಗೆ ಒಳಗಾದ ಇತರ ಪ್ರಮುಖ ಸಂಸ್ಥೆಗಳೆಂದರೆ ಸ್ಪೇನ್ನ ದೂರಸಂಪರ್ಕ ಕಂಪೆನಿ ಟೆಲಿಫೋನಿಕಾ, ಪೋರ್ಚುಗಲ್ ಟೆಲಿಕಾಮ್ ಮತ್ತು ಟೆಲಿಫೋನಿಕಾ ಅರ್ಜೆಂಟೈನಾ, ಜರ್ಮನಿಯ ರೈಲ್ವೆ ಆಪರೇಟರ್ ಡಾಯ್ಚ್ ಬಾನ್ ಇತ್ಯಾದಿ.. ಭಾರತದಲ್ಲಿ, ಆಂಧ್ರಪ್ರದೇಶದ ಪೋಲಿಸ್ ಕಂಪ್ಯೂಟರ್ಗಳು ಸೈಬರ್ ದಾಳಿಗೆ ಒಳಗಾಗಿವೆ. ಚಿತ್ತೂರು, ಕೃಷ್ಣ,

www.karunaduexams.com

ಗುಂಟೂರು, ವಿಶಾಖಪಟ್ಟಣಂ ಮತ್ತು ಶ್ರೀಕಕುಲಂ ಜಿಲ್ಲೆಗಳಲ್ಲಿನ 18 ಪೋಲಿಸ್ ಘಟಕಗಳಲ್ಲಿ ಕಂಪ್ಯೂಟರ್ಗಳು ಮೇಲೆ ದಾಳಿಯ ಪರಿಣಾಮ ಬೀರಿದೆ.

**ಗಡಿ ಭದ್ರತೆಗೆ ಲೇಸರ್ ಗೋಡೆ ತಂತ್ರಜ್ಞಾನ ಬಳಸಲು ಬಿಎಸ್ಎಫ್ ನಿರ್ಧಾರ**



ಜಮ್ಮು ಮತ್ತು ಕಾಶ್ಮೀರದಲ್ಲಿ 198 ಕಿ.ಮೀ ಉದ್ದದ ಭಾರತ-ಪಾಕಿಸ್ತಾನ ಅಂತಾರಾಷ್ಟ್ರೀಯ ಗಡಿಯಲ್ಲಿ ಭದ್ರತೆ ಕಾಪಾಡಿಕೊಳ್ಳಲು ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಗಡಿ ಭದ್ರತಾ ಪಡೆ ನಿರ್ಧರಿಸಿದಿ. ಹೊಸ ತಂತ್ರಜ್ಞಾನದಲ್ಲಿ ನುಸುಳುಕೋರರನ್ನು ಸುಲಭವಾಗಿ ಪತ್ತೆಹಚ್ಚಿ, ಶೀಘ್ರವಾಗಿ ಮಾಹಿತಿಯನ್ನು ರವಾನೆ ಮಾಡುವ ಸಾಮರ್ಥ್ಯವನ್ನು ಈ ತಂತ್ರಜ್ಞಾನ ಹೊಂದಿರಲಿದೆ. ದೆಹಲಿ ಮೂಲದ ರಕ್ಷಣಾ ಐಒಟಿ CRON ಸಿಸ್ಟಮ್ಸ್ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದೆ. ಕವಚ್ (KVX) ಸರಣಿ ಲೇಸರ್ ಗೋಡೆಗಳೆಂದು ಕರೆಯಲಾಗುವ ಹೊಸ ತಂತ್ರಜ್ಞಾನವನ್ನು ಸ್ವದೇಶಿಯವಾಗಿ ನಿರ್ಮಿಸಲಾಗಿದ್ದು ಮತ್ತು ಅಸ್ತಿತ್ವದಲ್ಲಿರುವ ಲೇಸರ್ ಗೋಡೆಗಳಿಗಿಂತ ಹೆಚ್ಚು ಎತ್ತರವಾಗಿದೆ.

ಪ್ರಸ್ತುತ ಕವಾಚ್ ಗೋಡೆಗಳ ತಂತ್ರಜ್ಞಾನವನ್ನು ಬಿಎಸ್ಎಫ್ ಜಮ್ಮು ಮತ್ತು ಕಾಶ್ಮೀರದ ಸಾಂಬ ಸೆಕ್ಟರ್ ಗಡಿಯುದ್ದಕ್ಕೂ ಪ್ರಾಯೋಗಿಕವಾಗಿ ಪರೀಕ್ಷಿಸುತ್ತಿದೆ.

**ವಿಶೇಷತೆ**:

ಕವಾಚ್ ಗೋಡೆಗಳು ನೇರಳಾತೀತ ಕಿರಣಗಳ ಆಧಾರಿತ ಒಳನುಸುಳುವಿಕೆಯನ್ನು ಪತ್ತೆಹಚ್ಚುವ ವಿಧಾನವಾಗಿರುವುದರಿಂದ ಅಗೋಚರವಾಗಿರುತ್ತವೆ. ಪಾರದರ್ಶಕ ನೀರು ಮತ್ತು ಗಾಜಿನಲ್ಲೂ ಸಹ ಇವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬಲ್ಲವು. ಕವಚ್ ಗೋಡೆಗಳು ಸಂಕೀರ್ಣ, ಗೂಢಲಿಪೀಕರಿಸಿದ ತಂತ್ರಜ್ಞಾನಗಳನ್ನು ಬಳಸುವ ಎಲ್ಲಾ-ಭೂಪ್ರದೇಶದ ಹವಾಮಾನ-ನಿರೋಧಕ ವ್ಯವಸ್ಥೆಗಳಾಗಿದ್ದು, ಒಳನುಸುಳುವಿಕೆ ಪ್ರಯತ್ನಗಳ ಬಗ್ಗೆ ಹತ್ತಿರದ ಸ್ಥಳಗಳಿಗೆ ತಕ್ಷಣ ಎಚ್ಚರಿಸುವುದು. ಈ ಸಾಧನಗಳು ಪರಸ್ಪರ ಸಂವಹನ ಮಾಡಲು CRONET, ಎನ್ಕ್ರಿಪ್ಟ್ ಮಾಡಲಾದ ನೆಟ್ವರ್ಕ್ ಅನ್ನು ಬಳಸುತ್ತವೆ. ಅಂತಹ ಐದು KVx- ಸರಣಿ ಗೋಡೆಗಳು ಒಂದು ಕಿಲೋಮೀಟರ್-ಉದ್ದದ ವಿಸ್ತಾರ ಪ್ರದೇಶವನ್ನು ಕಾಯುವ ಸಾಮರ್ಥ್ಯವನ್ನು ಹೊಂದಿವೆ

**ಹಿನ್ನಲೆ**:

ಭಾರತ ಮತ್ತು ಪಾಕಿಸ್ತಾನ 3000 ಕಿ.ಮೀ ಉದ್ದದ ಗಡಿ ಭಾಗವನ್ನು ಹೊಂದಿವೆ. ಈ ಪೈಕಿ 198 ಕಿ.ಮೀ ಅಂತಾರಾಷ್ಟ್ರೀಯ ಗಡಿ ಹಾಗೂ 740 ಕಿ.ಮೀ ಗಡಿ ನಿಯಂತ್ರಣ ರೇಖೆ (LoC) ಜಮ್ಮು ಮತ್ತು ಕಾಶ್ಮೀರದಲ್ಲಿದೆ. 13 ನದಿಗಳು ಹೊಂದಿರುವ ಈ ಗಡಿ ಭಾಗದ ಮುಖಾಂತರ ಪಾಕಿಸ್ತಾನದಿಂದ ಉಗ್ರರ ನುಸುಳುವಿಕೆಯನ್ನು ತಡೆಯುವುದು ಗಡಿ ಭದ್ರತಾ ಪಡೆಗೆ ಸವಾಲಾಗಿದೆ. ಬಿಎಸ್ಎಫ್ ವಿದ್ಯುತ್ ಬೇಲಿಯಂತಹ ಹಲವಾರು ತಂತ್ರಜ್ಞಾನಗಳನ್ನು ಮತ್ತು ಲೇಸರ್ ನಂತಹ ಇತರ ತಂತ್ರಜ್ಞಾನಗಳನ್ನು ಮೂಲಕ ಒಳನುಗ್ಗುವಿಕೆಗಳನ್ನು ಪತ್ತೆಹಚ್ಚಲಾಗುತ್ತಿದೆ.

www.karunaduexams.com

## ನಿರ್ಭಯ ನಿಧಿಯಡಿ ರೈಲ್ವೆ ನಿಲ್ದಾಣಗಳಲ್ಲಿ ಸಿಸಿಟಿವಿ ಅಳವಡಿಸಲು ತೀರ್ಮಾನ



ಮಹಿಳೆಯರು ಸೇರಿದಂತೆ ಪ್ರಯಾಣಿಕರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಭಾರತೀಯ ರೈಲ್ವೆ ನಿರ್ಭಯ ನಿಧಿಯ ಅಡಿಯಲ್ಲಿ ರೂ. 500 ಕೋಟಿ ವೆಚ್ಚದಲ್ಲಿ 19,000 ಹೈ ಡೆಫಿನಿಷನ್ ಸಿಸಿಟಿವಿ ಕ್ಯಾಮೆರಾಗಳನ್ನು ದೇಶಾದ್ಯಂತ 983 ರೈಲು ನಿಲ್ದಾಣಗಳಲ್ಲಿ ಸ್ಥಾಪಿಸಲು ತೀರ್ಮಾನಿಸಿದೆ. ರೈಲ್ವೆ ಪ್ಲಾಟ್ ಫಾರಂ ಮತ್ತು ಪ್ರಯಾಣಿಕರು ಕಾಯುವ ಪ್ರದೇಶಗಳಲ್ಲಿ ಕ್ಯಾಮರಾಗಳನ್ನು ಅಳವಡಿಸಲಾಗುವುದು. ತರಬೇತಿ ಪಡೆದ ರೈಲ್ವೆ ಪೊಲೀಸ್ ಸಿಬ್ಬಂದಿಗಳು ಸಿ.ಸಿ.ಟಿ.ವಿ ದೃಶ್ಯಗಳ ಮೇಲ್ವಿಚಾರಣೆ ಮಾಡುವ ಜವಾಬ್ದಾರಿಯನ್ನು ಹೊಂದಿರಲಿದ್ದಾರೆ.

ಭಾರತೀಯ ರೈಲ್ವೆ ಸುಮಾರು 8,000 ರೈಲ್ವೆ ನಿಲ್ದಾಣ ಕೇಂದ್ರಗಳನ್ನು ಹೊಂದಿದೆ. ಇವುಗಳಲ್ಲಿ ಕೇವಲ 344 ಕೇಂದ್ರಗಳಿಗೆ ಮಾತ್ರ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಇದಲ್ಲದೆ, ಶಾನ್-ಇ-ಪಂಜಾಬ್ ಎಕ್ಸ್‌ಪ್ರೆಸ್ ಸಂಪೂರ್ಣವಾಗಿ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಹೊಂದಿದೆ. ಮುಂಬಯಿ ಉಪನಗರ ಸೇವೆಯ ಕೆಲವೊಂದು ರೈಲುಗಳಲ್ಲಿ ಮಹಿಳೆಯರ ಬೋಗಿಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾಗಳನ್ನು ಪ್ರಾಯೋಗಿಕ ಅಳವಡಿಸಲಾಗಿದೆ. ಅದೇ ರೀತಿ, ಹಮ್ಸಾಫರ್ ಎಕ್ಸ್‌ಪ್ರೆಸ್ ಮತ್ತು ಮುಂಬರುವ ತೇಜಸ್ ಎಕ್ಸ್‌ಪ್ರೆಸ್ ರೈಲಿಗಳು ಕೂಡ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಹೊಂದಿರಲಿವೆ.

**ನಿರ್ಭಯಾ ನಿಧಿ**:

ಡಿಸೆಂಬರ್ 16, 2012 ರಂದು ದೆಹಲಿಯಲ್ಲಿ ಸಾಮೂಹಿಕ ಅತ್ಯಾಚಾರ ಘಟನೆಯ ನಂತರ ಯುಪಿಎ ಸರ್ಕಾರ ರೂ 1000 ಕೋಟಿಯ ನಿರ್ಭಯಾ ನಿಧಿಯನ್ನು ಘೋಷಿಸಿತು. ಅದರಂತೆ 2013ರ ಕೇಂದ್ರ ಬಜೆಟ್ನಲ್ಲಿ ದೇಶದ ಮಹಿಳೆಯರ ಘನತೆ ಮತ್ತು ಸುರಕ್ಷತೆಯನ್ನು ಕಾಪಾಡಿಕೊಳ್ಳಲು ಸರ್ಕಾರಿ ಮತ್ತು ಎನ್ಜಿಒಗಳ ಪ್ರಯತ್ನಗಳನ್ನು ಬೆಂಬಲಿಸಲು ನಿರ್ಭಯಾ ನಿಧಿಯನ್ನು ಘೋಷಿಸಲಾಯಿತು. ಹಣಕಾಸು ಸಚಿವಾಲಯದ ಆರ್ಥಿಕ ವ್ಯವಹಾರಗಳ ಇಲಾಖೆ (DEA) ಈ ನಿಧಿಯನ್ನು ನಿರ್ವಹಿಸುತ್ತದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಈ ನಿಧಿಯ ನೋಡೆಲ್ ಇಲಾಖೆ.

## ಮೂರು ವರ್ಷಗಳ ನಂತರ “ಮೌಂಟ್ ಲಾಟ್ಸೆ” ಪರ್ವತಾರೋಹಣ



ಮೂರು ವರ್ಷಗಳ ನಂತರ “ಮೌಂಟ್ ಲಾಟ್ಸೆ” ಪರ್ವತಾರೋಹಣಕ್ಕೆ ಮುಕ್ತವಾಗಿದೆ. ಮೌಂಟ್ ಲಾಟ್ಸೆ ವಿಶ್ವದ ನಾಲ್ಕನೇ ಅತಿ ಎತ್ತರದ ಪರ್ವತ. ಭಾರತದ ಪರ್ವತರೋಹಿ ಡೆಬಶಿಶ್ ಬಿಸ್ವಾಸ್ ಮತ್ತು ನ್ಯೂಜಿಲೆಂಡ್ನ ಮಹಿಳಾ ಪರ್ವತಾರೋಹಿ ಮೌಂಟ್ ಲೋಟ್ಸೆ ಏರಿದ ಮೊದಲಿಗರು. ಐಸ್ಲ್ಯಾಂಡ್ನ ಜಾನ್ ಸ್ನೋರಿ ಸಿಗರ್ಸ್ಸನ್ ಮತ್ತು ಐರ್ಲೆಂಡ್ನ ಸಿಯಾನ್ ಒ ಬ್ರೋಲ್ಚೈನ್ ಸಹ ಮೌಂಟ್ ಲಾಟ್ಸೆ ಏರುವ ಮೂಲಕ ತಮ್ಮ ದೇಶಗಳಿಂದ ಮೌಂಟ್ಸ್ ಲಾಟ್ಸೆ ಏರಿದ ಮೊದಲ ಪರ್ವತಾರೋಹಿಗಳು ಎನಿಸಿದ್ದಾರೆ.

www.karunaduexams.com

2014 ರಲ್ಲಿ ಹಿಮಪಾತ ಉಲ್ಬಣಗೊಂಡಿದ್ದರಿಂದ ಹಾಗೂ 2015 ರಲ್ಲಿ ವಿನಾಶಕಾರಿ ಭೂಕಂಪಗಳು ಸಂಭವಿಸಿದ ಕಾರಣ ಕಳೆದ ಮೂರು ವರ್ಷಗಳಲ್ಲಿ ಮೌಂಟ್ ಲೋಟ್ಸೆಗೆ ಪರ್ವತಾರೋಹಣವನ್ನು ರದ್ದುಪಡಿಸಲಾಗಿತ್ತು. ಕಳೆದ ವರ್ಷ "ಆಂಗ್ ಫರ್ಬಾ ಶೆರ್ಪಾ" ಮರಣ ಹೊಂದಿದ ಕಾರಣ  ಸ್ಥಗಿತಗೊಳಿಸಲಾಗಿತ್ತು. ಈ ಋತುವಿನಲ್ಲಿ, 100 ಕ್ಕಿಂತ ಹೆಚ್ಚಿನ ಪರ್ವತಾರೋಹಿಗಳು ತಮ್ಮ ಬೆಂಬಲಿಗಲಿರೊಂದಿಗೆ ಮೌಂಟ್ ಲೋಟ್ಸೆ ಪರ್ವತಾರೋಹಣದಲ್ಲಿ ಭಾಗವಹಿಸಲಿದ್ದಾರೆ.

**ಮೌಂಟ್ ಲಾಟ್ಸೆ**:

ಮೌಂಟ್ ಎವರೆಸ್ಟ್, ಕೆ 2 ಮತ್ತು ಕಾಂಚನಜುಂಗಾ ನಂತರ ಮೌಂಟ್ ಲಾಟ್ಸೆ (8,516 ಮೀಟರ್) ವಿಶ್ವದ ನಾಲ್ಕನೇ ಅತ್ಯುನ್ನತ ಪರ್ವತವಾಗಿದೆ. ಇದು ಟಿಬೆಟ್ ಮತ್ತು ನೇಪಾಳದ ಖುಂಬು ಪ್ರದೇಶಗಳ ನಡುವಿನ ಗಡಿಭಾಗದಲ್ಲಿದೆ. ಮುಖ್ಯ ಶಿಖರಕ್ಕೆ ಹೆಚ್ಚುವರಿಯಾಗಿ, ಪರ್ವತವು ಲೋಟ್ಸೆ ಮಿಡಲ್ (8,414 ಮೀ), ಲಾಟ್ಸೆ ಶಾರ್ (8,383 ಮೀ) ನಂತಹ ಸಣ್ಣ ಶಿಖರಗಳನ್ನು ಒಳಗೊಂಡಿದೆ. ಮುಖ್ಯ ಶಿಖರವನ್ನು ಮೊದಲ ಬಾರಿಗೆ 1856 ರ ಮೇ 18 ರಂದು ಅರ್ನ್ಸ್ಟ್ ರೀಸ್ ಮತ್ತು ಫ್ರಿಟ್ಜ್ ಲುಚಿಂಗರ್ರ ಸ್ವಿಸ್ ತಂಡ ಯಶಸ್ವಿಯಾಗಿ ಏರಿತ್ತು.

## <u>UNFCC ಉನ್ನತ ಹುದ್ದೆಗೆ ಓವೈಸ್ ಸರ್ಮದ್ ನೇಮಕ</u>



ಭಾರತದ ಓವೈಸ್ ಸರ್ಮದ್ ಅವರನ್ನು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೋ ಗುಟರೆಸ್ ಅವರು ಯುನೈಟೆಡ್ ನೇಷನ್ಸ್ ಫ್ರೇಮ್ವರ್ಕ್ ಕನ್ವೆನ್ಷನ್ ಆನ್ ಕ್ಲೈಮೇಟ್ ಚೇಂಜ್ (UNFCC)ನ ಡೆಪ್ಯುಟಿ ಎಕ್ಸಿಕ್ಯೂಟಿವ್ ಕಾರ್ಯದರ್ಶಿ ಹುದ್ದೆಗೆ ನೇಮಕ ಮಾಡಿದ್ದಾರೆ. ಇದು UNFCC ನಲ್ಲಿ ಪ್ರಮುಖ ಸ್ಥಾನವಾಗಿದೆ. ದೆಹಲಿಯ ವಿಶ್ವಸಂಸ್ಥೆಯ ಮಾಹಿತಿ ಕೇಂದ್ರದ ಪ್ರಕಾರ, UNFCC ಸದಸ್ಯ ರಾಷ್ಟ್ರಗಳೊಂದಿಗೆ ವ್ಯಾಪಕವಾದ ಸಮಾಲೋಚನೆಗಳನ್ನು ಮಾಡಿದ ನಂತರ ನೇಮಕವನ್ನು ಮಾಡಲಾಗಿದೆ. UNFCC ಹವಾಮಾನ ಬದಲಾವಣೆಯನ್ನು ನಿಧಾನಗೊಳಿಸುವ ಉದ್ದೇಶವನ್ನು ಹೊಂದಿದೆ.

1960ರಲ್ಲಿ ಹುಟ್ಟಿದ ಓವೈಸ್ ಸರ್ಮದ್ ಅವರು ಇಂಟರ್ನ್ಯಾಷನಲ್ ಆರ್ಗನೈಸೇಶನ್ ಫಾರ್ ಮೈಗ್ರೇಶನ್ (IOM)ನೊಂದಿಗೆ ಸುಮಾರು 27 ವರ್ಷಗಳ ಅನುಭವವನ್ನು ಹೊಂದಿದ್ದಾರೆ. ಐಒಎಮ್ ಸದಸ್ಯ ರಾಷ್ಟ್ರಗಳೊಂದಿಗೆ ನಿಕಟ ಸಮಾಲೋಚನೆಯೊಂದಿಗೆ ಸಂಸ್ಥೆಯ ಕಾರ್ಯವನ್ನು ಬಲಪಡಿಸಲು ಹಲವಾರು ನೀತಿ ಮತ್ತು ನಿರ್ವಹಣ ಕ್ಷೇತ್ರದಲ್ಲಿ ಅಪಾರ ಕೆಲಸ ಮಾಡಿದ್ದಾರೆ. ಓವೈಸಿ ಅವರು ಪ್ರಸ್ತುತ ಇಂಟರ್ನ್ಯಾಷನಲ್ ಆರ್ಗನೈಸೇಶನ್ ಫಾರ್ ಮೈಗ್ರೇಶನ್

www.karunaduexams.com

(IOM) ಡೈರೆಕ್ಟರ್-ಜನರಲ್ ಆಗಿದ್ದಾರೆ. ಓವೈಸ್ ರವರು ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದಿಂದ ವಾಣಿಜ್ಯ ಪದವಿಯನ್ನು ಪಡೆದಿದ್ದಾರೆ.

**ತ್ರಿವಳಿ ತಲಾಖ್: ಸುಪ್ರೀಂ ಕೋರ್ಟ್‌ನಿಂದ ವಿಚಾರಣೆ ಶುರು**



ಭಾರತದ ಮುಖ್ಯ ನ್ಯಾಯಮೂರ್ತಿ ಜೆ.ಎಸ್. ಖಹೆರ್ ನೇತೃತ್ವದ ಐದು ಜನ ನ್ಯಾಯಾಧೀಶರ ಪೀಠವು ತ್ರಿವಳಿ ತಲಾಕ್ ಪದ್ದತಿಯನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆಯನ್ನು ಕೈಗೆತ್ತಿಕೊಂಡಿದೆ. ತ್ರಿವಳಿ ತಲಾಕ್ ಪದ್ದತಿಯಿಂದ ಬಾಧಿತರಾಗಿರುವ ಮುಸ್ಲಿಂ ಮಹಿಳೆಯರು ತ್ರಿವಳಿ ತಲಾಖ್ ಪದ್ದತಿಯಿಂದ ತಮಗೆ ಅನ್ಯಾಯವಾಗಿದ್ದು, ಪದ್ದತಿಯನ್ನು ರದ್ದುಪಡಿಸುವಂತೆ ಕೋರಿ ಕಳೆದ ಎರಡು ವರ್ಷಗಳಲ್ಲಿ ಹಲವು ಅರ್ಜಿ ಸಲ್ಲಿಸಿದ್ದರು. ತ್ರಿವಳಿ ತಲಾಖ್ ಪದ್ದತಿ ಸಮಾನತೆಯ ಹಕ್ಕನ್ನು ಉಲ್ಲಂಘಿಸುತ್ತದೆ ಎನ್ನುವುದು ಅವರ ವಾದವಾಗಿದೆ.

ಪ್ರಮುಖ ಅರ್ಜಿಯನ್ನು "Quest for Equity vs Jamiat Ulama-i-Hind" ಶೀರ್ಷಿಕೆಯಡಿ ನೀಡಲಾಗಿದೆ. ಆಸಕ್ತಿದಾಯಕ ವಿಚಾರವೆಂದರೆ ಈ ಪ್ರಕರಣವನ್ನು ಐದು ವಿವಿಧ ಸಮುದಾಯಗಳ ನ್ಯಾಯಾಧೀಶರು ವಿಚಾರಣೆ ನಡೆಸಲಿದ್ದಾರೆ. ಅವರುಗಳೆಂದರೆ ಮುಖ್ಯನ್ಯಾಯಾಮೂರ್ತಿ ಜೆ ಎಸ್ ಖೇಹರ್ (ಸಿಖ್), ನ್ಯಾಯಮೂರ್ತಿಗಳು ಕುರಿಯನ್ ಜೋಸೆಫ್ (ಕ್ರಿಶ್ಚಿಯನ್), ಆರ್ ಎಫ್ ನರಿಮನ್ (ಪಾರ್ಸಿ), ಯು ಯು ಲಲಿತ್ (ಹಿಂದೂ) ಮತ್ತು ಅಬ್ದುಲ್ ನಝೀರ್ (ಮುಸ್ಲಿಂ).

ಮೇ 19ಕ್ಕೆ ಮುಂಚಿತವಾಗಿ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಪೂರ್ಣಗೊಳಿಸಲಿದೆ. ಈ ಪ್ರಕರಣದ ತೀರ್ಪು ಜೂನ್ ತಿಂಗಳಲ್ಲಿ ಹೊರಬೀಳಬಹುದು ಎನ್ನಲಾಗಿದೆ. ತ್ರಿವಳಿ ತಲಾಖಿನ ಸಾಂವಿಧಾನಿಕ ಸಿಂಧುತ್ವವನ್ನು ನಿರ್ಧರಿಸುವುದಾಗಿ ಸುಪ್ರೀಂ ಕೋರ್ಟ್ ಹೇಳಿಕೆ ನೀಡಿದ್ದು ಮತ್ತು ಬಹುಪತ್ನಿತ್ವ ಇಸ್ಲಾಮಿಕ್ ಸಂಪ್ರದಾಯದ ಬಗ್ಗೆ ಪರಿಶೀಲಿಸುವುದಿಲ್ಲ ಎಂದು ಹೇಳಿದೆ.

**ಹಿನ್ನಲೆ**:

ವಿಶ್ವದ ಮೂರನೇ ಅತಿ ದೊಡ್ಡ ಮುಸ್ಲಿಂ ಜನಸಂಖ್ಯೆಯನ್ನು ಭಾರತ ಹೊಂದಿದೆ. ಭಾರತದಲ್ಲಿ ಮುಸ್ಲಿಂರು ಷರಿಯಾ ಅಥವಾ ಇಸ್ಲಾಮಿಕ್ ನ್ಯಾಯಶಾಸ್ತ್ರವನ್ನು ಅನುಸರಿಸುತ್ತಿದ್ದಾರೆ. ಷರಿಯಾ ಕಾನೂನಿನಡಿ ಮೌಖಿಕವಾಗಿ ಹಾಗೂ ನ್ಯಾಯಾಲದ ಮೆಟ್ಟಿಲೇರದೆ ಮೂರು ಬಾರಿ ತಲಾಖ್ ಹೇಳುವ ಮೂಲಕ ಪತ್ನಿಯರಿಗೆ ವಿಚ್ಛೇದನ ನೀಡಲಾಗುತ್ತಿದ್ದು, ಈ ಪದ್ದತಿಯಿಂದ ಸಾಕಷ್ಟು ಮುಸ್ಲಿಂ ಮಹಿಳೆಯರು ವಿಚ್ಛೇದನ ಭೀತಿಯನ್ನು ಎದುರಿಸುತ್ತಿದ್ದಾರೆ. ಅಲ್ಲದೇ ಫೋನ್, ಸಂದೇಶಗಳು, ವಾರ್ತಾಪತ್ರಿಕೆಗಳು ಜಾಹೀರಾತುಗಳು, WhatsApp ನಂತಹ ಇನ್ಸ್ಟೆಂಟ್

www.karunaduexams.com

ಮೆಸೇಜಿಂಗ್ ಅಪ್ಲಿಕೇಶನ್ಗಳ ಮೂಲಕ ಹಲವಾರು ಮಹಿಳೆಯರಿಗೆ ವಿವಾಹ ವಿಚ್ಛೇದನ ನೀಡುತ್ತಿರುವ ಬಗ್ಗೆ ವರದಿಯಾಗಿದೆ. ಅರ್ಜಿದಾರರ ಪ್ರಕಾರ, ತ್ರಿವಳಿ ತಲಾಕ್ ಖುರಾನ್ನಲ್ಲಿ ಗುರುತಿಸಲ್ಪಟ್ಟ ವಿಚ್ಛೇದನ ವಿಧಾನವಲ್ಲ. ತ್ರಿವಳಿ ತಲಾಕ್ ಪದ್ಧತಿಯನ್ನು ರದ್ದುಗೊಳಿಸುವ ಪರವಾಗಿ ಕೇಂದ್ರ ಸರ್ಕಾರ ನಿಂತಿದೆ. ಇದೇ ಮೊದಲ ಬಾರಿಗೆ ಕೇಂದ್ರ ಸರ್ಕಾರವು ಈ ಪದ್ಧತಿಯ ಬಗ್ಗೆ ದೃಢವಾದ ನಿಲುವನ್ನು ವ್ಯಕ್ತಪಡಿಸಿದೆ.

**ಪರಿಸರ ಸಚಿವ ಅನಿಲ್ ಮಾಧವ್ ದವೆ ನಿಧನ**



ಕೇಂದ್ರ ಪರಿಸರ ಮತ್ತು ಅರಣ್ಯ ಖಾತೆಯ ಸಚಿವ ಅನಿಲ್ ಮಾಧವ್ ದವೆ ಹೃದಯಾಘಾತದಿಂದ ನಿಧನರಾದರು. ಅನಿಲ್ ಮಾಧವ್ ದವೆ ಅವರು ಮಧ್ಯಪ್ರದೇಶದ ಬಾದ್ನಗರದಲ್ಲಿ ಜುಲೈ 6, 1956 ರಂದು ಜನಿಸಿದರು. ಅವರು ಮಧ್ಯಪ್ರದೇಶವನ್ನು ಪ್ರತಿನಿಧಿಸುವ ಸಂಸತ್ ಸದಸ್ಯರಾಗಿದ್ದರು. 2009 ರಲ್ಲಿ ರಾಜ್ಯಸಭೆಗೆ ಮೊದಲ ಬಾರಿಗೆ ದವೆ ಆಯ್ಕೆಯಾದರು. ಕಳೆದ ವರ್ಷ ಅವರು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆಯ ಖಾತೆಯ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದರು. ದವೆ ಅವರು ನರ್ಮದಾ ನದಿಯ ಸಂರಕ್ಷಣೆ ಸೇರಿದಂತೆ ಪರಿಸರ ಸಂರಕ್ಷಣೆ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಬಹಳ ಉತ್ಸಾಹ ಹೊಂದಿದ್ದರು. ಅವರು ನರ್ಮದಾ ಸಂರಕ್ಷಣೆಗಾಗಿ 'ನರ್ಮದಾ ಸಮಾಗ್ರಾ' ಎಂಬ ಸಂಸ್ಥೆಯನ್ನು ಸ್ಥಾಪಿಸಿದ್ದರು.

- ಅವಿವಾಹಿತರಾಗಿದ್ದ ದವೆ ಅವರು ಯುವ ವಯಸ್ಸಿನಿಂದಲೇ ಆರ್ಎಸ್ಎಸ್ ಕಾರ್ಯಕರ್ತರು. 2003ರಲ್ಲಿ ಮಧ್ಯಪ್ರದೇಶದಲ್ಲಿ ದಿಗ್ವಿಜಯ್ ಸಿಂಗ್ ನೇತೃತ್ವದ ಕಾಂಗ್ರೆಸ್ ಸರ್ಕಾರವನ್ನು ಸೋಲಿಸಿ ಬಿಜೆಪಿ ಅಧಿಕಾರಕ್ಕೆ ಬರಲು ದವೆ ಹೆಣೆದಿದ್ದ ಕಾರ್ಯತಂತ್ರವೇ ಕಾರಣ.
- ಭ್ರಷ್ಟಾಚಾರ (ತಿದ್ದುಪಡಿ) ಮಸೂದೆ, 2013 ಮತ್ತು ಕಲ್ಲಿದ್ದಲು ಗಣಿಗಳ (ವಿಶೇಷ ನಿಬಂಧನೆ) ಮಸೂದೆ, 2015 ರ ಮೇಲಿನ ಆಯ್ದ ಸಮಿತಿಗಳ ಅಧ್ಯಕ್ಷರಾಗಿದ್ದರು.
- ದವೆ ಅವರು ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ Beyond Copenhagen; Yes I Can, So Can We; Creation to Cremation; rafting through a civilization: a travelogue; Shatabdi ke Paanch Kaale Panne; Sambhal Ke Rehna Apne Ghar Me Chhupe Hue Gaddaron Se; Mahanayak Chandrashekhar Azad; Roti Aur Kamal ki Kahani; Samagra Gram Vikas etc.

www.karnatakaexams.com

## ಆಂಧ್ರಪ್ರದೇಶದ ವಿಶಾಖಪಟ್ಟಣ ದೇಶದ ಅತ್ಯಂತ ಸ್ವಚ್ಛ ರೈಲ್ವೆ ನಿಲ್ದಾಣ



ಆಂಧ್ರಪ್ರದೇಶದ ವಿಶಾಖಪಟ್ಟಣ ದೇಶದಲ್ಲೇ ಅತ್ಯಂತ ಸ್ವಚ್ಛ ರೈಲ್ವೆ ನಿಲ್ದಾಣ ಎನ್ನುವ ಕೀರ್ತಿಗೆ ಪಾತ್ರವಾಗಿದೆ.

ತೆಲಂಗಾಣದ ಸಿಕಂದರಾಬಾದ್ ಜಂಕ್ಷನ್ ಮತ್ತು ಜಮ್ಮು ತವಿ ರೈಲ್ವೆ ನಿಲ್ದಾಣಗಳು ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನ ಪಡೆದಿವೆ. ರೈಲ್ವೆ ನಿಲ್ದಾಣಗಳ ಸ್ವಚ್ಛತೆ ಕುರಿತ ಸಮೀಕ್ಷಾ ವರದಿಯನ್ನು ರೈಲ್ವೆ ಸಚಿವ ಸುರೇಶ್ ಪ್ರಭು ಬುಧವಾರ ಇಲ್ಲಿ ಬಿಡುಗಡೆ ಮಾಡಿದರು.

ಕೈಗಾರಿಕಾ ನೀತಿ ಮತ್ತು ಉತ್ತೇಜನ ಇಲಾಖೆಯ ಭಾರತೀಯ ಗುಣಮಟ್ಟ ನಿಯಂತ್ರಣ ವಿಭಾಗ ಈ ಸಮೀಕ್ಷೆಯನ್ನು 407 ರೈಲ್ವೆ ನಿಲ್ದಾಣಗಳಲ್ಲಿ ಕೈಗೊಂಡಿತ್ತು.

ವಾರ್ಷಿಕ ₹50 ಕೋಟಿಗೂ ಹೆಚ್ಚು ಆದಾಯ ಹೊಂದಿರುವ ರೈಲ್ವೆ ನಿಲ್ದಾಣಗಳಿಗೆ 'ಎ1' ವಿಭಾಗದಲ್ಲಿ ರ‍್ಯಾಂಕಿಂಗ್ ನೀಡಲಾಗಿದೆ. ವಾರ್ಷಿಕ ₹6 ಕೋಟಿಯಿಂದ 50ಕೋಟಿವರೆಗೆ ಆದಾಯ ಹೊಂದಿರುವ ನಿಲ್ದಾಣಗಳನ್ನು 'ಎ' ವಿಭಾಗಕ್ಕೆ ಸೇರಿಸಲಾಗಿದೆ. 'ಎ1' ಮತ್ತು 'ಎ' ವಿಭಾಗದ ರೈಲ್ವೆ ನಿಲ್ದಾಣಗಳಿಗೆ ಪ್ರತ್ಯೇಕ ರ‍್ಯಾಂಕಿಂಗ್ ನೀಡಲಾಗಿದೆ. 'ಎ1' ವಿಭಾಗದಲ್ಲಿ ಬೆಂಗಳೂರು ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣ 10ನೇ ರ‍್ಯಾಂಕ್ ಮತ್ತು ಯಶವಂತಪುರ ರೈಲ್ವೆ ನಿಲ್ದಾಣ 32ನೇ ರ‍್ಯಾಂಕ್ ಪಡೆದಿದೆ.

ಕರ್ನಾಟಕದಲ್ಲಿ ಈ ಎರಡು ನಿಲ್ದಾಣಗಳು ಮಾತ್ರ 'ಎ1' ವಿಭಾಗದಲ್ಲಿ ಅರ್ಹತೆ ಪಡೆದಿವೆ. ಪಂಜಾಬ್‌ನ ಬೀಯಾಸ್ 'ಎ' ವಿಭಾಗದಲ್ಲಿ ಪ್ರಥಮ ರ‍್ಯಾಂಕ್ ಪಡೆದಿದೆ. ತೆಲಂಗಾಣದ ಕಮ್ಮಮ್ ಮತ್ತು ಮಹಾರಾಷ್ಟ್ರದ ಅಹ್ಮದನಗರ ಕ್ರಮವಾಗಿ ಎರಡು ಮತ್ತು ಮೂರನೇ ರ‍್ಯಾಂಕ್ ಪಡೆದಿವೆ.

ಕರ್ನಾಟಕದಲ್ಲಿ ಮೈಸೂರು 14 ಮತ್ತು  ಬಂಗಾರಪೇಟೆ 35ನೇ ರ‍್ಯಾಂಕ್ ಪಡೆದಿವೆ. ಬಿಹಾರದ ದರ್ಭಾಂಗ ಜಂಕ್ಷನ್ 'ಎ1' ವಿಭಾಗದಲ್ಲಿ 75ನೇ ಸ್ಥಾನ ಹಾಗೂ 'ಎ' ವಿಭಾಗದಲ್ಲಿ ಅದೇ ರಾಜ್ಯದ ಜೋಗ್ಬಾನಿ 332ನೇ ಸ್ಥಾನ ಪಡೆದಿದೆ. ಪಾರ್ಕಿಂಗ್ ಪ್ರದೇಶ, ಶೌಚಾಲಯ ವ್ಯವಸ್ಥೆ, ವಿಶ್ರಾಂತಿ ಕೊಠಡಿ, ಮುಖ್ಯ ಪ್ರವೇಶ ದ್ವಾರದ ಪ್ರದೇಶದಲ್ಲಿನ ಸ್ವಚ್ಛತೆ ಸೇರಿದಂತೆ ಹಲವಾರು ಅಂಶಗಳನ್ನು ಸಮೀಕ್ಷೆಯಲ್ಲಿ ಪರಿಗಣಿಸಲಾಗಿದೆ. ಜತೆಗೆ ರೈಲ್ವೆ ಪ್ರಯಾಣಿಕರ ಅಭಿಪ್ರಾಯಗಳನ್ನು ಸಹ ಪಡೆಯಲಾಗಿದೆ ಎಂದು ಸಚಿವ ಸುರೇಶ್ ಪ್ರಭು ತಿಳಿಸಿದರು.

www.karunaduexams.com

## “ನರ್ಮದಾ ಸೇವಾ ಮಿಷನ್”ಗೆ ಪ್ರಧಾನಿ ಮೋದಿ ಚಾಲನೆ



ಪ್ರಧಾನಿ ನರೇಂದ್ರ ಮೋದಿರವರು ನರ್ಮದಾ ನದಿಯ ಸಂರಕ್ಷಣೆಗಾಗಿ ನರ್ಮದಾ ಸೇವಾ ಮಿಷನ್ ಗೆ ಚಾಲನೆ ನೀಡಿದರು. ಮಧ್ಯಪ್ರದೇಶದ ಅನೂಪ್ಪುರ್ ಜಿಲ್ಲೆಯ ಅಮರ್ಕಾಂತಕ್ನಲ್ಲಿ ಈ ಮಿಷನ್ಗೆ ಚಾಲನೆ ನೀಡಲಾಯಿತು. ನರ್ಮದಾ ನದಿ ಮಧ್ಯ ಪ್ರದೇಶದ ಜೀವನದಿ ಆಗಿದೆ. ನರ್ಮದಾ ನದಿಯ ಸಂರಕ್ಷಣೆಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಮಾರ್ಗಸೂಚಿ ನಕ್ಷೆಯನ್ನು ಸಹ ಬಿಡುಗಡೆಗೊಳಿಸಲಾಯಿತು. ಪರಿಸರವಾದಿಗಳು, ನದಿ ಸಂರಕ್ಷಣೆ ತಜ್ಞರು ಸೇರಿದಂತೆ ಇತರೆ ಪ್ರಮುಖರೊಂದಿಗೆ ವ್ಯಾಪಕವಾದ ಸಮಾಲೋಚನೆಗಳ ನಂತರ ಈ ಮಾರ್ಗಸೂಚಿಯನ್ನು ರೂಪಿಸಲಾಗಿದೆ. ಇದೇ ವೇಳೆ 'ನಮಮಿ ದೇವಿ ನರ್ಮದೆ ಸೇವಾ ಯಾತ್ರಾ' ಸಮಾರಂಭವನ್ನೂ ಮುಕ್ತಯಗೊಳಿಸಲಾಯಿತು.

'ನಮಮಿ ದೇವಿ ನರ್ಮದೆ ಸೇವಾ ಯಾತ್ರಾ'**:**

ನಮಮಿ ದೇವಿ ನರ್ಮದೆ ಸೇವಾ ಯಾತ್ರೆಯನ್ನು ನರ್ಮದಾ ನದಿ ಮೂಲದ ಅಮರ ಕಂಟಾಕ್ನಿಂದ ಡಿಸೆಂಬರ್ 11, 2016 ರಂದು ಪ್ರಾರಂಭಿಸಲಾಯಿತು. ಈ ಯಾತ್ರೆಯು 1,100ಕ್ಕೂ ಹೆಚ್ಚು ಗ್ರಾಮಗಳು ಮತ್ತು ಪಟ್ಟಣಗಳನ್ನು ಹಾದುಹೋಗಿ 3,344 ಕಿ.ಮೀ. ದೂರ ಚಲಿಸುವ ಮೂಲಕ ಮೇ 15, 2017ರಂದು ಮುಕ್ತಾಯವಾಯಿತು. ಈ ಯಾತ್ರೆಯನ್ನು “ಸಾರ್ವಜನಿಕರು ಭಾಗವಹಿಸಿದ್ದ ವಿಶ್ವದ ಅತಿದೊಡ್ಡ ನದಿ ಸಂರಕ್ಷಣೆ ಅಭಿಯಾನ" ಎಂದು ಪ್ರಶಂಸಿಸಲಾಗಿದೆ.

**ಹಿನ್ನಲೆ**:

ನರ್ಮದಾ ನದಿ ಮೈಕಲ್ ಹಿಲ್ಸ್ನಲ್ಲಿ ಹುಟ್ಟಿ, 1,312 ಕಿ.ಮೀ ಹರಿದು ಗಲ್ಫ್ ಆಫ್ ಖಂಬಾತ್ ಮೂಲಕ ಅರಬ್ಬೀ ಸಮುದ್ರಕ್ಕೆ ಸೇರುತ್ತದೆ. ನರ್ಮದಾ, ತಪತಿ ಮತ್ತು ಮಾಹಿ ಪೂರ್ವದಿಂದ ಪಶ್ಚಿಮಕ್ಕೆ ಹರಿಯುವ ದೇಶದ ಮೂರು ಪ್ರಮುಖ ನದಿಗಳು. ನರ್ಮದಾ ನದಿ ಸುಮಾರು 17 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಕಲ್ಪಿಸಿ ನಾಲ್ಕು ಕೋಟಿ ಜನರಿಗೆ ಕುಡಿಯುವ ನೀರನ್ನು ಒದಗಿಸುತ್ತದೆ. ನರ್ಮದಾ ನದಿಯ ಮೇಲಿರುವ ಜಲವಿದ್ಯುತ್ ಘಟಕಗಳಿಂದ ಸುಮಾರು 2400 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ.

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ಇತ್ತೀಚಿಗೆ ನರ್ಮದಾ ನದಿಯ ಕೆಲವು ಭಾಗಗಳಲ್ಲಿ ನೀರಿನ ಗುಣಮಟ್ಟ ಸ್ನಾನಕ್ಕೆ ಯೋಗ್ಯವಲ್ಲವೆಂದು ವರದಿ ಮಾಡಿತ್ತು. ನರ್ಮದಾ ಕಣಿವೆ ಅಭಿವೃದ್ಧಿಗಾಗಿ ಮಧ್ಯಪ್ರದೇಶ ರಾಜ್ಯ ಸರಕಾರವು 2016-17ರ ಬಜೆಟ್ ಅಂದಾಜಿನ ಪ್ರಕಾರ 2095.31 ರೂ. ಮೀಸಲಿಟ್ಟಿದೆ. ಮಧ್ಯಪ್ರದೇಶ ರಾಜ್ಯದಲ್ಲಿ 700 ಕ್ಕೂ ಹೆಚ್ಚು ನರ್ಮದಾ ಸೇವಾ ಸಮಿತಿಗಳು ಮತ್ತು 74000 ನರ್ಮದಾ ಸೇವಾಕರು ನದಿಯನ್ನು ರಕ್ಷಿಸಲು ನೋಂದಾಯಿಸಿದ್ದಾರೆ.

www.karunaduexams.com

## ಶಾಲೆಗಳಲ್ಲಿ ಬೆಂಗಾಳಿ ಕಡ್ಡಾಯಗೊಳಿಸಿದ ಪಶ್ಚಿಮ ಬಂಗಾಳ ಸರ್ಕಾರ



ಪಶ್ಚಿಮ ಬಂಗಾಳ ರಾಜ್ಯ ಸರ್ಕಾರ ಖಾಸಗಿ ಶಾಲೆಗಳು, ಇಂಗ್ಲಿಷ್ ಮಾಧ್ಯಮ ಶಾಲೆಗಳು ಸೇರಿದಂತೆ ಎಲ್ಲಾ ಶಾಲೆಗಳಲ್ಲಿ ಬಂಗಾಳಿ ಕಲಿಕೆಯನ್ನು ಕಡ್ಡಾಯಗೊಳಿಸಿದೆ. ಇದಾದ ನಂತರ, ಪಶ್ಚಿಮ ಬಂಗಾಳದ ಸೆಕೆಂಡರಿ ಶಿಕ್ಷಣ ಮಂಡಳಿಗಳನ್ನು ಹೊರತುಪಡಿಸಿ ಇಂಗ್ಲಿಷ್ ಮಾಧ್ಯಮ ಶಾಲೆಗಳು ಸೇರಿದಂತೆ ಎಲ್ಲಾ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಬಂಗಾಳಿಯನ್ನು ಐಚ್ಚಿಕ ವಿಷಯವಾಗಿ ಬೋಧಿಸುವುದು ಕಡ್ಡಾಯ. ಆದ್ದರಿಂದ ವಿದ್ಯಾರ್ಥಿಗಳು ಬಂಗಾಳಿಯನ್ನು ಎರಡನೆಯ ಅಥವಾ ಮೂರನೇ ಭಾಷೆಯಾಗಿ ಅಧ್ಯಯನ ಮಾಡಬಹುದು.

ಪ್ರಸ್ತುತ, ಶಾಲೆಗಳಲ್ಲಿ ಬಂಗಾಳಿ ಬೋಧನೆ ಕಡ್ಡಾಯವಲ್ಲ. ಬಂಗಾಳಿ, ಇಂಗ್ಲಿಷ್ ಮತ್ತು ಹಿಂದಿ ಅಲ್ಲದೇ, ವಿದ್ಯಾರ್ಥಿಗಳು ಉರ್ದು, ಗುರುಮುಖಿ, ನೇಪಾಳಿ ಮತ್ತು ಓಲ್-ಚಿಕಿ ಇತರ ಭಾಷೆಗಳನ್ನು ವಿದ್ಯಾರ್ಥಿಗಳು ಬೋಧನ ಮಾಧ್ಯಮವಾಗಿ ಆಯ್ಕೆ ಮಾಡಬಹುದಾಗಿದೆ.

**ಹಿನ್ನಲೆ**:

ಕೇರಳ ಸರ್ಕಾರ ಇತ್ತೀಚೆಗೆ ಎಪ್ರಿಲ್ನಲ್ಲಿ ಕೇರಳದ ಎಲ್ಲ ಶಾಲೆಗಳಲ್ಲಿ ಮಲಯಾಳಂ ಕಡ್ಡಾಯ ಬೋಧನೆ ಮಾಡುವ ಆದೇಶದ ಹೊರಡಿಸಿದ ಬೆನ್ನಲ್ಲೆ ಪಶ್ಚಿಮ ಬಂಗಾಳ ಸರ್ಕಾರ  ಶಾಲೆಗಳಲ್ಲಿ ಬೆಂಗಾಲಿ ಬೋಧನೆ ಕಡ್ಡಾಯಗೊಳಿಸಿ ಆದೇಶ ಹೊರಡಿಸಿದೆ. ಈ ಹಿಂದೆ ಎಡಪಂಥೀಯ ಸರ್ಕಾರವು 1984ರಲ್ಲಿ ಪಶ್ಚಿಮ ಬಂಗಾಳದ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲಿಷ್ ಬೋಧನೆಯನ್ನು ರದ್ದುಗೊಳಿಸಿತು. ಆದರೆ ಇಂಗ್ಲಿಷ್ ಬೋಧನೆಯನ್ನು 1992ರಲ್ಲಿ ಐದನೇ ತರಗತಿ, 1998 ರಲ್ಲಿ ಮೂರನೇ ತರಗತಿ ಮತ್ತು ಮತ್ತೆ 2003 ರಲ್ಲಿ ಒಂದನೇ ತರಗತಿ ಇಂದ ಎಲ್ಲಾ ತರಗತಿಗಳಲ್ಲಿ ಪುನಃ ಪರಿಚಯಿಸಲಾಯಿತು.

## 10 ಪರಮಾಣು ರಿಯಾಕ್ಟರ್ ಗಳ ಸ್ಥಾಪನೆಗೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ



ದೇಶೀಯವಾಗಿ ಪರಮಾಣು ವಿದ್ಯುತ್ ಉತ್ಪಾದನೆ ಹೆಚ್ಚಳಕ್ಕೆ ಒತ್ತು ನೀಡುವ ಉದ್ದೇಶದಿಂದ ಕೇಂದ್ರ ಸಚಿವ ಸಂಪುಟ ಸ್ವದೇಶೀಯವಾಗಿ 10 ಪ್ರೆಶರೈಸ್ಡ್ ಹೆವಿ ವಾಟರ್ ಪರಮಾಣು ರಿಯಾಕ್ಟರ್‌ಗಳ ಸ್ಥಾಪನೆಗೆ ಒಪ್ಪಿಗೆ ನೀಡಿದೆ. 10 ರಿಯಾಕ್ಟರ್‌ಗಳು ತಲಾ 700 ಮೆಗಾ ವಾಟ್ ವಿದ್ಯುತ್ ಉತ್ಪಾದನೆ ಮಾಡಲಿವೆ. ಆ ಮೂಲಕ ಒಟ್ಟು 7,000 ಮೆಗಾ ವಾಟ್ ವಿದ್ಯುತ್ ಉತ್ಪಾನೆ ಸೇರ್ಪಡೆಗೊಳ್ಳಲಿದ್ದು, ದೇಶದ ಪರಮಾಣು ವಿದ್ಯುತ್ ಉತ್ಪಾದನೆಯಲ್ಲಿ ಗಣನೀಯವಾಗಿ ಏರಿಕೆಯಾಗಲಿದೆ.

- ಭಾರತವು ಪ್ರಸ್ತುತ 6,780 ಮೆ.ವಾ. ಪರಮಾಣು ವಿದ್ಯುತ್ ಉತ್ಪಾದನೆ ಸಾಮರ್ಥ್ಯದ 22 ಘಟಕಗಳನ್ನು ಸ್ಥಾಪಿಸಿದೆ. ಹೊಸದಾಗಿ 6,700 ಮೆಗಾವಾಟ್ ಅಣು ವಿದ್ಯುತ್ ಉತ್ಪಾದನೆ 2021-22ರೊಳಗೆ ಸೇರ್ಪಡೆಗೊಳ್ಳಲಿದೆ ಎಂದು ನಿರೀಕ್ಷಿಸಲಾಗಿದೆ.
- ಪ್ರಸ್ತುತ ನಿರ್ಮಾಣ ಹಂತದ ಯೋಜನೆಗಳು ರಾಜಸ್ಥಾನ, ಗುಜರಾತ್ ಮತ್ತು ತಮಿಳುನಾಡಿನಲ್ಲಿವೆ. ಹೊಸ 10 ರಿಯಾಕ್ಟರ್‌ಗಳನ್ನು ರಾಜಸ್ತಾನದ ಮಣಿ ಬನ್ಸ್ವಾರಾ, ಮಧ್ಯ

www.karunaduexams.com

ಪ್ರದೇಶದ ಚಟ್ಕ, ಕರ್ನಾಟಕದ ಕೈಗಾ ಮತ್ತು ಹರಿಯಾಣದ ಗೋರಖ್‌ಪುರದಲ್ಲಿ ನಿರ್ಮಿಸಲಾಗುವುದು.

- ಈ ಯೋಜನೆಯು ಭಾರತೀಯ ಪರಮಾಣು ಉದ್ಯಮವನ್ನು ಪರಿವರ್ತಿಸಲು ಸಹಾಯ ಮಾಡುತ್ತದೆ ಹಾಗೂ ನೇರ ಮತ್ತು ಪರೋಕ್ಷವಾಗಿ 33,400 ಕ್ಕಿಂತ ಹೆಚ್ಚು ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಸರ್ಕಾರ ಹೇಳಿದೆ.

**ಹೆವಿ ವಾಟರ್ ಪ್ರೆಶರೈಸ್ಡ್ ರಿಯಾಕ್ಟರ್ (PHWR):**

ಪ್ರೆಶರೈಸ್ಡ್ ಹೆವಿ ವಾಟರ್ ರಿಯಾಕ್ಟರ್ ಗಳಲ್ಲಿ ನೈಸರ್ಗಿಕ ಯುರೇನಿಯಂ ಅನ್ನು ಇಂಧನವಾಗಿ ಮತ್ತು ಹೆವಿ ವಾಟರ್ ಅನ್ನು ಮಾಡರೇಟರ್ ಹಾಗೂ ಕೂಲೆಂಟ್ ಆಗಿ ಬಳಸಲಾಗುತ್ತದೆ. ಭಾರತದ ಮೊದಲ PHWR ಯನ್ನು ಅಟಾಮಿಕ್ ಎನರ್ಜಿ ಕೆನಡಾ ಲಿಮಿಟೆಡ್ (AECL) ತಾಂತ್ರಿಕ ಸಹಕಾರದಲ್ಲಿ ರಾಜಸ್ತಾನದ ರಾವತ್ಭತದಲ್ಲಿ ನಿರ್ಮಿಸಲಾಯಿತು. ಆದಾಗ್ಯೂ, 1974 ರಲ್ಲಿ ಪೋಖ್ರಾನ್ನಲ್ಲಿ ಭಾರತದ ಮೊದಲ ಪರಮಾಣು ಪ್ರಯೋಗದ ನಂತರ ಕೆನಡಾ ತನ್ನ ಬೆಂಬಲವನ್ನು ತಕ್ಷಣವೇ ಹಿಂತೆಗೆದುಕೊಂಡಿತು. ಮಹಾರಾಷ್ಟ್ರದ ತಾರಾಪುರದಲ್ಲಿ ಭಾರತದ ಮೊದಲ ಅಣು ಸ್ಥಾವರವನ್ನು ನಿರ್ಮಿಸಲಾಯಿತು. ಪ್ರಸ್ತುತ ರಾವತ್ಭಟ, ಕೈಗಾ, ಕಾಕ್ರಪಾರ್, ಕಲ್ಪಪ್ಪಮ್ ಮತ್ತು ನರೋರಾಗಳಲ್ಲಿ PHWR ಘಟಕಗಳು ಕಾರ್ಯ ನಿರ್ವಹಿಸುತ್ತಿವೆ. ಇತ್ತೀಚಿಗೆ, ಭಾರತದ ನ್ಯೂಕ್ಲಿಯರ್ ಪವರ್ ಕಾರ್ಪೊರೇಶನ್ ಲಿಮಿಟೆಡ್ (NPCIL) 220 MWe ಅಥವಾ 540 MWe ಸಾಮರ್ಥ್ಯದ ಒತ್ತಡದ ಹೆವಿ ವಾಟರ್ ರಿಯಾಕ್ಟರ್ ಗಳನ್ನು ಇತರ ರಾಷ್ಟ್ರಗಳಿಗೆ ಮಾರಾಟ ಮಾಡಲು ಸಿದ್ಧವಾಗಿದೆ ಎಂದು ಘೋಷಿಸಿದೆ.

<u>**ನಾಲ್ಕು ಬಾರಿ "ಮೌಂಟ್ ಎವರೆಸ್ಟ್" ಏರಿ ದಾಖಲೆ ಬರೆದ ಅಂಶು ಜಮ್ಸೆನ್ಪ**</u>



ಅರುಣಾಚಲ ಪ್ರದೇಶದ ಬೊಮ್ಡಿಲಾದ ನಿವಾಸಿ ಅಂಶು ಜಮ್ಸೆನ್ಪ ಅವರು ನಾಲ್ಕು ಬಾರಿ ಮೌಂಟ್ ಎವರೆಸ್ಟ್ ಅನ್ನು ಏರುವ ಮೂಲಕ ಈ ಸಾಧನೆ ಮಾಡಿದ ಮೊದಲ ಭಾರತೀಯ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಇಬ್ಬರು ಮಕ್ಕಳ ತಾಯಿಯಾಗಿರುವ ಜಮ್ಸೆನ್ಪಾ ಅವರು ಒಂದೇ ಋತುವಿನಲ್ಲಿ ಎರಡು ಬಾರಿ, ಅದರಲ್ಲೂ 10 ದಿನಗಳ ಅಂತರದಲ್ಲಿ ಎರಡು ಬಾರಿ ಎವರೆಸ್ಟ್ ಪರ್ವತವನ್ನು ಈಗಾಗಲೇ ಏರಿದ್ದಾರೆ. ಮೇ 2011 ರಲ್ಲಿ ಅವರು ಎರಡು ಬಾರಿ ಮೌಂಟ್ ಎವರೆಸ್ಟ್ ಏರಿದ್ದರು. ಮೇ 18, 2013 ರಂದು ಅವರು ಮತ್ತೆ ಶಿಖರವನ್ನು ತಲುಪಿದ್ದರು.

ನ್ಯೂಜಿಲೆಂಡ್ನ ಎಡ್ಮಂಡ್ ಹಿಲರಿ ಮತ್ತು ನೇಪಾಳದ ತೆನ್ಸಿಂಗ್ ನೋರ್ಗೆ ಮೌಂಟ್ ಎವರೆಸ್ಟ್ ಏರಿದ ಮೊದಲ ಪರ್ವತಾರೋಹಿಗಳು. ಮೇ 29, 1953 ರಂದು ಈ ಸಾಧನೆಯನ್ನು ಅವರು ಸಾಧಿಸಿದರು. ಇಟಾಲಿಯನ್ ಪರಿಶೋಧಕ ರೇನ್ಹೋಲ್ಡ್ ಮೆಸ್ನರ್ ಎಂಬಾತ 1978 ರಲ್ಲಿ ಆಮ್ಲಜನಕದ ಪೂರೈಕೆ ಇಲ್ಲದೆ ಮೌಂಟ್ ಎವರೆಸ್ಟ್ ಅನ್ನು ಏರಿದ ಮೊದಲ ವ್ಯಕ್ತಿ. ಮೆಸ್ನರ್ ರವರು ಮೌಂಟ್ ಎವರೆಸ್ಟ್ ಸೇರಿದಂತೆ ಸಮುದ್ರ ಮಟ್ಟಕ್ಕಿಂತ 8,000 ಮೀಟರ್ (26,000 ಅಡಿ) ಎತ್ತರವಿರುವ ಹದಿನಾಲ್ಕು ಶಿಖರಗಳು ಏರಿದ ಮೊದಲ ಪರ್ವತಾರೋಹಿ.

www.karunaduexams.com

**30 ವರ್ಷಗಳ ನಂತರ ಭಾರತೀಯ ಸೇನೆಗೆ ಹೊವಿಟ್ಜರ್ ಗನ್**



ಬೊಫೋರ್ಸ್ ಹೊವಿಟ್ಜರ್ ಬಂದೂಕುಗಳನ್ನು ಖರೀದಿಸಿದ 30 ವರ್ಷಗಳ ನಂತರ ಭಾರತ ಮೊದಲ ಬಾರಿಗೆ ಎಂ777 ಫಿರಂಗಿ ಬಂದೂಕು (ಆರ್ಟಿಲರಿ ಗನ್) ಗಳನ್ನು BAE ಸಿಸ್ಟಂನಿಂದ ಆಮದು ಮಾಡಿಕೊಂಡಿದೆ. ಬೋಫೋರ್ಸ್ ಬಂದೂಕುಗಳನ್ನು 1980ರ ದಶಕದ ಉತ್ತರಾರ್ಧದಲ್ಲಿ ಸೇರ್ಪಡೆಗೊಳಿಸಲಾಯಿತು, ಅದರ ನಂತರ ಸೇನೆಗೆ ಯಾವುದೇ ಆಧುನಿಕ ಫಿರಂಗಿ ಗನ್ನಳನ್ನು ಸೇರ್ಪಡೆಗೊಳಿಸಿಲ್ಲ. ಇದೀಗ ಎರಡು ಎಂ777 ಗನ್ನಳು ಹೊಸದಿಲ್ಲಿಗೆ ಆಗಮಿಸಿದ್ದು ರಾಜಸ್ಥಾನದ ಪೋಖ್ರಾನ್ ಫೀಲ್ಡ್ ಫೈರಿಂಗ್ ಶ್ರೇಣಿಯಲ್ಲಿ ಪರೀಕ್ಷಿಸಲಾಗುವುದು. ಭಾರತೀಯ ಸೇನೆಯು 2020 ರ ವೇಳೆಗೆ 3,503 ಗನ್ನಳೊಂದಿಗೆ 169 ರೆಜಿಮೆಂಟ್ಗಳನ್ನು ಸಜ್ಜುಗೊಳಿಸಲು ಯೋಜಿಸಿದೆ.

- ಅಮೆರಿಕದಿಂದ ಎಂ777 ಫಿರಂಗಿ ಗನ್ನಳನ್ನು ಖರೀದಿಸುವ ಪ್ರಕ್ರಿಯೆಗೆ 2010ರಲ್ಲಿ ಚಾಲನೆ ನೀಡಲಾಯಿತು. ಕಳೆದ ವರ್ಷ ನವೆಂಬರ್ ನಲ್ಲಿ 145 ಎಂ777 ಗನ್ನಳನ್ನು ಖರೀದಿಸುವ ರೂ 2900 ಕೋಟಿ ಒಪ್ಪಂದಕ್ಕೆ ಸಹಿ ಹಾಕಲಾಯಿತು.
- 155ಎಂಎಂ/39 ಕ್ಯಾಲಿಬರ್ ಹೊವಿಟ್ಜರ್ ಗಳು ಸೇನೆಯ ಕಾರ್ಯಾಚರಣೆ ಸಾಮರ್ಥ್ಯವನ್ನು ಹೆಚ್ಚಿಸಲಿವೆ.
- 24.7ಕೀ.ಮೀ ದೂರದ ವರೆಗೆ ನಿಖರ ದಾಳಿ ಮಾಡುವ ಸಾಮರ್ಥ್ಯವನ್ನು ಹೊಂದಿರುವ ಹೋವಿಟ್ಜರ್ ಗಳು ರಾಕೆಟ್ ಲಾಂಚರ್‌ನ ನೆರವಿನೊಂದಿಗೆ ಮತ್ತು ಹಗುರ ಮದ್ದುಗುಂಡುಗಳನ್ನು ಬಳಸಿ 30 ಕಿ.ಮೀ. ದೂರದ ವರೆಗೂ ದಾಳಿ ನಡೆಸುವ ಸಾಮರ್ಥ್ಯ ಹೊಂದಿದೆ. ಎಂ 777ನಲ್ಲಿ ಡಿಜಿಟಲ್ ಫೈರ್ ಕಂಟ್ರೋಲ್ ಸಿಸ್ಟಮ್ ಅನ್ನು ಬಳಕೆ ಮಾಡಲಾಗುತ್ತದೆಯಾದ್ದರಿಂದ ತ್ವರಿತಗತಿಯಲ್ಲಿ ಗುಂಡು ಹಾರಿಸಲು ಸಾಧ್ಯವಿದೆ. ಒಂದು ನಿಮಿಷಕ್ಕೆ 5 ಸುತ್ತು ಗುಂಡು ಹಾರಿಸುವ ಸಾಮರ್ಥ್ಯ ಹೊಂದಿರುವ ಎಂ 777 ಹೊವಿಟ್ಜರ್ ಗನ್ ನಿರ್ವಹಣೆಗೆ 8 ಮಂದಿ ಸಿಬ್ಬಂದಿ ಅಗತ್ಯವಿದೆ. ಹೊವಿಟ್ಜರ್ ಗನ್ ಅನ್ನು 2008ರಲ್ಲಿ ಅಮೆರಿಕ ಆಫ್ಘಾನಿಸ್ಥಾನದ ಮೇಲಿನ ಯುದ್ಧದಲ್ಲಿ ಬಳಕೆ ಮಾಡಿಕೊಂಡಿತ್ತು.
- ಚಿನೂಕ್ ನಂತಹ ಹೆವಿ-ಲಿಫ್ಟ್ ಹೆಲಿಕಾಪ್ಟರ್ಗಳನ್ನು ಕೂಡಾ ಬಳಸಿ ಗನ್ನಳನ್ನು ಸಾಗಿಸಬಹುದಾಗಿದೆ. ಯು.ಎಸ್.ನಿಂದ ಚಿನೂಕ್ ಪಡೆಯಲು ಭಾರತವು ಒಪ್ಪಂದಕ್ಕೆ ಸಹಿ ಹಾಕಿದೆ. C130J ಸೂಪರ್ ಹರ್ಕ್ಯುಲಸ್, ಸಹ M777 ಬಂದೂಕುಗಳನ್ನು ಹೊತ್ತೊಯ್ಯುವ ಸಾಮರ್ಥ್ಯವನ್ನು ಹೊಂದಿದೆ. M777 ಬಂದೂಕುಗಳು ಈಗಾಗಲೇ ಅಮೆರಿಕ, ಕೆನಡಾ ಮತ್ತು ಆಸ್ಟ್ರೇಲಿಯಾ ದೇಶಗಳಲ್ಲಿ ಸೇವೆಯಲ್ಲಿವೆ.
- 25 ಹೋವಿಟ್ಜರ್ ಗನ್ ಗಳನ್ನು ಆಮದು ಮಾಡಿಕೊಂಡು ನಂತರ 120 ಹೋವಿಟ್ಜರ್ ಗಳನ್ನು ಇಲ್ಲೇ ಜೋಡಣಾ ಪ್ರಕ್ರಿಯೆ ಮಾಡಲಾಗುತ್ತದೆ, ಇದಕ್ಕಾಗಿ ಮಹೀಂದ್ರಾ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ.

www.karunaduexams.com

## ಭಾರತೀಯ ನೌಕಪಡೆ ಮತ್ತು ರಿಪಬ್ಲಿಕ್ ಆಫ್ ಸಿಂಗಾಪುರ ನಡುವೆ “ಸಿಂಬೆಕ್ಸ್-17” ಆರಂಭ



ಭಾರತೀಯ ನೌಕಾಪಡೆ ಮತ್ತು ರಿಪಬ್ಲಿಕ್ ಆಫ್ ಸಿಂಗಾಪುರ್ ನೌಕಾಪಡೆ ಮಧ್ಯೆ 24ನೇ ದ್ವಿಪಕ್ಷೀಯ ಕಡಲ ಅಭ್ಯಾಸ ಸಿಂಬೆಕ್ಸ್ -17 ದಕ್ಷಿಣ ಚೀನಾ ಸಮುದ್ರದಲ್ಲಿ ಆರಂಭಗೊಂಡಿದೆ. ಸಿಂಬೆಕ್ಸ್ ಎಂದರೆ Singapore-India Bilateral Maritime Exercise” ಈ ಅಭ್ಯಾಸ ಮೇ 18, 2017 ರಿಂದ ಮೇ 24, 2017 ರವರೆಗೆ ನಡೆಯಲಿದೆ.

- ಈ ವರ್ಷದ ದ್ವಿಪಕ್ಷೀಯ ಕಡಲ ವ್ಯಾಯಾಮ, ರಿಪಬ್ಲಿಕ್ ಆಫ್ ಸಿಂಗಾಪುರ್ ಮತ್ತು ಐಎನ್ ಮಧ್ಯೆ ಹೆಚ್ಚುತ್ತಿರುವ ಪರಸ್ಪರ ಕಾರ್ಯಸಾಧ್ಯತೆ ಮತ್ತು ಕಡಲ ಭದ್ರತೆ ಕಾರ್ಯಾಚರಣೆಗಳಿಗಾಗಿ ಸಾಮಾನ್ಯ ತಿಳುವಳಿಕೆ ಮತ್ತು ಕಾರ್ಯವಿಧಾನಗಳನ್ನು ಹೆಚ್ಚಿಸಲು ಆಗಿದೆ.
- ಕಡಲ ಅಭ್ಯಾಸವನ್ನು ಎರಡು ಹಂತಗಳಾಗಿ ವಿಭಾಗಿಸಲಾಗಿದೆ. ಬಂದರು ಹಂತ ಮೇ 20ರವರೆಗೆ ಮತ್ತು ಸಮುದ್ರ ಹಂತ ಮೇ 21ರಿಂದ ಮೇ 24ರವರೆಗೆ ನಡೆಯಲಿದೆ.
- ಭಾರತೀಯ ನೌಕಾ ಹಡಗುಗಳಾದ ಶಿವಾಲಿಕ್, ಸಹ್ಯಾದ್ರಿ, ಜ್ಯೋತಿ ಮತ್ತು ಕಮೊರ್ತ, ಪಿ8-1 ಕಡಲ ಗಸ್ತು ಮತ್ತು ಜಲಾಂತರ್ಗಾಮಿ ವಿರೋಧಿ ಯುದ್ಧ ವಿಮಾನ ಕಡಲಾಭ್ಯಾಸದಲ್ಲಿ ಭಾಗವಹಿಸಲಿವೆ.
- ಐಎನ್‍ಎಸ್ ಸಹ್ಯಾದ್ರಿ ಮತ್ತು ಐಎನ್‍ಎಸ್ ಕಮಾರ್ತ ಮೇ 12ಕ್ಕೆ ಆಗಮಿಸಿದ್ದರೆ, ಐಎನ್‍ಎಸ್ ಶಿವಾಲಿಕ್ ಮತ್ತು ಐಎನ್‍ಎಸ್ ಜ್ಯೋತಿ ಸಮುದ್ರ ಹಂತದಲ್ಲಿ ನೇರವಾಗಿ ಭಾಗವಹಿಸಲಿವೆ.

## ಯಮುನಾ ನದಿ ತೀರದಲ್ಲಿ ಮಲ ವಿಸರ್ಜನೆ ಹಾಗೂ ತ್ಯಾಜ್ಯ ವಿಲೇವಾರಿಗೆ ತಡೆ



ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಮುಖ್ಯಸ್ಥ ನ್ಯಾಯಮೂರ್ತಿ ಸ್ವತಂತರ್ ಕುಮಾರ್ ಅವರ ನೇತೃತ್ವದ ಪೀಠವು ಯಮುನಾದ ತೀರದಲ್ಲಿ ಬಯಲು ಮಲವಿಸರ್ಜನೆ ಮತ್ತು ತ್ಯಾಜ್ಯ ವಿಲೇವಾರಿ ಮಾಡುವುದನ್ನು ನಿಷೇಧಿಸಿದೆ. ಆದೇಶವನ್ನು ಉಲ್ಲಂಘಿಸಿದ ಜನರಿಗೆ ರೂ. 5,000 ನಷ್ಟು ಪರಿಸರ ಪರಿಹಾರವನ್ನಾಗಿ ವಿಧಿಸಲಾಗುವುದು. ಇದಲ್ಲದೆ, ನದಿ ಶುದ್ದೀಕರಣ ಕಾರ್ಯಗಳನ್ನು ನೋಡಿಕೊಳ್ಳಲು ದೆಹಲಿ ಜಲ ಮಂಡಳಿಯ ಸಿಇಒ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿ ಮತ್ತು ನಿಗದಿತ ಅವಧಿಯಲ್ಲಿ ವರದಿಗಳನ್ನು ಸಲ್ಲಿಸುವಂತೆ ಆದೇಶಿಸಿದೆ.

ಅಲ್ಲದೇ ಮಾಲಿನ್ಯಕಾರಕ ಕೈಗಾರಿಕೆಗಳ ವಿರುದ್ಧ ತಕ್ಷಣವೇ ಕ್ರಮ ಕೈಗೊಳ್ಳಲು ದೆಹಲಿ ಸರ್ಕಾರ ಮತ್ತು ಪುರಸಭೆ ಸಂಸ್ಥೆಗಳಿಗೆ ನ್ಯಾಯಾಲಯ ಆದೇಶಿಸಿದೆ. ಕೈಗಾರಿಕೆಗಳು ಈ ನದಿ ಮಾಲಿನ್ಯಕ್ಕೆ ಪ್ರಮುಖ ಮೂಲವಾಗಿವೆ.

**ಹಿನ್ನಲೆ**:

ಮೇ 1 ರಂದು NGTಯು ಯುಮುನಾ ನದಿಗೆ ಬಿಡುಗಡೆಯಾಗುವ ಮೊದಲು ಕೊಳಚೆಯನ್ನು ಸಂಸ್ಕರಿಸಲಾಗುತ್ತಿದೆಯೇ ಎಂದು ಖಚಿತಪಡಿಸಿಕೊಳ್ಳಲು ಕೊಳಚೆನೀರಿನ ಸಂಸ್ಕರಣಾ ಘಟಕಗಳ(STP) ತಪಾಸಣೆಗೆ ಆದೇಶಿಸಿತ್ತು. ಯಮುನಾ ತಲುಪುವ ಸುಮಾರು 67% ತ್ಯಾಜ್ಯನೀರನ್ನು 'ಮೈಲಿ ಸೆ ನಿರ್ಮಲ್ ಯಮುನಾ ರಿವೈಟಲೈಸೇಶನ್ ಪ್ರಾಜೆಕ್ಟ್ 2017' ಹಂತದ

www.karunaduexams.com

ಹಂತದಲ್ಲಿ ಸ್ಥಾಪಿಸಲಾಗುವ STP ಗಳ ಅಡಿಯಲ್ಲಿ ಸಂಸ್ಕರಿಸಬೇಕು. ತ್ಯಾಜ್ಯನೀರನ್ನು ಸಂಸ್ಕರಿಸುವ ಯೋಜನೆಯಡಿ ಒಟ್ಟು 14 STP ಘಟಕಗಳಲ್ಲಿ ಏಳು STP ಘಟಕಗಳನ್ನು ದೆಹಲಿ ಜಲ್ ಮಂಡಳಿ ತನ್ನದೇ ಆದ ಹಣದಿಂದ ನಿರ್ಮಿಸಲಿದೆ.

ದೆಹಲಿ, ಹರಿಯಾಣ ಮತ್ತು ಉತ್ತರ ಪ್ರದೇಶ ರಾಜ್ಯಗಳಿಗೆ ಯಮುನಾ ಆಕ್ಷನ್ ಪ್ಲಾನ್ (ವೈಎಪಿ) -I ಮತ್ತು ವೈಎಪಿ -II ಯೋಜನೆಗಳನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿದೆ. 2019ರೊಳಗೆ ಪೂರ್ಣಗೊಳ್ಳಬೇಕಾದ YAP-III ಯೋಜನೆಗಳನ್ನು ಜಪಾನ್ ಇಂಟರ್ನ್ಯಾಷನಲ್ ಕೋಆಪರೇಷನ್ ಏಜೆನ್ಸಿಯ (JICA) ಆರ್ಥಿಕ ಸಹಾಯದಿಂದ ದೆಹಲಿಯಲ್ಲಿ ಪರಿಚಯಿಸಲಾಗಿದೆ. ಯೋಜನೆಯು ಒಳಚರಂಡಿ / ಡ್ರೈನ್ಸ್, ಚರಂಡಿ ಸಂಸ್ಕರಣಾ ಘಟಕಗಳು, ಕಡಿಮೆ-ವೆಚ್ಚದ ನೈರ್ಮಲೀಕರಣ ಮತ್ತು ಸಮುದಾಯದ ಶೌಚಾಲಯ ಸಂಕೀರ್ಣಗಳು, ವಿದ್ಯುತ್ ಮತ್ತು ಸುಧಾರಿತ ಮರದ ಶವಸಂಸ್ಕಾರವನ್ನು ಒಳಗೊಂಡಿದೆ.

## <u>ಗಂಗಾ ನದಿಯಲ್ಲಿ ಹೂಳೆತ್ತಲು ಮಾಧವ ಚಿತಾಲೆ ಸಮಿತಿ ಶಿಫಾರಸ್ಸು</u>



ಕೇಂದ್ರ ಜಲ ಸಂಪನ್ಮೂಲ, ನದಿ ಅಭಿವೃದ್ಧಿ ಮತ್ತು ಗಂಗಾ ಪುನರ್ವಸತಿ ಸಚಿವಾಲಯ ಕಳೆದ ವರ್ಷ ಗಂಗಾ ನದಿಯಲ್ಲಿ ಹೂಳು ತೆಗೆಯಲು ರೂಪುರೇಷೆಗಳನ್ನು ತಯಾರಿಸಲು ಸಮಿತಿಯನ್ನು ರಚಿಸಿತ್ತು. ನಾಲ್ಕು ಸದಸ್ಯರ ಸಮಿತಿಗೆ "ರಾಷ್ಟ್ರೀಯ ಗಂಗಾ ನದಿ ಬೇಸಿನ್ ಅಥಾರಿಟಿ ತಜ್ಞ ಸದಸ್ಯ" ಮಾಧವ್ ಚಿಟಲೆ ನೇತೃತ್ವವನ್ನು ವಹಿಸಿದ್ದರು. ಕೇಂದ್ರ ಜಲ ಸಂಪನ್ಮೂಲ, ನದಿ ಅಭಿವೃದ್ಧಿ ಮತ್ತು ಗಂಗಾ ಪುನರ್ವಸತಿ ಸಚಿವಾಲಯದ ಕಾರ್ಯದರ್ಶಿ, ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಕಾರ್ಯದರ್ಶಿ ಮತ್ತು ಪುಣೆಯ ಕೇಂದ್ರ ಜಲ ಮತ್ತು ಇಂಧನ ಸಂಶೋಧನಾ ಕೇಂದ್ರದ ನಿರ್ದೇಶಕ ಡಾ. ಮುಖೇಶ್ ಸಿನ್ಹಾ ರವರು ಸಮಿತಿಯ ಸದಸ್ಯರುಗಳು.

**ಶಿಫಾರಸ್ಸುಗಳು**:

- ಪ್ರವಾಹ ದಿಕ್ಕನ್ನು ಅಧ್ಯಯನ ನಡೆಸಲು ಸಂಸ್ಥೆಯನ್ನು ಸ್ಥಾಪಿಸುವುದು.
- ಗಂಗಾ ನದಿಯಲ್ಲಿ ಹೂಳು ತೆಗೆಯಲು ಸಂಬಂಧಿಸಿದಂತೆ ಮರಳು ನೋಂದಣಿ ರಚಿಸುವುದು. ಹೂಳು ತೆಗೆಯುವ ಚಟುವಟಿಕೆಗಳ ಮಾರ್ಗದರ್ಶನ ಮಾಡಲು ಮತ್ತು ಸೆಡಿಮೆಂಟ್ ಬಜೆಟ್ ತಯಾರಿಸಲು ತಾಂತ್ರಿಕ ಸಂಸ್ಥೆ ಅನ್ನು ಸ್ಥಾಪಿಸುವುದು.
- ಸವೆತ ಮತ್ತು ಹೂಳು ತುಂಬುವುದು ಬಹಳ ಸಂಕೀರ್ಣ ವಿದ್ಯಮಾನವಾಗಿದೆ ಎಂದು ಸಮಿತಿಯು ಗಮನಿಸಿದೆ ಮತ್ತು ಆದ್ದರಿಂದ ಹೂಳು ನಿರ್ವಹಣೆ ಮತ್ತು ನಿಯಂತ್ರಣ ಸಮಸ್ಯೆಗಳು ಪ್ರಾದೇಶಿಕವಾಗಿ-ನಿರ್ದಿಷ್ಟವಾಗಿರುತ್ತವೆ. ಹಾಗಾಗಿ, ಹೂಳೆತ್ತುವಾಗ

www.karunaduexams.com

ವಿಶಾಲ ತತ್ವಗಳ ಸೂತ್ರಗಳನ್ನು ರೂಪಿಸಲು ಸಮಿತಿಯು ಸೂಚಿಸಿದೆ. ನಿರ್ಲಕ್ಷ್ಯದಲ್ಲಿ ಪರಿಸರಕ್ಕೆ ದಕ್ಕೆ ಆಗಲಿದೆ.

- ಸಮಿತಿಯು ಉತ್ತಮ ಕೃಷಿ ಪದ್ದತಿಗಳನ್ನು, ನದಿಯ ದಡದ ಸವೆತ ತಡೆಯುವ ಕೆಲಸಗಳನ್ನು ಮತ್ತು ನದಿಯ ಉದ್ದಕ್ಕೂ ಇರುವ ಕೆರೆಗಳಲ್ಲಿ ಹೂಳು ಎತ್ತಿ ಪುನಃಶ್ಚೇತನಕ್ಕೆ ಶಿಫಾರಸು ಮಾಡಿದೆ. ಕೆರೆಗಳಲ್ಲಿ ಹೂಳು ಎತ್ತುವುದರಿಂದ ಅವುಗಳ ಸಂಗ್ರಹ ಸಾಮರ್ಥ್ಯಗಳನ್ನು ಹೆಚ್ಚಾಗಲಿದೆ.

## <u>ಸಮಗ್ರ ರಕ್ಷಣಾ ಸಿಬ್ಬಂದಿಯ ಉಪ ಮುಖ್ಯಸ್ಥರಾಗಿ ಪಿ.ಎಸ್.ಪ್ರಧಾನ್ ನೇಮಕ</u>



ಏರ್ ಮಾರ್ಷಲ್ ಪಿಎನ್ ಪ್ರಧಾನ್ ಅವರು ಸಮಗ್ರ ರಕ್ಷಣಾ ಸಿಬ್ಬಂದಿ (ಇಂಟಿಗ್ರೇಟೆಡ್ ಡಿಫೆನ್ಸ್ ಸ್ಟಾಫ್ (ಕಾರ್ಯಾಚರಣೆ)) ಉಪ ಮುಖ್ಯಸ್ಥರಾಗಿ ನೇಮಕಗೊಂಡಿದ್ದಾರೆ.

**ಸಮಗ್ರ ರಕ್ಷಣಾ ಸಿಬ್ಬಂದಿ**:

ಭಾರತ ರಕ್ಷಣಾ ನಿರ್ವಹಣೆಯನ್ನು ಪರಿಶೀಲಿಸುವ ಸಲುವಾಗಿ 2001ರಲ್ಲಿ ಕಾರ್ಗಿಲ್ ಯುದ್ದದ ನಂತರ ಸಮಗ್ರ ರಕ್ಷಣಾ ಸಿಬ್ಬಂದಿಯನ್ನು ರಚಿಸಲಾಯಿತು. ಸಶಸ್ತ್ರ ಪಡೆಗಳ ನಡುವೆ ಉನ್ನತ ಮಟ್ಟದ ಸಹಕಾರ ಸಾಧಿಸುವ ಸಲುವಾಗಿ ಐಡಿಎಸ್ ಅನ್ನು ಸ್ಥಾಪಿಸಲಾಗಿದೆ.

**ಪಿ.ಎನ್.ಪ್ರಧಾನ್**:

1981 ರಲ್ಲಿ ಪಿಎನ್ ಪ್ರಧಾನ್ ಭಾರತೀಯ ಏರ್ ಫೋರ್ಸ್ನಲ್ಲಿ ಪೈಲಟ್ ಆಗಿ ನೇಮಕಗೊಂಡರು. ಪ್ರಧಾನ್ ಅವರು ನಾಲ್ಕು ಕಮಾಂಡ್ ಹುದ್ದೆಗಳಾದ ಅಸಿಸ್ಟೆಂಟ್ ಚೀಫ್ ಆಫ್ ಏರ್ ಸ್ಟಾಫ್ (ಸಾರಿಗೆ ಮತ್ತು ಹೆಲಿಕಾಪ್ಟರ್ಗಳು) ಅಸಿಸ್ಟೆಂಟ್ ಚೀಫ್ ಆಫ್ ಏರ್ ಸ್ಟಾಫ್ (ಪರ್ಸನಲ್ ಏರ್ಮೆನ್ ಮತ್ತು ಸಿವಿಲಿಯನ್ಸ್) ಮತ್ತು ದಕ್ಷಿಣ ಏರ್ ಕಮಾಂಡ್ನಲ್ಲಿ ಹಿರಿಯ ವಾಯು ಸಿಬ್ಬಂದಿ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ.

ಪ್ರಧಾನ್ ಅವರು ಎಬ್ರಾಯರ್-135, ಬಿಬಿಜೆ ಮತ್ತು ಸಿ-130 ನೌಕೆಗಳನ್ನು ಭಾರತೀಯ ವಾಯುಪಡೆಗೆ ಸೇರ್ಪಡೆ ಮತ್ತು ಕಾರ್ಯಾಚರಣೆಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಅವರ ವಿಶೇಷ ಸೇವೆಯನ್ನು ಗುರುತಿಸಿ, ಅವರಿಗೆ 2014 ರಲ್ಲಿ "ಅತಿ ವಿಶಿಷ್ಟ ಸೇವಾ ಪದಕ"ವನ್ನು ನೀಡಲಾಗಿದೆ.

## <u>ನರ್ಮದಾ ನದಿಯಲ್ಲಿ ಮರಳು ಗಣಿಗಾರಿಕೆ ಮೇಲೆ ಮಧ್ಯಪ್ರದೇಶ ಸರ್ಕಾರದಿಂದ ನಿಷೇಧ</u>



ಮಧ್ಯಪ್ರದೇಶ ರಾಜ್ಯ ಸರ್ಕಾರ ನರ್ಮದಾ ನದಿಯಲ್ಲಿ ಮರಳು ಗಣಿಗಾರಿಕೆ ಮೇಲೆ ಅನಿರ್ದಿಷ್ಟ ಅವಧಿ ನಿಷೇಧವನ್ನು ಹೇರಿದೆ. ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ರವರು ಭೋಪಾಲ್ ನಲ್ಲಿ ಈ ಘೋಷಣೆಯನ್ನು ಮಾಡಿದ್ದಾರೆ. ನದಿಗಳಲ್ಲಿ ಮರಳು ಗಣಿಗಾರಿಕೆಗೆ ಸಂಬಂಧಿಸಿದಂತೆ ವೈಜ್ಞಾನಿಕ ವಿಧಾನಗಳನ್ನು ಸೂಚಿಸಲು ಸರ್ಕಾರ ಸಮಿತಿಯನ್ನು ಸಹ ರಚಿಸಿದೆ. ಈ

www.karunadu exams.com

ಸಮಿತಿಯು ನದಿಗಳಿಗೆ ಹಾನಿಯಾಗದಂತೆ ಮರಳು ಗಣಿಗಾರಿಕೆ ನಡೆಸುವ ವಿಧಾನಗಳನ್ನು ಅಧ್ಯಯನ ನಡೆಸಿ ನಂತರ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಲಿದೆ.

**ಹಿನ್ನಲೆ**:

ಅನಧಿಕೃತ ಮರಳು ಗಣಿಗಾರಿಕೆ ಮಧ್ಯಪ್ರದೇಶ ಸೇರಿದಂತೆ ಭಾರತದ ಅನೇಕ ರಾಜ್ಯಗಳಲ್ಲಿ ಗಂಭೀರವಾದ ಕಾನೂನು ವಿರೋಧತಾತ್ಮಕ ಹಾಗೂ ಪರಿಸರ ಸಮಸ್ಯೆಗಳಲ್ಲೊಂದು. ಅಧಿಕಾರಿಗಳು ಮತ್ತು ರಾಜಕಾರಣಿಗಳ ನಡುವಿನ ಹೊಂದಾಣಿಕೆ ಕಾರಣ ಮರಳು ಮಾಫಿಯಾ ಪ್ರಮುಖ ವ್ಯಾಪಾರವಾಗಿ ಅಭಿವೃದ್ದಿ ಹೊಂದಿದೆ. ಈ ಕಾನೂನುಬಾಹಿರ ಚಟುವಟಿಕೆಯನ್ನು ಹತ್ತಿಕ್ಕುವ ಹೋರಾಟದಲ್ಲಿ ಹಲವು ಪೊಲೀಸ್ ಅಧಿಕಾರಿಗಳು ಮತ್ತು ಕಾರ್ಯಕರ್ತರು ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಮುಖ್ಯಮಂತ್ರಿ ಚೌಹಣ್ ಸಿಂಗ್ ಅವರು "ನಮಮಿ ನರ್ಮದಾ ಯಾತ್ರಾ" ಮೂಲಕ "ನರ್ಮದಾ ಉಳಿಸಿ" ಅಭಿಯಾನವನ್ನು ಯಶಸ್ವಿಗೊಳಿಸಲು ನರ್ಮದಾ ನದಿಯ ಉದ್ದಕ್ಕೂ ಪ್ರಯಾಣಿಸಿ ಶ್ರಮಿಸುತ್ತಿದ್ದಾರೆ. ಆದರೆ ಫೆಬ್ರವರಿ 2017ರಲ್ಲಿ, ಮುಖ್ಯಮಂತ್ರಿಯ ಸೋದರ ಸಂಬಂಧಿಗೆ ಸೇರಿದ ಕಂಪೆನಿಯು ಅಕ್ರಮ ಮರಳು ಗಣಿಗಾರಿಕೆಯಲ್ಲಿ ತೊಡಗಿಸಿಕೊಂಡಿದೆ ಎಂಬ ಆರೋಪ ಕೇಳಿಬಂದಿದೆ. ಸರ್ಕಾರಕ್ಕೆ ಮುಜುಗರವಾಗಿದೆ. ಸದ್ಯ ಈ ಪ್ರಕರಣ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯಲ್ಲಿದ್ದು, ಈಗ ಬಗ್ಗೆ ಧೃಡ ನಿರ್ಧಾರವನ್ನು ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಿದೆ.

"**<u>ದರ್ವಾಜಾ ಬಂದ್" ಅಭಿಯಾನಕ್ಕೆ ಚಾಲನೆ</u>**



ಶೌಚಾಲಯ ಬಳಕೆ ಪ್ರೋತ್ಸಾಹಿಸುವ ಸಲುವಾಗಿ ಮತ್ತು ಹಳ್ಳಿಗಳಲ್ಲಿ ಬಯಲು ಮಲ ವಿಸರ್ಜನೆಯನ್ನು ತೊಡೆದು ಹಾಕುವ ಸಲುವಾಗಿ ಕುಡಿಯುವ ನೀರು ಮತ್ತು ನೈರ್ಮಲ್ಯ ಸಚಿವಾಲಯ 'ದರ್ವಾಜಾ ಬಂದ್" ಎಂಬ ರಾಷ್ಟ್ರವ್ಯಾಪಿ ಪ್ರಚಾರವನ್ನು ಪ್ರಾರಂಭಿಸಿದೆ. ಮಹಾರಾಷ್ಟ್ರದಲ್ಲಿ ನಟ ಅಮಿತಾಬ್ ಬಚ್ಚನ್, ಕುಡಿಯುವ ನೀರು ಮತ್ತು ನೈರ್ಮಲ್ಯ ಸಚಿವ, ನರೇಂದ್ರ ಸಿಂಗ್ ತೋಮರ್ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಅವರ ಉಪಸ್ಥಿತಿಯಲ್ಲಿ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

**ಪ್ರಮುಖಾಂಶಗಳು**:

ಈ ಅಭಿಯಾನವನ್ನು ಸ್ವಚ್ಚ ಭಾರತ ಮಿಷನ್ ಅಡಿಯಲ್ಲಿ ಜಾರಿಗೊಳಿಸಲಾಗುತ್ತಿದೆ. ಈ ಅಭಿಯಾನ ದೇಶಾದ್ಯಂತ ತಕ್ಷಣವೇ ಜಾರಿಗೆ ಬರಲಿದೆ. ದರ್ವಾಜಾ ಬಂದ್ ಎಂದರೆ ಸಾಂಕೇತಿಕವಾಗಿ ಬಯಲು ಮಲವಿಸರ್ಜನೆ ಅಭ್ಯಾಸವನ್ನು ಸಂಪೂರ್ಣವಾಗಿ ಮುಚ್ಚುವುದು ಎಂದರ್ಥ. ವಿಶ್ವ ಬ್ಯಾಂಕ್ ಈ ಪ್ರಚಾರಕ್ಕೆ ಬೆಂಬಲವನ್ನು ನೀಡಿದೆ. ಶೌಚಾಲಯಗಳನ್ನು ಹೊಂದಿದ್ದು ಬಳಕೆ ಮಾಡದ ಪುರುಷರ ವರ್ತನೆಯಲ್ಲಿ ಬದಲಾವಣೆ ತರುವ ಉದ್ದೇಶದೊಂದಿಗೆ ಅಭಿಯಾನವನ್ನು ಆರಂಭಿಸಲಾಗಿದೆ. ಬಾಲಿವುಡ್ ನಟಿ ಅನುಷ್ಕಾ ಶರ್ಮಾ ಈ ಅಭಿಯಾನದ ಮತ್ತೋರ್ವ ರಾಯಭಾರಿಯಾಗಿದ್ದು,

www.karunaduexams.com

ಮಹಿಳೆಯರನ್ನು ಪ್ರೋತ್ಸಾಹಿ ಮತ್ತು ಅವರ ಹಳ್ಳಿಗಳಲ್ಲಿ ನಾಯಕತ್ವ ಪಾತ್ರಗಳನ್ನು ವಹಿಕೊಳ್ಳುವ ಪ್ರಚಾರದಲ್ಲಿ ಭಾಗಿಯಾಗಲಿದ್ದಾರೆ.

## <u>ಅಲ್ಪಸಂಖ್ಯಾತರ ರಾಷ್ಟ್ರೀಯ ಆಯೋಗದ ಉಪಾಧ್ಯಕ್ಷರಾಗಿ ಜಾರ್ಜ್ ಕುರಿಯನ್ ನೇಮಕ</u>



ಅಲ್ಪಸಂಖ್ಯಾತ ವ್ಯವಹಾರಗಳ ರಾಜ್ಯ ಖಾತೆ ಸಚಿವ ಮುಖ್ತಾರ್ ಅಬ್ಬಾಸ್ ನಖ್ವಿ ಅವರು ಖ್ಯಾತ ಸಾಮಾಜಿಕ ಮತ್ತು ಶೈಕ್ಷಣಿಕ ಕಾರ್ಯಕರ್ತ ಜಾರ್ಜ್ ಕುರಿಯನ್ ಅವರನ್ನು ಅಲ್ಪಸಂಖ್ಯಾತರ ರಾಷ್ಟ್ರೀಯ ಆಯೋಗದ ಉಪ ಅಧ್ಯಕ್ಷರಾಗಿ ನೇಮಕ ಮಾಡಿದ್ದಾರೆ.

ಸಾಮಾಜಿಕ ಕಾರ್ಯಕರ್ತ ಸೈಯದ್ ಘಯೋರುಲ್ ಹಸನ್ ರಿಜ್ವಿ (ಅಧ್ಯಕ್ಷರು), ಮಹಾರಾಷ್ಟ್ರ ಮಾಜಿ ಸಚಿವ ಸುಲೇಖ ಕುಂಭರೆ, ಜೈನ್ ಧರ್ಮದ ಪ್ರತಿನಿಧಿ ಸುನೀಲ್ ಸಿಂಘಿ ಮತ್ತು ವಾ ದ ಸ್ರೂರ್ಜಿ ಖುರ್ಷೆಡ್ ಕೈಕೋಬಾದ್ ದಾಸ್ತೂರ್ ಅವರು ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗದ ಇತರ ಸದಸ್ಯರಾಗಿದ್ದಾರೆ.

2014ರ ಜನವರಿಯಲ್ಲಿ ಜೈನ ಸಮುದಾಯವನ್ನು ಅಲ್ಪಸಂಖ್ಯಾತವೆಂದು ಘೋಷಿಸಿದ ನಂತರ ಮೊದಲ ಬಾರಿಗೆ ಜೈನ್ ಸದಸ್ಯರನ್ನು ಸಮಿತಿಗೆ ನೇಮಕ ಮಾಡಲಾಗಿದೆ. ಮುಸ್ಲಿಮ್, ಕ್ರಿಶ್ಚಿಯನ್, ಬೌದ್ಧ, ಸಿಖ್, ಪಾರ್ಸಿ ಮತ್ತು ಜೈನ್ ದೇಶದ ಆರು ಅಲ್ಪಸಂಖ್ಯಾತ ಸಮುದಾಯಗಳಾಗಿವೆ.

## <u>ಗೋವಾದಲ್ಲಿ ಪ್ಲಾಸ್ಟಿಕ್ ಬಳಕೆ ಮೇಲೆ ನಿಷೇಧ</u>



ಗೋವಾ ಸರ್ಕಾರ 50 ಮೈಕ್ರಾನ್ ಮತ್ತು ಅದಕ್ಕಿಂತ ಕಡಿಮೆ ಗಾತ್ರದ ಪ್ಲಾಸ್ಟಿಕ್ ಚೀಲಗಳ ಖರೀದಿ ಮತ್ತು ಮಾರಾಟದ ಮೇಲೆ ನಿಷೇಧ ಹೇರಲು ನಿರ್ಧರಿಸಿದೆ. 40 ಮೈಕ್ರಾನ್ ಗಾತ್ರದ ಪ್ಲಾಸ್ಟಿಕ್ ಚೀಲಗಳನ್ನು ಗೋವಾ ಈಗಾಗಲೇ ನಿಷೇಧಿಸಿದೆ.

- ನಿಷೇಧ ಜುಲೈನಿಂದ ಜಾರಿಗೆ ಬರಲಿದೆ. ಆರಂಭದಲ್ಲಿ, ನಿಷೇಧ ಉಲ್ಲಂಘಿಸಿದವರಿಗೆ ರೂ. 500 ಮತ್ತು ತರುವಾಯ ಶುಲ್ಕ ಮೊತ್ತವನ್ನು 5000 ರೂಪಾಯಿಗಳಿಗೆ ಹೆಚ್ಚಿಸಲಾಗುವುದು.
- ಸಾರ್ವಜನಿಕ ಸ್ಥಳಗಳಲ್ಲಿ ಕಸ ಮತ್ತು ತ್ಯಾಜ್ಯ ವಿಲೇವಾರಿಯನ್ನು ನಿವಾರಿಸುವ ಉದ್ದೇಶದೊಂದಿಗೆ ಸರ್ಕಾರ ಈ ಕ್ರಮವನ್ನು ಕೈಗೊಂಡಿದೆ. ತೆಳುವಾದ ಪ್ಲ್ಯಾಸ್ಟಿಕ್ ಚೀಲಗಳು ಗಾಳಿಯಲ್ಲಿ ಸುಲಭವಾಗಿ ಹಾರಿ ಹೋಗುವ ಮೂಲಕ ಚರಂಡಿಗಳಲ್ಲಿ ನೀರಿನ ಹರಿಯುವಿಕೆ ಅಡ್ಡಿಯಾಗಿ ಪ್ರವಾಹದ ಉಂಟುಮಾಡುತ್ತವೆ. ಇದರಿಂದಾಗಿ ಮಳೆಗಾಲದಲ್ಲಿ ಸಾರ್ವಜನಿಕ ಸ್ಥಳಗಳ ಪ್ರವಾಹ ಸ್ಥಿತಿ ನಿರ್ಮಾಣವಾಗಲಿದೆ.
- ಇದೇ ವೇಳೆ ಪ್ರವಾಸೋದ್ಯಮ ರಾಜ್ಯವೆನಿಸಿರುವ ಗೋವಾದಲ್ಲಿ ಶುಚಿತ್ವ ಹೆಚ್ಚಿಸಲು ರಾಜ್ಯ ಸರ್ಕಾರವು ಏಕಕಾಲದಲ್ಲಿ ಹೆದ್ದಾರಿಯ ಪಕ್ಕದಲ್ಲಿ ಸುರಿಸಿದ ಕಸವನ್ನು ಸಂಗ್ರಹಿಸಲಿದೆ.

## ಸಂತೋಷ ಸೂಚ್ಯಂಕ ಅಭಿವೃದ್ಧಿಗೆ ಐಐಟಿ-ಖರಗಪುರದೊಂದಿಗೆ ಮಧ್ಯಪ್ರದೇಶ ಸರ್ಕಾರ ಒಪ್ಪಂದ



ಐಐಟಿ ಖರಗ್ಪುರದ "ರೆಕಿ ಸೆಂಟರ್ ಆಫ್ ಎಕ್ಸಲೆನ್ಸ್ ಫಾರ್ ದಿ ಹ್ಯಾಪಿನೆಸ್ ಮತ್ತು ಮಧ್ಯಪ್ರದೇಶ ಸರ್ಕಾರದ 'ರಾಜ್ಯ ಆನಂದಂ ಸಂಸ್ಥಾನ' (ಸಂತೋಷ ಇಲಾಖೆ)" ರಾಜ್ಯ ನಿವಾಸಿಗಳ ಯೋಗಕ್ಷೇಮವನ್ನು ಅಳತೆ ಮಾಡಲು ಸಂತೋಷ ಸೂಚ್ಯಂಕ ಅಭಿವೃದ್ಧಿಗೆ ಸಹಿ ಹಾಕಿವೆ. . ಮಧ್ಯ ಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಮತ್ತು ಐಐಟಿ-ಕೆಜಿಪಿ ನಿರ್ದೇಶಕ ಪ್ರೊಫೆಸರ್ ಪಿ.ಪಿ.ಚಕ್ರಬಾರ್ತಿ ಅವರ ಉಪಸ್ಥಿತಿಯಲ್ಲಿ ಭೋಪಾಲ್ ನಲ್ಲಿ ಸಹಿ ಹಾಕಲಾಯಿತು.

**ಪ್ರಮುಖಾಂಶಗಳು**:

ಸಂತೋಷ ಸೂಚ್ಯಂಕವನ್ನು ಐಐಟಿ-ಕೆಜಿಪಿ ಅಭಿವೃದ್ಧಿಪಡಿಸಲಿದ್ದು, ರಾಜ್ಯ ಸರ್ಕಾರಸಂಗ್ರಹಿಸುವ ಮಾಹಿತಿಯನ್ನು ರಾಜ್ಯದ ಜನರ ಸಂತೋಷ ಮಟ್ಟವನ್ನು ನಿರ್ಣಯಿಸಲು ಮತ್ತು ರಾಜ್ಯದಲ್ಲಿ ಸಂತೋಷ ಮಟ್ಟವನ್ನು ಹೆಚ್ಚಿಸಲು ಕೈಗೊಳ್ಳಬೇಕಾದ ಅಗತ್ಯ ಕ್ರಮಗಳನ್ನು ನಿರ್ಣಯಿಸಲು ಬಳಸಲಾಗುತ್ತದೆ.

**ಹಿನ್ನಲೆ**:

2017 ರ ವಿಶ್ವಸಂಸ್ಥೆಯ ವಿಶ್ವ ಸಂತೋಷ ಸೂಚ್ಯಂಕ (WHI) ದಲ್ಲಿ ಭಾರತ 155 ದೇಶಗಳ ಪೈಕಿ 122 ನೇ ಸ್ಥಾನದಲ್ಲಿದೆ. 8 ಸಾರ್ಕ್ ರಾಷ್ಟ್ರಗಳಲ್ಲಿ ಪಾಕಿಸ್ತಾನ 80ನೇ ಸ್ಥಾನ, ನೇಪಾಳ 99, ಭೂತಾನ್ 97, ಬಾಂಗ್ಲಾದೇಶ 110, ಶ್ರೀಲಂಕಾ 120ನೇ ಸ್ಥಾನದಲ್ಲಿವೆ. ಈ ಪಟ್ಟಿಯ ಟಾಪ್ ಐದು ಸ್ಥಾನಗಳಲ್ಲಿ ನಾರ್ವೆ, ಡೆನ್ಮಾರ್ಕ್, ಐಸ್ಲ್ಯಾಂಡ್, ಸ್ವಿಟ್ಜರ್ಲ್ಯಾಂಡ್ ಮತ್ತು ಫಿನ್ಲ್ಯಾಂಡ್ ಇವೆ. ಅಸಮಾನತೆ, ಜೀವಿತಾವಧಿ, ತಲಾವಾರು ಜಿಡಿಪಿ, ಸಾರ್ವಜನಿಕ ನಂಬಿಕೆ ಮತ್ತು ಸಾಮಾಜಿಕ ಬೆಂಬಲದಂತಹ ಅಂಶಗಳನ್ನು ಆಧರಿಸಿ ಶ್ರೇಯಾಂಕವನ್ನು ನೀಡಲಾಗಿದೆ. 2012 ರಲ್ಲಿ ಮೊದಲ ಬಾರಿಗೆ ಸಂತೋಷ ಸೂಚ್ಯಂಕವನ್ನು ಪ್ರಕಟಿಸಲಾಗಿತ್ತು.

## ದೇಶದ ಮೊದಲ ನೀರಿನೊಳಗಿನ ರೈಲ್ವೆ ಸುರಂಗ ಕಾಮಗಾರಿ ಪೂರ್ಣ



ದೇಶದ ಮೊದಲ ನೀರಿನೊಳಗಿನ ರೈಲ್ವೆ ಸುರಂಗ ಕಾಮಗಾರಿ ಪೂರ್ಣಗೊಂಡಿದೆ. ಹೌರಾ ಮತ್ತು ಕೋಲ್ಕತ್ತಾವನ್ನು ಸಂಪರ್ಕಿಸುವ ಸುರಂಗ ಮಾರ್ಗವನ್ನು ಹೂಗ್ಲಿ ನದಿಯಲ್ಲಿ ಕೊರೆಯಲಾಗಿದೆ. ಈಸ್ಟ ವೆಸ್ಟ್ ಮೆಟ್ರೊ ಭಾಗವಾಗಿ ಅಫ್ಕಾನ್ಸ್ ಟ್ರಾನ್ಸ್ಟನ್ಸ್ಟ್ರಯ್ ಮತ್ತು ಕೊಲ್ಕತ್ತಾ ಮೆಟ್ರೋ ರೈಲ್ವೆ ಕಾರ್ಪೋರೇಷನ್ ಲಿಮಿಟೆಡ್ (ಕೆಎಂಸಿಆರ್ಎಲ್) ಈ ಸುರಂಗವನ್ನು ಕೊರೆದಿವೆ.

ಕೋಲ್ಕತ್ತದ ಈಸ್ಟ ವೆಸ್ಟ್ ಮೆಟ್ರೊ ಉದ್ದವು 16.6 ಕಿಮೀ. ಇದರಲ್ಲಿ ಹೂಗ್ಲಿ ನದಿಯ ಅಡಿಯಲ್ಲಿ 502ಮೀಟರ್ ಸುರಂಗ ಮಾರ್ಗವಿದೆ. ಯೋಜನೆಯು ಅಫ್ಕಾನ್ಸ್ ಟ್ರಾನ್ಸ್ಟನ್ನೆಸ್ಟ್ರೋಯ್ನಿಂದ ನಿರ್ಮಿಸಲ್ಪಟ್ಟಿದೆ. ಆಫ್ಕಾನ್ಸ್ ಟ್ರಾನ್ಸ್ಟನ್ನೆಸ್ಟ್ರೊರೊ ಇಂಡೋ-ರಷ್ಯನ್ ಜಂಟಿ ಉದ್ಯಮವಾಗಿದೆ.

www.karunaduexams.com

ಯೋಜನೆಯು ಪಶ್ಚಿಮಕ್ಕೆ ಹೌರಾ ಮತ್ತು ಪೂರ್ವಕ್ಕೆ ಸಾಲ್ಟ್ ಸರೋವರವನ್ನು ಸಂಪರ್ಕಿಸುತ್ತದೆ. ನೀರೊಳಗೆ ಸುರಂಗ ಕೊರೆಯುವುದು ಯೋಜನೆಯ ನಿರ್ಣಾಯಕ ಕಾರ್ಯವಾಗಿತ್ತು. ರಚ್ನಾ ಎಂಬ ಬೃಹತ್ ಸುರಂಗ ಕೊರೆಯುವ ಯಂತ್ರವನ್ನು ಬಳಸಿ ಸುರಂಗ ಮಾರ್ಗವನ್ನು ಕೊರೆಯಲಾಗಿದೆ.

ಈಸ್ಟ್ ವೆಸ್ಟ್ ಮೆಟ್ರೊ 16.6 ಕಿ.ಮೀ ಉದ್ದವಿದ್ದು 12 ನಿಲ್ದಾಣಗಳನ್ನು ಹೊಂದಿದೆ. ಅವುಗಳಲ್ಲಿ ಆರು ಭೂಮಿಯಡಿ ಇವೆ. 2012ಕ್ಕೆ ಯೋಜನೆ ಪೂರ್ಣಗೊಳ್ಳಬೇಕಿತ್ತು ಆದರೆ ಕಾರಣಾಂತರ ಯೋಜನೆಯನ್ನು ಹಲವು ಬಾರಿ ಮುಂದೂಡಲಾಯಿತು. ಡಿಸೆಂಬರ್ 2019ರ ವೇಳೆಗೆ ಯೋಜನೆ ಲೋಕಾರ್ಪಣೆಗೊಳ್ಳಲಿದೆ ಎಂದು ನಿರೀಕ್ಷಿಸಲಾಗಿದೆ.

**IARIಗೆ ಶಂಕುಸ್ಥಾಪನೆ ನೆರವೇರಿಸಿದ ಪ್ರಧಾನಿ ಮೋದಿ**



ಅಸ್ಸಾಂ-ಅರುಣಾಚಲ ಪ್ರದೇಶ ಗಡಿಯಲ್ಲಿರುವ ಅಸ್ಸಾಂನ ದಿಮಾಜಿ ಜಿಲ್ಲೆಯ ಗೊಗಮುಖ್ನಲ್ಲಿ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಗೆ ಶಂಕುಸ್ಥಾಪನೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ನೆರವೇರಿಸಿದರು. ಇದು ಮೂರನೇ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ (IARI). ರಾಷ್ಟ್ರೀಯ ರಾಜಧಾನಿ ನವದೆಹಲಿಯಲ್ಲಿ ಹೊರತುಪಡಿಸಿ, ಜಾರ್ಖಂಡ್ನ ರಾಂಚಿಯಲ್ಲಿ ಎರಡನೇ IARI ಸ್ಥಾಪನೆ ಕೆಲಸ ಆರಂಭವಾಗಿದೆ.

ಈಶಾನ್ಯ ಭಾರತದ ಕೃಷಿ ಕ್ಷೇತ್ರದಲ್ಲಿ ಒಟ್ಟಾರೆ ಅಭಿವೃದ್ಧಿಗಾಗಿ ಈ ಸಂಸ್ಥೆ ಸಹಾಯ ಮಾಡಲಿದೆ. ಸಂಶೋಧನಾ ಸಂಸ್ಥೆಯಲ್ಲಿ ಕೃಷಿ, ತೋಟಗಾರಿಕೆ ಬೆಳೆಗಳು, ಪಶು ಸಂಗೋಪನೆ ಮತ್ತು ರೇಷ್ಮೆ ಕೀಟ ಕೃಷಿಗೆ ಸಂಬಂಧಿಸಿದ ಸೌಲಭ್ಯಗಳನ್ನು ಹೊಂದಿರಲಿದೆ.

ಈಶಾನ್ಯ ಭಾರತದ ಸಮರ್ಪಕ ಅಭಿವೃದ್ಧಿ ಮತ್ತು ಸಂಪರ್ಕ ಸಾಧಿಸಲು ಪ್ರಧಾನ ಮಂತ್ರಿ ರವರು "ಪಂಚ ತತ್ವ"ದ ಬಗ್ಗೆ ಮಾತನಾಡಿದರು. ಈ ಐದು ತತ್ವಗಳೆಂದರೆ ಹೆದ್ದಾರಿಗಳು, ರೈಲ್ವೆ, ಜಲಮಾರ್ಗಗಳು, ವಾಯುಮಾರ್ಗ ಮತ್ತು I- ವೇ ಅಥವಾ ಆಪ್ಟಿಕಲ್ ಫೈಬರ್ ನೆಟ್ವರ್ಕ್.

**IARI**:

IARI ಕೃಷಿ ಶಿಕ್ಷಣದಲ್ಲಿ ಕೃಷಿ ಸಂಶೋಧನೆ ಮತ್ತು ಸ್ನಾತಕೋತ್ತರ ಉನ್ನತ ಅಧ್ಯಯನಗಳ ಭಾರತದ ಪ್ರಧಾನ ರಾಷ್ಟ್ರೀಯ ಸಂಸ್ಥೆಯಾಗಿದೆ. IARIನ ಆಡಳಿತ ಮತ್ತು ಹಣಕಾಸಿನ ನೆರವನ್ನು ಭಾರತೀಯ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್ (ICAR) ಭರಿಸುತ್ತದೆ. 1970ರ ದಶಕದಲ್ಲಿ ಭಾರತದಲ್ಲಿ ಹಸಿರು ಕ್ರಾಂತಿಗೆ ಕಾರಣವಾದ ಸಂಶೋಧನೆ ಮಾಡಿದ ಕೀರ್ತಿ IARIಗೆ ಸಲ್ಲುತ್ತದೆ.

1905ರಲ್ಲಿ ಬಿಹಾರದ ಪುಸಾದಲ್ಲಿ ಕೃಷಿ ಸಂಶೋಧನಾ ಸಂಸ್ಥೆಯಾಗಿ (ಎಆರ್ಐ) ಪ್ರಾರಂಭವಾಯಿತು. 1936ರಲ್ಲಿ ಸಂಸ್ಥೆಯನ್ನು ದೆಹಲಿಗೆ ಸ್ಥಳಾಂತರಿಸಲಾಯಿತು. ಪ್ರಸ್ತುತ, IARI ನಡಿ 5 ವಿಭಾಗಗಳು, 5 ಮಲ್ಟಿ ಡಿಸಿಪ್ಲೈನರಿ ಕೇಂದ್ರಗಳು, 8 ಪ್ರಾದೇಶಿಕ ಕೇಂದ್ರಗಳು, 3 ಅಖಿಲ ಭಾರತ ಸಂಘಟಿತ ಸಂಶೋಧನಾ ಯೋಜನೆಗಳು, ಮತ್ತು 10 ರಾಷ್ಟ್ರೀಯ ಕೇಂದ್ರಗಳನ್ನು ದೇಶಾದ್ಯಂತ ಹೊಂದಿದೆ.

www.karunaduexams.com

## <u>ಅಸ್ಸಾಂನ ಚಾಂಗಸಾರಿಯಲ್ಲಿ AIIMSಗೆ ಶಂಕುಸ್ಥಾಪನೆ ನೆರವೇರಿಸಿದ ಮೋದಿ</u>



ಪ್ರಧಾನಿ ನರೇಂದ್ರ ಮೋದಿ ರವರು ಅಸ್ಸಾಂನ ಕಾಮ್ರುಪ್ ಜಿಲ್ಲೆಯ ಚಾಂಗಾಸರಿಯಲ್ಲಿ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ (ಎಐಐಎಂಎಸ್) ಗೆ ಅಡಿಪಾಯ ಹಾಕಿದರು. ಗುವಾಹಾಟಿಯಿಂದ 26 ಕಿ.ಮೀ ದೂರದಲ್ಲಿ ಈ ಸಂಸ್ಥೆಯನ್ನು ನಿರ್ಮಿಸಲಾಗುತ್ತಿದೆ.

'ಪ್ರಧಾನ್ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ'ಯ ಭಾಗವಾಗಿ ಈ ಸಂಸ್ಥೆಯನ್ನು1,123 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗುವುದು. ಮುಂದಿನ ನಾಲ್ಕು ವರ್ಷಗಳಲ್ಲಿ ಈ ಸಂಸ್ಥೆಯ ಕಾಮಗಾರಿ ಪೂರ್ಣಗೊಳ್ಳಲಿದೆ. ಈ ಸಂಸ್ಥೆಯು 750 ಹಾಸಿಗೆಗಳು, 16 ಆಪರೇಷನ್ ಥಿಯೇಟರ್ಗಳು ಸೇರಿದಂತೆ 22 ಸೂಪರ್ ಸ್ಪೆಶಾಲಿಟಿ ಇಲಾಖೆಗಳನ್ನು ಹೊಂದಿರಲಿದೆ. ಪ್ರತಿ ವರ್ಷವೂ 100 ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ಮತ್ತು ಪ್ರತಿವರ್ಷ 60 ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶ ಕಲ್ಪಿಸಲಾಗುವುದು.

**ಹಿನ್ನಲೆ**:

ದೆಹಲಿಯ AIIMS ದೇಶದ ಮೂಲೆಗಳಿಂದ ರೋಗಿಗಳನ್ನು ಆಕರ್ಷಿಸುತ್ತಿದ್ದು, ಹೆಚ್ಚಿನ ಜನದಟ್ಟಣೆ ಉಂಟಾಗುತ್ತಿದೆ. ಈ ದೃಷ್ಟಿಯಿಂದ, ಜನರ ಅಗತ್ಯತೆಗಳನ್ನು ಪೂರೈಸಲು ದೇಶದ ವಿಭಿನ್ನ ಭಾಗಗಳಲ್ಲಿ ಎಐಐಎಂಎಸ್ ಸ್ಥಾಪನೆಗೆ ಸರ್ಕಾರವು ಕ್ರಮಗಳನ್ನು ಕೈಗೊಳ್ಳುತ್ತಿದೆ. ಪ್ರಸ್ತುತ ದೆಹಲಿ, ಭೋಪಾಲ್, ಭುವನೇಶ್ವರ, ಜೋಧ್ಪುರ್, ಪಾಟ್ನಾ, ರಾಯ್ಪುರ್ ಮತ್ತು ರಿಷಿಕೇಶದಲ್ಲಿ AIIMS ಕಾರ್ಯನಿರ್ವಹಿಸುತ್ತಿವೆ.

ಕಳೆದ ವರ್ಷ, ಕೇಂದ್ರ ಸಚಿವ ಸಂಪುಟ 'ಪ್ರಧಾನ್ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ'ಯಡಿ ಪಂಜಾಬಿನ ಬತಿಂದದಲ್ಲಿ AIIMS ಸ್ಥಾಪಿಸಲು ಅನುಮತಿ ನೀಡಿದೆ. ಜೊತೆಗೆ, ನಾಗ್ಪುರ (ಮಹಾರಾಷ್ಟ್ರ), ಮಂಗಳಗಿರಿ, ಗುಂಟೂರು (ಆಂಧ್ರ ಪ್ರದೇಶ) ಮತ್ತು ಕಲ್ಯಾಣಿಯಲ್ಲಿ (ಪಶ್ಚಿಮ ಬಂಗಾಳ) ರಲ್ಲಿ 3 ಹೊಸ ಏಮ್ಸ್ ಗಳ ಸ್ಥಾಪನೆಗೆ 2015ರಲ್ಲಿ ಅನುಮೋದನೆ ನೀಡಲಾಗಿದೆ.

ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ (ಪಿಎಮ್ಎಸ್ಎಸ್ವೈ) ಆಗಸ್ಟ್ 2003 ರಲ್ಲಿ ಘೋಷಿಸಲ್ಪಟ್ಟ ಕೇಂದ್ರ ಪ್ರಾಯೋಜಿತ ಯೋಜನೆಯಾಗಿದೆ. ದೇಶ ವ್ಯಾಪ್ತಿ ಪ್ರಾದೇಶಿಕ ಅಸಮತೋಲನವನ್ನು ಸರಿಪಡಿಸಿ ಕೈಗೆಟುಕುವ ಮತ್ತು ವಿಶ್ವಾಸಾರ್ಹ ತೃತೀಯ ಮಟ್ಟದ ಆರೋಗ್ಯ ಸೇವೆಯನ್ನು ನೀಡುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ. ಜೊತೆಗೆ, ಕಡಿಮೆ ಅಭಿವೃದ್ಧಿ ಹೊಂದಿರುವ ಅಥವಾ ಹಿಂದುಳಿದ ರಾಜ್ಯಗಳಲ್ಲಿ ಗುಣಮಟ್ಟದ ವೈದ್ಯಕೀಯ ಶಿಕ್ಷಣ ಸೌಲಭ್ಯಗಳನ್ನು ವೃದ್ಧಿಸುವುದು ಸಹ ಆಗಿದೆ.

www.karunaduexams.com

## “ತೇಜಸ್ ಎಕ್ಸ್ ಪ್ರೆಸ್” ರೈಲಿನ ಪ್ರಥಮ ಸಂಚಾರ ಆರಂಭ

ವಿಮಾನದಂತಹ ಸೌಲಭ್ಯಗಳನ್ನು ಹೊಂದಿರುವ ‘ತೇಜಸ್ ಎಕ್ಸ್‌ಪ್ರೆಸ್’ ರೈಲು ಮುಂಬೈನಿಂದ



ಗೋವಾಕ್ಕೆ ತನ್ನ ಮೊದಲ ಪ್ರಯಾಣ ಆರಂಭಿಸಿತು. ರೈಲ್ವೆ ಸಚಿವ ಸುರೇಶ್ ಪ್ರಭು ಅವರು ರೈಲಿಗೆ ಚಾಲನೆ ನೀಡಿದರು. 400 ಪ್ರಯಾಣಿಕರನ್ನು ಹೊತ್ತು ತೆರಳಿದ ಈ ಸೂಪರ್‌ಫಾಸ್ಟ್ ರೈಲು ಜನಶತಾಬ್ದಿ ರೈಲಿಗಿಂತಲೂ ಕಡಿಮೆ ಸಮಯದಲ್ಲಿ ಅಂದರೆ ಎಂಟೂವರೆ ಗಂಟೆಯಲ್ಲಿ ಗೋವಾ ತಲುಪಲಿದೆ.

**ರೈಲಿನ ವಿಶಿಷ್ಟ:**

- ಎಲ್‌ಇಡಿ ಪರದೆ, ಹಣ ಹಾಕಿದರೆ ಕಾಫಿ ನೀಡುವ ಯಂತ್ರ, ವೈಫೈ ಸೌಲಭ್ಯ, ಸಿ.ಸಿ.ಟಿ.ವಿ ಕ್ಯಾಮೆರಾ, ಸಹಾಯಕರನ್ನು ಕರೆಯಲು ಕರೆಗುಂಡಿ ವ್ಯವಸ್ಥೆಯನ್ನು ಬೋಗಿಗಳಿಗೆ ಅಳವಡಿಸಲಾಗಿದೆ.
- ಜರ್ಮನಿ ನಿರ್ಮಿತ 13 ಬೋಗಿಗಳನ್ನು ಹೊಂದಿದೆ. ರೈಲಿನ ಬಾಗಿಲುಗಳಿಗೆ ಕೇಂದ್ರೀಕೃತ ನಿಯಂತ್ರಣ ವ್ಯವಸ್ಥೆ, ಬೆಂಕಿ ಮತ್ತು ಹೊಗೆ ಪತ್ತೆ ವ್ಯವಸ್ಥೆ, ಬೋಗಿಯ ಕವಚ ನಿರ್ಮಾಣಕ್ಕೆ ಗೀಚಾಗದ ಸಾಮಗ್ರಿ ಬಳಕೆಯನ್ನು ಮಾಡಲಾಗಿದೆ.
- ಮುಂಬೈ–ಗೋವಾ ಮಾರ್ಗದಲ್ಲಿ ವಾರಕ್ಕೆ 5 ದಿನ ಪ್ರಯಾಣ ಹಾಗೂ ಮುಂಗಾರು ಅವಧಿಯಲ್ಲಿ ವಾರಕ್ಕೆ 3 ದಿನ ಪ್ರಯಾಣ ಮಾಡಲಿದೆ.
- ತೇಜಸ್ ರೈಲು ಮುಂದಿನ ದಿನಗಳಲ್ಲಿ ದೆಹಲಿ–ಚಂಡೀಗಢ ಮತ್ತು ಸೂರತ್–ಮುಂಬೈ ಮಾರ್ಗದಲ್ಲಿ ಓಡಲಿದೆ.

## “ಆಪರೇಷನ್ ಬ್ಲ್ಯಾಕ್ ಥಂಡರ್” ಖ್ಯಾತಿಯ ಕೆ ಪಿ ಎಸ್ ಗಿಲ್ ನಿಧನ



ಕೆ.ಪಿ.ಎಸ್ ಗಿಲ್. 1958ನೇ ಬ್ಯಾಚಿನ ಅಸ್ಸಾಂ-ಮೇಘಾಲಯ ಕೇಡರಿನ ಐಪಿಎಸ್ ಅಧಿಕಾರಿ ನಿಧನರಾದರು. ಪಂಜಾಬ್‌ನಲ್ಲಿ ತಲೆದೋರಿದ್ದ ಖಾಲಿಸ್ತಾನಿ ಉಗ್ರಗಾಮಿ ಚಟುವಟಿಕೆಯನ್ನು ಹತ್ತಿಕ್ಕುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಗಿಲ್ ಅವರು ‘ಸೂಪರ್‌ಕಾಪ್’ ಎಂದೇ ಖ್ಯಾತಿಯನ್ನು ಪಡೆದಿದ್ದರು. ಅಮೃತಸರದ “ಗೋಲ್ಡನ್ ಟೆಂಪಲ್”ನಲ್ಲಿ ಅಡಗಿರುವ ಉಗ್ರರನ್ನು ತೊಡೆದುಹಾಕಲು ಮೇ 1988ರಲ್ಲಿ ನಡೆಸಲಾದ 'ಆಪರೇಷನ್ ಬ್ಲ್ಯಾಕ್ ಥಂಡರ್'ನ ಮುಂದಾಳತ್ವವನ್ನು ಗಿಲ್ ವಹಿಸಿದ್ದರು. ಆಪರೇಷನ್ ಬ್ಲೂ ಸ್ಟಾರ್ (1984) ಗಿಂತಲೂ ಭಿನ್ನವಾಗಿ, ಗೋಲ್ಡನ್ ಟೆಂಪಲ್ಗೆ ಸ್ವಲ್ಪವೂ ಹಾನಿ ಉಂಟಾಗುತ್ತದೆ ನಡೆಸಲಾದ ಆಪರೇಷನ್ ಬ್ಲಾಕ್ ಥಂಡರ್ ಹೆಚ್ಚು ಯಶಸ್ವಿಯಾಯಿತು. ಆಪರೇಷನ್ ಬ್ಲಾಕ್ ಥಂಡರ್ ಸುಮಾರು 67 ಸಿಖ್ಖರ ಶರಣಾಗತಿ ಮತ್ತು 43 ಉಗ್ರಗಾಮಿಗಳ ಸಾವಿಗೆ ಕಾರಣವಾಯಿತು.

- 1988ರಿಂದ 1990ರ ತನಕ ಪಂಜಾಬ್ ಪೊಲೀಸ್ ಇಲಾಖೆಯ ಮಹಾನಿರ್ದೇಶಕರಾಗಿದ್ದ ಗಿಲ್ ಅವರು 1991ರಿಂದ 1995ರ ತನಕ ಜವಾಬ್ದಾರಿ ನಿರ್ವಹಿಸಿದ್ದರು. ಈ ಅವಧಿಯಲ್ಲಿ ರಾಜ್ಯದಲ್ಲಿದ್ದ ಖಾಲಿಸ್ತಾನ ಭಯೋತ್ಪಾದಕರನ್ನು ಕಿತ್ತೊಗೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

www.karunaduexams.com

- ಲೂಧಿಯಾನದಲ್ಲಿ ಜನಿಸಿದ ಗಿಲ್, 1958ರಲ್ಲಿ ಐಪಿಎಸ್ ಅಧಿಕಾರಿಯಾಗಿ ಅಸ್ಸಾಂ ಹಾಗೂ ಮೇಘಾಲಯದಲ್ಲಿ ಕೆಲಸ ಮಾಡಿದ್ದರು. 28 ವರ್ಷಗಳ ಈಶಾನ್ಯ ರಾಜ್ಯಗಳಲ್ಲಿ ವಿವಿಧ ಜವಾಬ್ದಾರಿ ನಿರ್ವಹಿಸಿ ದೇಶದ ಗಮನಸೆಳೆದಿದ್ದರು. ಸಿಖ್ ಉಗ್ರರ ಉಪಟಳ ಹೆಚ್ಚಾಗಿದ್ದರಿಂದ 1984ರಲ್ಲಿ ಪಂಜಾಬ್‌ಗೆ ಅವರನ್ನು ಕಳುಹಿಸಿ ಕೊಡಲಾಗಿತ್ತು. ಸಾರ್ವಜನಿಕ ವಲಯ ದಿಂದ 'ಪಂಜಾಬ್‌ನ ಸಿಂಹ', 'ಸೂಪರ್ ಕಾಪ್' ಎಂದು ಬಿರುದಾವಳಿಗಳನ್ನು ಪಡೆದಿದ್ದ ಗಿಲ್ ಅವರಿಗೆ 1989ರಲ್ಲಿ ಪದ್ಮಶ್ರೀ ಪ್ರಶಸ್ತಿ ಸಂದಿತ್ತು.

## <u>ಅಸ್ಸಾಂನಲ್ಲಿ ದೇಶದ ಅತಿ ದೊಡ್ಡ ಸೇತುವೆ ಉದ್ಘಾಟಿಸಿದ ಪ್ರಧಾನಿ ಮೋದಿ</u>



ಬ್ರಹ್ಮಪುತ್ರ ನದಿಯ ಉಪನದಿ ಲೋಹಿತ್ ಮೇಲೆ ನಿರ್ಮಿಸಲಾಗಿರುವ ದೇಶದ ಉದ್ದದ ಸೇತುವೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟಿಸಿದರು. ಈ ಸೇತುವೆಗೆ ಅಸ್ಸಾಂನ ಗಾಯಕ ಭೂಪೆನ್ ಹಜಾರಿಕಾ ಅವರ ಹೆಸರನ್ನು ಇಡಲಾಗಿದೆ. ಸೇತುವೆಯ ನಿರ್ಮಾಣ 2011ರಲ್ಲಿ ಪ್ರಾರಂಭವಾಯಿತು. ಯೋಜನೆಯ ವೆಚ್ಚವು ಸುಮಾರು 2056 ಕೋಟಿ ರೂಪಾಯಿಗಳಷ್ಟಿದೆ.

- ಧೋಲಾ-ಸಾಡಿಯಾ ಸೇತುವೆ ಬ್ರಹ್ಮಪುತ್ರಾ ನದಿಯ ಉಪನದಿಯಾದ ಲೋಹಿತ್ ನದಿಗೆ ಕಟ್ಟಲಾಗಿರುವ 9.15 ಕಿಲೋಮೀಟರಿನ ಮೂರು ಲೇನ್ ಸೇತುವೆಯಾಗಿದೆ. ನವಯುಗ ಎಂಜಿನಿಯರಿಂಗ್ ಕಂಪೆನಿ ಲಿಮಿಟೆಡ್ ಈ ಸೇತುವೆಯನ್ನು ನಿರ್ಮಿಸಿದೆ. ಮುಂಬೈಯ ಬಾಂದ್ರಾ-ವರ್ಲಿ ಸಮುದ್ರ ಸೇತುವೆಗಿಂತ ಧೋಲಾ-ಸಾಡಿಯಾ ಸೇತುವೆಯು 3.55 ಕಿ.ಮೀ. ಉದ್ದವಾಗಿದೆ. ಆಗಾಗಿ ಇದು ದೇಶದ ಅತಿ ಉದ್ದದ ಸೇತುವೆಯಾಗಿದೆ.
- ಈ ಸೇತುವೆಯು ಗುವಾಹಟಿ ಮತ್ತು ಧೋಲಾದಿಂದ 540 ಕಿ.ಮೀ ದೂರದಲ್ಲಿರುವ ಸಾಡಿಯಾವನ್ನು ಸಂಪರ್ಕಿಸುತ್ತದೆ, ಇದು ಇಟಾನಗರದಿಂದ 300 ಕಿ.ಮೀ ದೂರದಲ್ಲಿದೆ. 60-ಟನ್ ಯುದ್ಧ ಟ್ಯಾಂಕ್ ಗಳ ತೂಕವನ್ನು ತಡೆದುಕೊಳ್ಳುವಷ್ಟು ಸಮರ್ಥವಾಗಿರುವಷ್ಟು ಈ ಸೇತುವೆಯನ್ನು ವಿನ್ಯಾಸಗೊಳಿಸಲಾಗಿದೆ.
- ಈ ಸೇತುವೆಯಿಂದ ಚೀನಾ ಗಡಿ ಕೇವಲ 100 ಕಿ.ಮೀ ದೂರದಲ್ಲಿದೆ. ಹೀಗಾಗಿ ತುರ್ತು ಸಂದರ್ಭಗಳಲ್ಲಿ ಸೇನಾ ವಾಹನಗಳು ಮತ್ತು ಟ್ಯಾಂಕ್‌ಗಳು ತ್ವರಿತವಾಗಿ ಗಡಿ ಭಾಗಕ್ಕೆ ತೆರಳಲು ಅನುಕೂಲವಾಗಲಿದೆ.
- ಈ ಸೇತುವೆಯ ನಿರ್ಮಾಣದಿಂದಾಗಿ ಅಸ್ಸಾಂನ ಸಾದಿಯ ಮತ್ತು ಅರುಣಾಚಲ ಪ್ರದೇಶದ ಧೋಲಾ ನಡುವಣ ಪ್ರಯಾಣದ ಅವಧಿಯಲ್ಲಿ ನಾಲ್ಕು ಗಂಟೆ ಕಡಿಮೆ ಆಗಲಿದೆ. ಇದಕ್ಕೂ ಮೊದಲು, ಇಲ್ಲಿ ನದಿಯನ್ನು ಲಾಂಚ್ ಮತ್ತು ದೋಣಿಗಳ ಮೂಲಕ ದಾಟಬೇಕಿತ್ತು.

www.karunaduexams.com

# ವಿಜ್ಞಾನ-ತಂತ್ರಜ್ಞಾನ

## ರೈತರಿಗಾಗಿ ಸ್ವಯಂಚಾಲಿತ ಹವಾಮಾನ ಘಟಕಗಳನ್ನು ಸ್ಥಾಪಿಸಿದ ಮಹಾರಾಷ್ಟ್ರ



ಮಹಾರಾಷ್ಟ್ರದ ಮೊದಲ ಸ್ವಯಂಚಾಲಿತ ಹವಾಮಾನ ಘಟಕವನ್ನು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು ನಾಗ್ಪುರದ ಡೊಂಗಾರ್ಗೌನಲ್ಲಿ ಉದ್ಘಾಟಿಸಿದರು. ಇಂತಹದೇ ಮಾದರಿಯ ಸುಮಾರು 2,065 ಘಟಕಗಳನ್ನು ಸರ್ಕಾರಿ-ಖಾಸಗಿ ಪಾಲುದಾರಿಕೆಯಡಿ ಮಹಾರಾಷ್ಟ್ರ ಸರ್ಕಾರ ಈ ವರ್ಷದಲ್ಲಿ ನಿರ್ಮಿಸಲು ನಿರ್ಧರಿಸಿದೆ. ಮುಂದಿನ ವರ್ಷದಲ್ಲಿ 1000 ಘಟಕಗಳನ್ನು ಸ್ಥಾಪಿಸಲಾಗುವುದು. ಗಾಳಿಯ ವೇಗ, ದಿಕ್ಕು, ಉಷ್ಣತೆ, ಸಾಪೇಕ್ಷ ಆರ್ದ್ರತೆ ಮತ್ತು ಮಳೆ ಪ್ರಮಾಣಗಳನ್ನು ಅಳತೆ ಮಾಡಲು ಈ ಘಟಕಗಳು ಸಹಕಾರಿಯಾಗಲಿವೆ.

ಈ ಘಟಕಗಳು ಸಂಗ್ರಹಿಸುವ ಮಾಹಿತಿಯನ್ನು ಮಹಾರಾಷ್ಟ್ರ ಕೃಷಿ ಹವಾಮಾನ ಮಾಹಿತಿ ಜಾಲದಲ್ಲಿ ಅಳವಡಿಸುವ ಮೂಲಕ ರೈತರಿಗೆ ತಲುಪಿಸಲಾಗುವುದು. ಇದರ ಜೊತೆಗೆ ಮೊಬೈಲ್ ಅಪ್ಲಿಕೇಶನ್ ಸ್ಕೈಮೆಟ್ ನಲ್ಲೂ ಸಹ ಮಾಹಿತಿಯನ್ನು ರವಾನಿಸಲಾಗುವುದು.

**ಉಪಯೋಗ**:

- ಸರಿಯಾದ ಸಮಯದಲ್ಲಿ ಹವಾಮಾನದ ಬಗ್ಗೆ ರೈತರಿಗೆ ಮಾಹಿತಿ ದೊರೆಯುವುದರಿಂದ ಹವಾಮಾನಕ್ಕೆ ತಕ್ಕಂತೆ ರೈತರು ಕೃಷಿ ಚಟುವಟಿಕೆಯನ್ನು ಕೈಗೊಳ್ಳಬಹುದಾಗಿದೆ.
- ಐಎಂಡಿ ಹವಾಮಾನ ವರದಿ ಕೇವಲ ನಾಲ್ಕು ವಲಯಕ್ಕೆ ಸೀಮಿತ ಆಗಿದೆ. ಆದರೆ ಈ ಘಟಕಗಳು ತಾಲ್ಲೂಕು ಮಟ್ಟದಲ್ಲಿ ಮಾಹಿತಿಯನ್ನು ನೀಡಲಿವೆ.

## ಅಗ್ನಿ-II ಖಂಡಾಂತರ ಕ್ಷಿಪಣಿ ಯಶಸ್ವಿ ಪರೀಕ್ಷಾರ್ಥ ಉಡಾವಣೆ




ಅಗ್ನಿ-II ಖಂಡಾಂತರ ಕ್ಷಿಪಣಿಯನ್ನು ಒಡಿಶಾದ ಧಮರದ ಎ.ಪಿ.ಜೆ.ಅಬ್ದುಲ್ ಕಲಾಂ ದ್ವೀಪದಲ್ಲಿ ಯಶಸ್ವಿ ಪರೀಕ್ಷಾರ್ಥ ಉಡಾವಣೆ ನಡೆಸಲಾಯಿತು. ಈ ದ್ವೀಪಕ್ಕೆ ಹಿಂದೆ ವೀಲರ್ಸ್ ದ್ವೀಪ ಎಂದು ಹೆಸರಿತ್ತು.

- ಅಗ್ನಿ-II ಕ್ಷಿಪಣಿ ಪರಮಾಣು ಶಸ್ತ್ರಾಸ್ತ್ರವಾಗಿದ್ದುಯ, 2,000 ಕಿಲೋ ಮೀಟರ್ ವ್ಯಾಪ್ತಿ ಶ್ರೇಣಿಯನ್ನು ಹೊಂದಿದೆ.
- 20 ಮೀಟರ್ ಉದ್ದದ ಅಗ್ನಿ-2 ಕ್ಷಿಪಣಿ ಎರಡು ಹಂತದ ಘನ ಬ್ಯಾಲಿಸ್ಟಿಕ್ ಕ್ಷಿಪಣಿ ಚಾಲಿತವನ್ನು ಒಳಗೊಂಡಿದೆ. ಉಡಾವಣೆ ಸಂದರ್ಭದಲ್ಲಿ 17 ಟನ್ ತೂಕವನ್ನು ಹೊಂದಿದ್ದು 1000 ಕೆಜಿ ಭಾರವನ್ನು 2,000 ಕಿಲೋ ಮೀಟರ್ ವರೆಗೆ ಹೊತ್ತೊಯ್ಯಬಲ್ಲ ಸಾಮರ್ಥ್ಯವನ್ನು ಹೊಂದಿದೆ.
- ಅಗ್ನಿ ಸರಣಿ ಕ್ಷಿಪಣಿಗಳನ್ನು ಡಿಆರ್ ಡಿಒ ಅಭಿವೃದ್ಧಿಪಡಿಸಿದ್ದು ಪರಮಾಣು ಶಸ್ತ್ರಸಜ್ಜಿತ ನೆರೆ ರಾಷ್ಟ್ರಗಳ ವಿರುದ್ಧ ಭಾರತದ ಅತ್ಯಂತ ಅತ್ಯಾಧುನಿಕ ಶಸ್ತ್ರಾಸ್ತ್ರವಾಗಿದೆ.
- ರಸ್ತೆ ಮತ್ತು ರೈಲು ಮೊಬೈಲ್ ಉಡಾವಣ ವಾಹಕಗಳ ಮೂಲಕ ಅಗ್ನಿ-II ಕ್ಷಿಪಣಿಯನ್ನು ಉಡಾಯಿಸಬಹುದಾಗಿದೆ.

karunaduexams.com

**ಅಬ್ದುಲ್ ಕಲಾಂ ದ್ವೀಪ:**

ಅಬ್ದುಲ್ ಕಲಾಂ ದ್ವೀಪ ಪ್ರದೇಶ ಒಡಿಶಾದಲ್ಲಿದೆ. ಒಡಿಶಾದ ಭದ್ರುಕ್ ಜಿಲ್ಲೆಯಲ್ಲಿರುವ ವೀಲ್ಹರ್ ದ್ವೀಪ ಪ್ರದೇಶವನ್ನು ಅಬ್ದುಲ್ ಕಲಾಂ ದ್ವೀಪ ಪ್ರದೇಶವೆಂದು ಮರು ನಾಮಕರಣ ಮಾಡಲಾಗಿದೆ. ಮಾಜಿ ರಾಷ್ಟ್ರಪತಿ ದಿವಂಗತ ಡಾ. ಎ.ಪಿ.ಜೆ ಅಬ್ದುಲ್ ಕಲಾಂ ರವರ ಸ್ಮರಣಾರ್ಥ ಅವರ ಹೆಸರನ್ನು ಈ ದ್ವೀಪ ಪ್ರದೇಶಕ್ಕೆ ಇಡಲಾಗಿದೆ. ಮರು ನಾಮಕರಣಕ್ಕೆ ಮುಂಚೆ ಇಂಗ್ಲೀಷ್ ಕಮಾಡೆಂಟ್ ಲೆಫ್ಟಿನೆಂಟ್ ವೀಲ್ಹರ್ ಹೆಸರಿನಿಂದ ಕರೆಯಲಾಗುತ್ತಿತ್ತು

**<u>ದಕ್ಷಿಣ ಏಷ್ಯಾ ಉಪಗ್ರಹವನ್ನು ಯಶಸ್ವಿಯಾಗಿ ಉಡಾಯಿಸಿದ ಭಾರತ</u>**



ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಒಕ್ಕೂಟ (ಸಾರ್ಕ್) ರಾಷ್ಟ್ರಗಳು ಬಳಸುವ ಸಂಪರ್ಕ ಉಪಗ್ರಹ ಜಿಸ್ಯಾಟ್–9 ಅನ್ನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಯಶಸ್ವಿಯಾಗಿ ಕಕ್ಷೆಗೆ ಸೇರಿಸಿದೆ. ಉಪಗ್ರಹ ಉಡಾವಣೆ ಯಶಸ್ಸನ್ನು ಪ್ರಧಾನಿ ನರೇಂದ್ರ ಮೋದಿ ಅವರು, 'ಐತಿಹಾಸಿಕ ಕ್ಷಣ' ಎಂದು ಬಣ್ಣಿಸಿದ್ದಾರೆ. ಜತೆಗೆ, 'ಇದು ತನ್ನ ನೆರೆಯ ರಾಷ್ಟ್ರಗಳಿಗೆ ಭಾರತ ನೀಡಿದ, ಬೆಲೆಕಟ್ಟಲಾಗದಂತಹ ಉಡುಗೊರೆ. ದಕ್ಷಿಣ ಏಷ್ಯಾದ ಆರ್ಥಿಕ ಪ್ರಗತಿಗೆ ಇದು ನೆರವಾಗಲಿದೆ' ಎಂದು ಬಣ್ಣಿಸಿದ್ದಾರೆ. 2014ರಲ್ಲಿ ನೇಪಾಳದಲ್ಲಿ ನಡೆದ ಸಾರ್ಕ್ ಶೃಂಗಸಭೆಯಲ್ಲಿ ಈ ಉಪಗ್ರಹದ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಅದರಂತೆ ಪಾಕಿಸ್ತಾನ ಹೊರತುಪಡಿಸಿ ಉಳಿದ ಸಾರ್ಕ್ ರಾಷ್ಟ್ರಗಳು ಯೋಜನೆಗೆ ಬೆಂಬಲ ಸೂಚಿಸಿದ್ದವು. ಆಗಾಗಿ ಪಾಕಿಸ್ತಾನವನ್ನು ಹೊರತುಪಡಿಸಿ ಉಳಿದ ಸಾರ್ಕ್ ರಾಷ್ಟ್ರಗಳಾದ ನೇಪಾಳ, ಭೂತಾನ್, ಬಾಂಗ್ಲದೇಶ, ಅಪ್ಘಾನಿಸ್ತಾನ, ಶ್ರೀಲಂಕಾ ಮತ್ತು ಮಾಲ್ಡೀವ್ಸ್ ಈ ಉಪಗ್ರಹದ ಉಪಯೋಗ ಪಡೆಯಲಿವೆ.  ಉಪಗ್ರಹ ಉಡಾವಣೆಗೆ ರೂ 235 ಕೋಟಿ ತಗುಲಿದ್ದು, ಭಾರತ ಸರ್ಕಾರ ಭರಿಸಿದೆ.

**ಪ್ರಮುಖಾಂಶಗಳು**:

- 2230 ಕೆ. ಜಿ ತೂಕವಿರುವ ಉಪಗ್ರಹವನ್ನು ಜಿಸ್ಯಾಟ್–9 ಎಂದು ಹೆಸರಿಡಲಾಗಿದೆ. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಈ ಉಪಗ್ರಹವನ್ನು ಅಭಿವೃದ್ಧಿಪಡಿಸಿದೆ.
- ಜಿಸ್ಯಾಟ್-9 ಉಪಗ್ರಹ 12 ಕು-ಬ್ಯಾಂಡ್ ಟ್ರಾನ್ಸಪಾಂಡರ್ ಗಳನ್ನು ಹೊಂದಿದೆ.
- GSLV Mk-II ಉಡಾವಣ ರಾಕೆಟ್ ಬಳಸಿ ಸತೀಶ್ ಧವನ್ ಬಾಹ್ಯಕಾಶ ಕೇಂದ್ರದ ಉಪ್ರಹವನ್ನು ಕಕ್ಷೆಗೆ ಸೇರಿಸಲಾಯಿತು.
- 12 ವರ್ಷ ಉಪಗ್ರಹದ ಕಾರ್ಯಾವಧಿ.

**ಮಹತ್ವ**:

ದೂರಸಂಪರ್ಕ ಮತ್ತು ಪ್ರಸರಣ ಕ್ಷೇತ್ರದಲ್ಲಿ ಮಹತ್ವದ ಪಾತ್ರವನ್ನು ಈ ಉಪಗ್ರಹ ವಹಿಸಲಿದೆ. ಡಿಟಿಎಚ್, ಉಪಗ್ರಹ ಆಧರಿತ ಶಿಕ್ಷಣ, ಉಪಗ್ರಹ ಆಧರಿತ ವೈದ್ಯಕೀಯ ಸೇವೆ ಮತ್ತು ವಿಪತ್ತು ನಿರ್ವಹಣೆ ಸೇವೆಗಳನ್ನು ಫಲಾನುಭವಿ ರಾಷ್ಟ್ರಗಳಿಗೆ ಒದಗಿಸಲಿದೆ.

www.karunaduexams.com

## ಪುಣೆಯಲ್ಲಿ ಭಾರತದ ಮೊದಲ ಜೈವಿಕ ಶುದ್ಧೀಕರಣ ಘಟಕ



ದೇಶದ ಮೊದಲ ಸಮಗ್ರ ಜೈವಿಕ ಶುದ್ಧೀಕರಣ ಘಟಕವನ್ನು ಕೇಂದ್ರ ರಸ್ತೆ ಸಾರಿಗೆ, ಹೆದ್ದಾರಿ ಮತ್ತು ಶಿಪ್ಪಿಂಗ್ ಖಾತೆ ಸಚಿವ ನಿತಿನ್ ಗಡ್ಕರಿರವರು ಉದ್ಘಾಟಿಸಿದರು. ಈ ಘಟಕದಲ್ಲಿ ನವೀಕರಿಸಬಹುದಾದ ಇಂಧನ ಮತ್ತು ರಾಸಾಯನಿಕಗಳನ್ನು ಶುದ್ಧೀಕರಿಸಿ ವಿವಿಧ ಬಗೆಯ ಜೈವಿಕ ತ್ಯಾಜ್ಯಗಳಿಂದ ಎಥೆನಾಲ್ ಉತ್ಪಾದಿಸಬಹುದಾಗಿದೆ. ಮಹಾರಾಷ್ಟ್ರದ ಪುಣೆ ಜಿಲ್ಲೆಯ ರಾಹು ಎಂಬಲ್ಲಿ ಈ ಘಟಕವನ್ನು ಸ್ಥಾಪಿಸಲಾಗಿದೆ. ಪ್ರಜ್ ಇಂಡಸ್ಟ್ರೀಸ್ ಈ ಪ್ರಾಯೋಗಿಕ ಘಟಕವನ್ನು ಅಭಿವೃದ್ಧಿಪಡಿಸಿದೆ.

- ಒಂದು ಮಿಲಿಯನ್ ಲೀಟರ್ ಎಥನಾಲ್ ಉತ್ಪಾದಿಸುವ ಸಾಮರ್ಥ್ಯವನ್ನು ಈ ಘಟಕ ಹೊಂದಿದೆ.
- ಭತ್ತ ಮತ್ತು ಗೋಧಿಯ ಹುಲ್ಲು, ಹತ್ತಿಯ ಕಾಂಢ, ಕಬ್ಬಿನ ತ್ಯಾಜ್ಯ ಮುಂತಾದ ಜೈವಿಕ ತ್ಯಾಜ್ಯಗಳನ್ನು ಬಳಸಿ ಎಥೆನಾಲ್ ತಯಾರಿಸಬಹುದು.

**ಎಥೆನಾಲ್:**

ಎಥೆನಾಲ್ ಕಡಿಮೆ ವೆಚ್ಚದ ಹಾಗೂ ಮಾಲಿನ್ಯ ಮುಕ್ತ ಇಂಧನವಾಗಿದೆ. ಎಥೆನಾಲ್ ಅನ್ನು ಪೆಟ್ರೋಲ್ ನೊಂದಿಗೆ ಮಿಶ್ರಣ ಮಾಡಿ ಅನೇಕ ರಾಷ್ಟ್ರಗಳಲ್ಲಿ ಬಳಸಲಾಗುತ್ತಿದೆ. ಪರಿಸರ ಮಾಲಿನ್ಯ ತಡೆಯುವ ಸಲುವಾಗಿ ಭಾರತ ಸೇರಿದಂತೆ ಅನೇಕ ರಾಷ್ಟ್ರಗಳಲ್ಲಿ ಎಥೆನಾಲ್ ಮಿಶ್ರಿತ ಇಂಧನ ಬಳಕೆ ಒತ್ತುನೀಡಲಾಗುತ್ತಿದೆ.

## ಗಾರ್ಡ್ ರಹಿತ ರೈಲು ಸಂಚಾರಕ್ಕೆ EoTT ಸಾಧನ ಅಳವಡಿಸಲಿರುವ ರೈಲ್ವೆ ಇಲಾಖೆ



ಪ್ರಸಕ್ತ ಆರ್ಥಿಕ ವರ್ಷದಲ್ಲಿ ಗಾರ್ಡ್ ಇಲ್ಲದೆ ಸುಮಾರು 1,000 ರೈಲುಗಳನ್ನು ಓಡಿಸಲು ಭಾರತೀಯ ರೈಲುಮಾರ್ಗವು ರೈಲು ದೂರಸಂವಹನ (EoTT) ಸಾಧನಗಳನ್ನು ಅಳವಡಿಸಿಕೊಳ್ಳಲು ಯೋಜಿಸಿದೆ. ಸಿಬ್ಬಂದಿ ಕೆಲಸವನ್ನು ನಿರ್ವಹಿಸುವ ರೀತಿಯಲ್ಲಿ EoTT (End of Train Telemetry) ವ್ಯವಸ್ಥೆಯನ್ನು ವಿನ್ಯಾಸಗೊಳಿಸಲಾಗಿದೆ. EoTT ವ್ಯವಸ್ಥೆಯು ಎರಡು ಘಟಕಗಳನ್ನು ಒಳಗೊಂಡಿದೆ, ಅವುಗಳೆಂದರೆ 'ಕ್ಯಾಬ್ ಡಿಸ್ಪ್ಲೇ ಯುನಿಟ್' (CDU), ಇದನ್ನು ಲೋಕೋಮೋಟಿವ್ ನಲ್ಲಿ ಮತ್ತು 'ಸೆನ್ಸ್ ಮತ್ತು ಬ್ರೇಕ್ ಯೂನಿಟ್' (SBU) ಅನ್ನು ರೈಲಿನ ಕೊನೆಯ ಬೋಗಿಯಲ್ಲಿ ಅಳವಡಿಸಲಾಗಿರುತ್ತದೆ. ಈ ಎರಡು ಘಟಕಗಳ ನಡುವೆ ಘಟಕಗಳನ್ನು ಪರಸ್ಪರ ಸಂವಹನ ಸಾಧಿಸಲು ರೇಡಿಯೋ ಟ್ರಾನ್ಸ್ಮಿಟರ್ ಅಳವಡಿಸಲಾಗಿರುತ್ತದೆ. ಟ್ರಾನ್ಸ್ಮಿಟರ್ ಕೊನೆಯ ಬೋಗಿಗೆ ನಿರಂತರವಾಗಿ ಸಿಗ್ನಲ್ ರವಾನಿಸುವ ಮೂಲಕ ರೈಲು ಬೋಗಿಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿವೆಯೆ ಎಂದು ಖಚಿತಪಡಿಸುತ್ತದೆ. ಭಾರತೀಯ ರೈಲ್ವೆ ಆರಂಭದಲ್ಲಿ 1,000 EoTT ಉಪಕರಣಗಳನ್ನು ಅಳವಡಿಸಲಿದ್ದು, ನಂತರ ಎಲ್ಲಾ ರೈಲುಗಳಲ್ಲಿ ಅಳವಡಿಸಲಾಗುವುದು.. EoTT ಸಾಧನದ ಪ್ರತಿಯೊಂದು ಸೆಟ್ ಸುಮಾರು 10 ಲಕ್ಷ ರೂ ಇರಲಿದೆ.

www.karunaduexams.com

**ಅನುಕೂಲ**:

ಲೊಕೊಮೊಟಿವ್ ಡ್ರೈವರ್ ಮತ್ತು ರೈಲಿನ ಕೊನೆಯ ಬೋಗಿಯ ನಡುವೆ ಸಂವಹನವನ್ನು ಸ್ಥಾಪಿಸಲು EoTT ವ್ಯವಸ್ಥೆಯು ಸಹಾಯ ಮಾಡಲಿದೆ. ಆ ಮೂಲಕ ರೈಲು ಸಂಪೂರ್ಣ ಘಟಕವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಖಚಿತಪಡಿಸುತ್ತದೆ. ರೈಲಿನ ಹಿಂಭಾಗದ ಭಾಗದಿಂದ ಬೋಗಿಗಳನ್ನು ಪ್ರತ್ಯೇಕಿಸುವ ಸಂದರ್ಭದಲ್ಲಿ, ಚಾಲಕನಿಗೆ ನೀಡಲಿದೆ. ಇದರಿಂದ ಚಾಲಕನು ಹಿಂಭಾಗದ ಘಟಕಕ್ಕೆ ಬ್ರೇಕ್ ಹಾಕುವ ಮೂಲಕ ಇದರಿಂದಾಗಿ ರೈಲಿನ ಮುಂಭಾಗದ ಭಾಗ ಮತ್ತು ಹಿಂಭಾಗ ನಡುವೆ ಡಿಕ್ಕಿಯನ್ನು ತಪ್ಪಿಸಬಹುದು.

## ಮೇ 11: ರಾಷ್ಟ್ರೀಯ ತಂತ್ರಜ್ಞಾನ ದಿನ




ಭಾರತದ ತಾಂತ್ರಿಕ ಅಭಿವೃದ್ಧಿಯನ್ನು ಗುರುತಿಸಲು ಪ್ರತಿ ವರ್ಷ ಮೇ 11 ರಂದು ರಾಷ್ಟ್ರೀಯ ತಂತ್ರಜ್ಞಾನ ದಿನವನ್ನು ಆಚರಿಸಲಾಗುತ್ತಿದೆ. 2017ರ ರಾಷ್ಟ್ರೀಯ ತಂತ್ರಜ್ಞಾನ ದಿನ ಧ್ಯೇಯ ವಾಕ್ಯ: 'ತಂತ್ರಜ್ಞಾನಕ್ಕಾಗಿ ಅಂತರ್ಗತ ಮತ್ತು ಸಮರ್ಥನೀಯ ಬೆಳವಣಿಗೆ'.

**ವಿಶೇಷತೆ**:

ಆಪರೇಷನ್ ಶಕ್ತಿ (ಪೊಖ್ರಾನ್-2) ಪರಮಾಣು ಪರೀಕ್ಷೆಯ ಐದು ಪರೀಕ್ಷೆಗಳಲ್ಲಿ ಮೊದಲನೆಯ ಪರೀಕ್ಷೆಯನ್ನು ರಾಜಸ್ಥಾನದ ಪೊಖ್ರಾನ್ನಲ್ಲಿ 11 ಮೇ 1998 ರಂದು ನಡೆಸಲಾಯಿತು. ಇದರ ಸ್ಮರಣಾರ್ಥ ಮೇ 11ರಂದು ರಾಷ್ಟ್ರೀಯ ತಂತ್ರಜ್ಞಾನ ದಿನವೆಂದು ಆಚರಿಸಲಾಗುತ್ತಿದೆ. ಈ ಕಾರ್ಯಾಚರಣೆಯ ಮುಖ್ಯಸ್ಥಿಕೆಯನ್ನು ಮಾಜಿ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಂ ವಹಿಸಿದ್ದರು. ಪೊಖ್ರಾನ್-II ಕಾರ್ಯಾಚರಣೆಯ ಶಕ್ತಿ ಉಪಕ್ರಮದ ಭಾಗವಾಗಿ ಎರಡು ಪರೀಕ್ಷೆಗಳನ್ನು ನಡೆಸಿದ ನಂತರ, ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಭಾರತವನ್ನು ಪರಮಾಣು ರಾಷ್ಟ್ರವೆಂದು ಘೋಷಿಸಿದರು.

ಇದೇ ದಿನ ದೇಶದ ಮೊದಲ ಸ್ವದೇಶಿ ವಿಮಾನ ಹಾನ್ಸಾ -3ರ ಪರೀಕ್ಷೆಯನ್ನು ಬೆಂಗಳೂರಿನಲ್ಲಿ ನಡೆಸಲಾಯಿತು. ಜೊತೆಗೆ ಅದೇ ದಿನದಂದು ಭಾರತ ತ್ರಿಶೂಲ್ ಕ್ಷಿಪಣಿಯ ಯಶಸ್ವಿ ಪರೀಕ್ಷೆ ಸಹ ನಡೆಸಲಾಯಿತು. ತ್ರಿಶೂಲ್ ಕ್ಷಿಪಣಿಯನ್ನು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್ಡಿಒ)ದ ಇಂಟಿಗ್ರೇಟೆಡ್ ಗೈಡೆಡ್ ಮಿಸ್ಸಿಲ್ ಡೆವಲಪ್ಮೆಂಟ್ ಪ್ರೋಗ್ರಾಮ್ನ ಭಾಗವಾಗಿ ಅಭಿವೃದ್ಧಿಪಡಿಸಲಾಗಿದೆ. ತ್ರಿಶೂಲ್ ಕ್ಷಿಪಣಿಯನ್ನು ಭಾರತೀಯ ಸೇನೆ ಮತ್ತು ಭಾರತೀಯ ವಾಯುಪಡೆಗೆ ಸೇರ್ಪಡೆಗೊಳಿಸಲಾಗಿದೆ. ಈ ಎಲ್ಲಾ ತಾಂತ್ರಿಕ ಸಾಧನೆಗಳನ್ನು ಪರಿಗಣಿಸಿ, 11ನೇ ಮೇ ರಂದು ರಾಷ್ಟ್ರೀಯ ತಂತ್ರಜ್ಞಾನ ದಿನವೆಂದು ಸ್ಮರಿಸಲಾಗುತ್ತದೆ. ಈ ದಿನವನ್ನು ಸ್ಮರಿಸಲು, ತಂತ್ರಜ್ಞಾನ ಅಭಿವೃದ್ಧಿ ಮಂಡಳಿ (ಟಿಡಿಬಿ)

www.karunaduexams.com

ರಾಷ್ಟ್ರೀಯ ಪ್ರಶಸ್ತಿಯನ್ನು ಸ್ಥಾಪಿಸಿದೆ. ಸ್ಥಳೀಯ ತಂತ್ರಜ್ಞಾನದ ವಾಣಿಜ್ಯೀಕರಣದಲ್ಲಿ ತಮ್ಮ ಯಶಸ್ವಿ ಸಾಧನೆಗಾಗಿ ರಾಷ್ಟ್ರಪತಿ ರವರು ವಿವಿಧ ವ್ಯಕ್ತಿಗಳು ಮತ್ತು ಕೈಗಾರಿಕೆಗಳಿಗೆ ಈ ಪ್ರಶಸ್ತಿಯನ್ನು ಪ್ರದಾನ ಮಾಡುತ್ತಾರೆ.

**<u>ಏರ್-ಟು-ಏರ್ ಬಿಯಾಂಡ್ ವಿಷುಯಲ್ ರೇಂಜ್ ಕ್ಷಿಪಣಿಯನ್ನು ಯಶಸ್ವಿಯಾಗಿ ಉಡಾಯಿಸಿದ ತೇಜಸ್</u>**



ತೇಜಸ್, ಲಘು ಯುದ್ಧ ವಿಮಾನ ಯಶಸ್ವಿಯಾಗಿ ಡಾರ್ಬಿ ಏರ್-ಟು-ಏರ್ ಬಿಯಾಂಡ್ ವಿಷುಯಲ್ ರೇಂಜ್ (Air-to-Air Beyond Visual Range Missiles) ಕ್ಷಿಪಣಿಗಳನ್ನು ರಾಡಾರ್ ಮಾರ್ಗದರ್ಶಿ ವಿಧಾನದಲ್ಲಿ ಯಶಸ್ವಿಯಾಗಿ ಉಡಾಯಿಸಿದೆ. ಈ ಪರೀಕ್ಷೆಯನ್ನು ಚಂಡಿಪುರದ ಇಂಟರಿಂ ಟೆಸ್ಟ್ ರೇಂಜ್ (ಐಟಿಆರ್) ನಲ್ಲಿರುವ ಮನಯೋವರೇಬಲ್ ಏರಿಯಲ್ ಟಾರ್ಗೆಟ್‌ನಲ್ಲಿ ನಡೆಸಲಾಯಿತು. ಏರ್ ಕ್ರಾಫ್ಟ್ ಏವಿಯನಿಕ್ಸ್, ಫೈರ್ ಕಂಟ್ರೋಲ್ ರಾಡಾರ್, ಲಾಂಚರ್ಸ್ ಮತ್ತು ಮಿಸೈಲ್ ವೆಪನ್ ಡೆಲಿವರಿ ಸಿಸ್ಟಮ್ ಅನ್ನು ತೇಜಸ್ ಯುದ್ಧ ವಿಮಾನದಲ್ಲಿ ನಿರ್ಣಯಿಸುವುದು ಮತ್ತು ಅದರ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡುವುದು ಪರೀಕ್ಷೆಯ ಹಿಂದಿನ ಉದ್ದೇಶ.

ಪರೀಕ್ಷಾರ್ಥ ಪ್ರಯೋಗದಲ್ಲಿ ಯೋಜಿತ ಗುರಿಗಳನ್ನು ಸಾಧಿಸುವ ಮೂಲಕ ಕ್ಷಿಪಣಿ ಗುರಿಯನ್ನು ನೇರವಾಗಿ ನಾಶಗೊಳಿಸಿದೆ.

**ತೇಜಸ್**:

ತೇಜಸ್ ಲಘು ಯುದ್ಧ ವಿಮಾನವು ಪ್ರಪಂಚದ ಅತಿ ಚಿಕ್ಕ, ಹಗುರವಾದ ತೂಕ, ಬಹು-ಕಾರ್ಯಾಚರಣೆ ಯುದ್ಧ ವಿಮಾನವಾಗಿದೆ. ಇದು ಭಾರತೀಯ ನೌಕಾಪಡೆ ಮತ್ತು ವಾಯುಪಡೆಗೆ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ಅಭಿವೃದ್ಧಿಪಡಿಸಿದ ಏಕೈಕ ಆಸನ ಮತ್ತು ಸಿಂಗಲ್ ಜೆಟ್ ಎಂಜಿನ್ ಹೊಂದಿರುವ ಯುದ್ಧ ವಿಮಾನ. ಲಘು ಯುದ್ಧ ವಿಮಾನವನ್ನು ಅಲ್ಯುಮಿನಿಯಮ್-ಲಿಥಿಯಂ ಮಿಶ್ರಲೋಹಗಳು, ಕಾರ್ಬನ್-ಫೈಬರ್ ಸಂಯೋಜನೆಗಳು, ಮತ್ತು ಟೈಟಾನಿಯಂನಿಂದ ನಿರ್ಮಿಸಲಾಗುತ್ತದೆ. ಲಘು ಯುದ್ಧ ವಿಮಾನಗಳು ಆಧುನಿಕ ವಿನ್ಯಾಸ ಪರಿಕಲ್ಪನೆಗಳು ಮತ್ತು ಅತ್ಯಾಧುನಿಕ ತಂತ್ರಜ್ಞಾನಗಳಾದ ಫ್ಲೈಬೈ-ವೈರ್, ಫ್ಲೈಟ್ ಕಂಟ್ರೋಲ್ ಸಿಸ್ಟಮ್, ಅಡ್ವಾನ್ಸ್ಡ್ ಡಿಜಿಟಲ್ ಕಾಕ್ಪಿಟ್, ಮಲ್ಟಿ-ಮೋಡ್ ರಾಡಾರ್, ಇಂಟಿಗ್ರೇಟೆಡ್ ಡಿಜಿಟಲ್ ಏವಿಯೋನಿಕ್ಸ್ ಸಿಸ್ಟಮ್, ಅಡ್ವಾನ್ಸ್ಡ್ ಕಾಂಪೊಸಿಟ್ ಮೆಟೀರಿಯಲ್ ಸ್ಟ್ರಕ್ಚರ್ಸ್ ಮತ್ತು ಫ್ಲ್ಯಾಟ್ ರೇಟೆಡ್ ಇಂಜಿನ್ ಮುಂತಾದ ತಂತ್ರಜ್ಞಾನಗಳನ್ನು ಒಳಗೊಂಡಿದೆ.

www.karunaduexams.com

## ಸೈನ್ಸ್ ಎಕ್ಸ್ ಪ್ರೆಸ್: ಒಂದು ವರದಿ

"ಸೈನ್ಸ್ ಎಕ್ಸ್ ಪ್ರೆಸ್" ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ವಿಜ್ಞಾನ ಪ್ರದರ್ಶನಕ್ಕೆ ಮೀಸಲಿಡಲಾದ 16 ಬೋಗಿಗಳನ್ನು ಒಳಗೊಂಡ ಎಸಿ ರೈಲು. ವಿಜ್ಞಾನ ಮತ್ತು ತಂತ್ರಜ್ಞಾನದ ಕ್ಷೇತ್ರದಲ್ಲಿ ಯುವಜನರ ಆಸಕ್ತಿಯನ್ನು ಹೆಚ್ಚಿಸುವುದು ಎಕ್ಸ್‌ಪ್ರೆಸ್‌ನ ಗುರಿಯಾಗಿದೆ. ಈ ರೈಲಿಗೆ ಚಾಲನೆ ನೀಡಿದಾಗಿಂದಲೂ ಇದರ ಕಾರ್ಯಾಚರಣೆಯನ್ನು ವಿಕ್ರಮ್ ಎ ಸಾರಾಭಾಯ್ ಸಮುದಾಯ ವಿಜ್ಞಾನ ಕೇಂದ್ರ (VASCSC) ನಿರ್ವಹಿಸುತ್ತದೆ. ಸೈನ್ಸ್ ಎಕ್ಸಪ್ರೆಸ್ ಗೆ ಅಕ್ಟೋಬರ್ 30, 2007 ರಂದು ದೆಹಲಿ ಸಫ್ದರ್ಜಂಗ್ ರೈಲ್ವೆ ನಿಲ್ದಾಣದಲ್ಲಿ ಚಾಲನೆ ನೀಡಲಾಯಿತು. ಈ ರೈಲು ಇದುವರೆಗೂ 8 ಹಂತಗಳಲ್ಲಿ 1,41,800 ಕಿಮೀ ಪ್ರಯಾಣಿಸಿ, 455 ಹಾಲ್ಟ್ಸ್ ಮತ್ತು 1602 ಪ್ರದರ್ಶನ ದಿನಗಳನ್ನು ಪೂರ್ಣಗೊಳಿಸಿದೆ. ಹೀಗಾಗಿ ಅತಿ ದೊಡ್ಡ, ದೀರ್ಘಕಾಲ ಸಂಚರಿಸಿದ ಹಾಗೂ ಹೆಚ್ಚು ವಿಜ್ಞಾನ ಪ್ರದರ್ಶನ ಮೊಬೈಲ್ ರೈಲು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದು, ಆರು ಭಾರಿ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಸೇರ್ಪಡೆಗೊಂಡಿದೆ. ಆರಂಭದಿಂದಲೂ ಸುಮಾರು 1.61 ಕೋಟಿ ಜನರು ಸೈನ್ಸ್ ಎಕ್ಸ್‌ಪ್ರೆಸ್ಗೆ ಭೇಟಿ ನೀಡಿದ್ದಾರೆ.

ಸೈನ್ಸ್ ಎಕ್ಸಪ್ರೆಸ್ ಪೂರ್ಣಗೊಳಿಸಿರುವ 8 ಹಂತಗಳಲ್ಲಿ 4 ಹಂತಗಳು 'ಸೈನ್ಸ್ ಎಕ್ಸ್‌ಪ್ರೆಸ್' ಸೇರಿವೆ, ಇದರಲ್ಲಿ ವಿಶ್ವದಾದ್ಯಂತ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಕೈಗೊಳ್ಳಲಾದ ಸಂಶೋಧನೆಗಳ ಬಗ್ಗೆ ಪ್ರದರ್ಶಿಸಲಾಗಿದೆ. 3 ಹಂತಗಳಲ್ಲಿ ಭಾರತದಲ್ಲಿನ ಶ್ರೀಮಂತ ಜೀವವೈವಿಧ್ಯತೆಯನ್ನು ಪ್ರದರ್ಶಿಸಿವು 'ಜೀವವೈವಿಧ್ಯ ವಿಶೇಷ' (SEBS) ಹಾಗೂ ಹವಾಮಾನ ಬದಲಾವಣೆಯ ಜಾಗತಿಕ ಸವಾಲನ್ನು ಪ್ರದರ್ಶಿಸುವ 'ಕ್ಲೈಮೇಟ್ ಆಕ್ಷನ್ ಸ್ಪೆಶಲ್' (ಎಸ್ಇಸಿಎಎಸ್) ಒಂದು ಹಂತವನ್ನು ಒಳಗೊಂಡಿದೆ.

**SECAS-II:**

ಸೈನ್ಸ್ ಎಕ್ಸಪ್ರೆಸ್ 9ನೇ ಹಂತದಲ್ಲಿ ಸೈನ್ಸ್ ಎಕ್ಸ್‌ಪ್ರೆಸ್ ಕ್ಲೈಮೇಟ್ ಆಕ್ಷನ್ ಸ್ಪೆಶಲ್ (ಎಸ್ಇಸಿಎಎಸ್ 2) -II ಚಾಲನೆ ನೀಡಲಾಗಿದೆ. ಈ ರೈಲು ಸೆಪ್ಟೆಂಬರ್‌ವರೆಗೆ ದೇಶಾದ್ಯಂತ 68 ನಿಲ್ದಾಣ ಕೇಂದ್ರಗಳಲ್ಲಿ ಚಲಿಸಲಿದೆ. ಒಟ್ಟಾರೆ 19,000 ಕಿಮೀ ದೂರವನ್ನು ಕ್ರಮಿಸಲಿದೆ. ಈ ವರ್ಷದ ಫೆಬ್ರುವರಿ 17 ರಂದು ಸೈನ್ಸ್ ಎಕ್ಸ್‌ಪ್ರೆಸ್ನ ಪ್ರಸ್ತುತ ಒಂಭತ್ತನೇ ಹಂತಕ್ಕೆ ಚಾಲನೆ ನೀಡಲಾಯಿತು. ಸೈನ್ಸ್ ಎಕ್ಸ್‌ಪ್ರೆಸ್ ಕ್ಲೈಮೇಟ್ ಆಕ್ಷನ್ ಸ್ಪೆಶಲ್ ಪರಿಸರ ಸಚಿವಾಲಯ, ಅರಣ್ಯ ಮತ್ತು ಹವಾಮಾನ ಬದಲಾವಣೆ, ಬಯೋಟೆಕ್ನಾಲಜಿ ಇಲಾಖೆ (ಡಿಬಿಟಿ), ರೈಲ್ವೆ ಸಚಿವಾಲಯ, ಭಾರತದ ವನ್ಯಜೀವಿ ಸಂಸ್ಥೆ (ವೈಐ) ಮತ್ತು ವಿಕ್ರಮ್ ಎ ಸಾರಾಭಾಯ್ ಸಮುದಾಯ ವಿಜ್ಞಾನ ಕೇಂದ್ರ (ವಿಎಎಸ್ಸಿಎಸ್ಸಿ) ಗಳ ಸಹಭಾಗಿತ್ವದಲ್ಲಿ ಕಾರ್ಯಾಚರಣೆ ಮಾಡಲಿದೆ.

www.karunaduexams.com

## ನೆಪ್ಚೂನ್ ಗಾತ್ರದ ದೂರದ ಗ್ರಹದಲ್ಲಿ ನೀರಿನ ಕುರುಹು ಪತ್ತೆ



ವಿಜ್ಞಾನಿಗಳು HAT-P-26b ಎಂಬ ದೂರದ ನೆಪ್ಚೂನ್-ಗಾತ್ರದ ಗ್ರಹದ ವಾತಾವರಣದಲ್ಲಿ "ಬಲವಾದ ನೀರಿನ ಕುರುಹು"ವನ್ನು ಪತ್ತೆ ಮಾಡಿದ್ದಾರೆ. NASAದ ಹಬಲ್ ಮತ್ತು ಸ್ಪಿಟ್ಜರ್ ಬಾಹ್ಯಾಕಾಶ ದೂರದರ್ಶಕಗಳನ್ನು ಬಳಸಿ ನಡೆಸಿದ ಅಧ್ಯಯನದ ಪ್ರಕಾರ, HAT-P-26bಯು ಬಹುತೇಕ ಹೈಡ್ರೋಜನ್ ಮತ್ತು ಹೀಲಿಯಂಗಳನ್ನು ಒಳಗೊಂಡಿರುವ ವಾತಾವರಣವನ್ನು ಹೊಂದಿದೆ ಎಂದು ಹೇಳಲಾಗಿದೆ. ಗ್ರಹದ ವಾತಾವರಣವು ಮೋಡಗಳಿಂದ ಮುಕ್ತವಾಗಿದ್ದು, ಬಲವಾದ ನೀರಿನ ಕುರುಹು ಹೊಂದಿದೆ.

ಗ್ರಹದ ನಕ್ಷತ್ರದ ಮುಂದೆ ಹಾದುಹೋಗುವಾಗ ನಾಲ್ಕು ಟ್ರಾನ್ಸಿಸ್ಟರ್ ಗಳಿಂದ ಪಡೆದ ಮಾಹಿತಿಯನ್ನು ಸಂಗ್ರಹಿಸುವುದರ ಮೂಲಕ ನೀರಿನ ಉಪಸ್ಥಿತಿಯನ್ನು ಸಂಶೋಧಕರು ಪತ್ತೆ ಮಾಡಿದ್ದಾರೆ. ಈ ಅಧ್ಯಯನವನ್ನು ಸೈನ್ಸ್ ಜರ್ನಲ್ನಲ್ಲಿ ಪ್ರಕಟಿಸಲಾಗಿದೆ.

**ಸಂಶೋಧನೆಯ ಮಹತ್ವ:**

ನೆಪ್ಚೂನ್ನ ಗಾತ್ರ ಮತ್ತು ಅದರ ನಕ್ಷತ್ರಕ್ಕೆ ಸಮೀಪವಿರುವ ಗ್ರಹದಲ್ಲಿ ನಡೆಸಲಾಗಿರುವ ಅತ್ಯಂತ ವಿವರವಾದ ಅಧ್ಯಯನ ಇದಾಗಿದೆ. ಈ ಗಾತ್ರದ ಗ್ರಹಗಳಲ್ಲಿ ಇದುವರೆಗೂ ಕಂಡುಬಂದಿರುವ ನೀರಿನ ಪ್ರಮಾಣಕ್ಕೆ ಹೋಲಿಸಿದರೆ ಈ ಗ್ರಹದಲ್ಲಿ ಅತ್ಯಂತ ಹೆಚ್ಚಿದೆ. HAT-P-26b ಸುಮಾರು 437 ಬೆಳಕಿನ ವರ್ಷಗಳ ದೂರದಲ್ಲಿದೆ. ಗ್ರಹಗಳ ವ್ಯವಸ್ಥೆಗಳ ಹುಟ್ಟು ಮತ್ತು ಅಭಿವೃದ್ಧಿಯ ಬಗ್ಗೆ ಹೆಚ್ಚು ತಿಳಿದುಕೊಳ್ಳುವಲ್ಲಿ ಅಧ್ಯಯನದ ಮಹತ್ವದಾಗಿದೆ.

## ನ್ಯೂಮೋನಿಯಾಗೆ ಹೊಸ ನ್ಯುಮೋಕೊಕಲ್ ಕಂಜುಗೇಟ್ ಲಸಿಕೆಗೆ ಚಾಲನೆ



ಹಿಮಾಚಲ ಪ್ರದೇಶದ ಮಂಡಿ ಜಿಲ್ಲೆಯ ಲಾಲ್ ಬಹದ್ದೂರ್ ಶಾಸ್ತ್ರಿ ಮೆಡಿಕಲ್ ಕಾಲೇಜ್ ಆಸ್ಪತ್ರೆಯಲ್ಲಿ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜೆ.ಪಿ.ನಡ್ಡಾ ಅವರು ನ್ಯೂಮೋನಿಯಾ ಕಾಯಿಲೆಗೆ ಹೊಸ ನ್ಯುಮೋಕೊಕಲ್ ಕಂಜುಗೇಟ್ ಲಸಿಕೆ (Pneumococcal Conjugate Vaccine), ಪಿಸಿವಿ ಗೆ ಚಾಲನೆ ನೀಡಿದರು. ಈ ಲಸಿಕೆ ಸರ್ಕಾರದ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ ದ ಒಂದು ಭಾಗವಾಗಿ. ಇನ್ನು ಮುಂದೆ ಲಸಿಕೆಯನ್ನು ದಿನನಿತ್ಯದ ರೋಗನಿರೋಧಕ ಕಾರ್ಯಕ್ರಮದಡಿಯಲ್ಲಿ ಬಳಸಲಾಗುವುದು. ಈ ಲಸಿಕೆ ನ್ಯುಮೋನಿಯಾವನ್ನು ನಿಯಂತ್ರಿಸುವಲ್ಲಿ ಮತ್ತು ಮಗುವಿನ ಮರಣ ಪ್ರಮಾಣವನ್ನು ಕಡಿಮೆ ಮಾಡಲು ಸಹಾಯ ಮಾಡಲಿದೆ. ಭಾರತದಲ್ಲಿ ಪ್ರತಿ ವರ್ಷವೂ 1 ಲಕ್ಷಕ್ಕಿಂತ ಹೆಚ್ಚು ಮಕ್ಕಳು ನ್ಯುಮೋನಿಯಾದಿಂದ ಸಾವನ್ನಪ್ಪುತ್ತಿದ್ದಾರೆ.

ನ್ಯೂಮೋನಿಯವನ್ನು ಉಂಟು ಮಾಡುವ 13 ವಿಧದ ನ್ಯೂಮೋಕೊಕಲ್ ಬ್ಯಾಕ್ಟೀರಿಯಾಗಳ ವಿರುದ್ಧ ಈ ಲಸಿಕೆ ರಕ್ಷಣೆ ನೀಡಲಿದೆ. ಆರೋಗ್ಯ ಸಚಿವಾಲಯವು ಲಸಿಕೆಯನ್ನು ಪ್ರಾರಂಭಿಸಿದ ಹನ್ನೆರಡನೆಯ ಕಾಯಿಲೆಯಾಗಿದೆ. ನ್ಯುಮೊಕಾಕಲ್ ಕಾಂಜುಗೇಟ್ ಲಸಿಕೆ

www.karunaduexams.com

ಸ್ಟ್ರೆಪ್ಟೋಕೊಕಸ್ ನ್ಯುಮೋನಿಯಾ ಮತ್ತು ನ್ಯುಮೋನಿಯ, ಕಿವಿ ಸೋಂಕುಗಳು, ಸೈನಸ್ ಸೋಂಕುಗಳು ಮತ್ತು ಮೆನಿಂಜೈಟಿಸ್ನಂತಹ ರೋಗಗಳ ವಿರುದ್ಧ ರಕ್ಷಿಸುತ್ತದೆ. 2000 ದಲ್ಲಿ PCV ಅನ್ನು ಮೊದಲು ಪರಿಚಯಿಸಲಾಯಿತು.

**ನ್ಯೂಮೋನಿಯಾ**:

ಶ್ವಾಸಕೋಶದ ವಾಯುನಾಳಗಳ ಉರಿಯೂತದಿಂದಾಗಿ ನ್ಯುಮೋನಿಯಾ ಉಂಟಾಗುತ್ತದೆ. ಇದು ಸಾಮಾನ್ಯವಾಗಿ ಸೋಂಕಿನಿಂದ ಉಂಟಾಗುತ್ತದೆ. ನ್ಯೂಮೋನಿಯಾ ಪ್ರಪಂಚದಾದ್ಯಂತ ಐದು ವರ್ಷಕ್ಕಿಂತ ಕೆಳಗಿನ ವಯಸ್ಸಿನ ಮಕ್ಕಳಲ್ಲಿ ಸಾವಿಗೆ ಪ್ರಮುಖ ಕಾರಣವಾಗಿದೆ. ಇದು ಬ್ಯಾಕ್ಟೀರಿಯಾ, ವೈರಸ್ಗಳು ಅಥವಾ ಶಿಲೀಂಧ್ರಗಳಿಂದ ಉಂಟಾಗಬಹುದು. ನ್ಯುಮೋನಿಯಾವನ್ನು ಉಂಟುಮಾಡುವ ಅತ್ಯಂತ ಸಾಮಾನ್ಯವಾದ ಬ್ಯಾಕ್ಟೀರಿಯ ಪ್ರಕಾರವೆಂದರೆ ಸ್ಟ್ರೆಪ್ಟೋಕಾಕಸ್ ನ್ಯುಮೋನಿಯಾ. ಜ್ವರ, ಶೀತ, ಕೆಮ್ಮು, ಉಸಿರಾಟದ ತೊಂದರೆ, ಮತ್ತು ಆಯಾಸ ರೋಗದ ಲಕ್ಷಣಗಳು.

**ಫೇಸ್ ಬುಕ್ ಮತ್ತು ಮೊಬಿಕ್ ವಿಕ್ ಜೊತೆ ಬಿಎಸ್ಎನ್ಎಲ್ ಒಪ್ಪಂದ**

ತನ್ನ ಗ್ರಾಹಕರಿಗೆ ಅಂತರ್ಜಾಲ ಹಾಗೂ ಮೌಲ್ಯವರ್ಧಿತ ಸೇವೆಗಳನ್ನು ಜನಪ್ರಿಯಗೊಳಿಸುವುದಕ್ಕಾಗಿ ಬಿಎಸ್ಎನ್ಎಲ್ ಫೇಸ್ಬುಕ್ ಮತ್ತು ಮೊಬಿಕ್ವಿಕ್ ಜೊತೆ ಒಪ್ಪಂದಗಳಿಗೆ ಸಹಿ ಹಾಕಿದೆ. ಇದಲ್ಲದೆ, ಬಿಎಸ್ಎನ್ಎಲ್ ತನ್ನ ಮೊಬೈಲ್ ಗ್ರಾಹಕರಿಗೆ ಪ್ರೀಮಿಯಂ ಆನ್ಲೈನ್ ಗೇಮಿಂಗ್ ಸೇವೆಗಳನ್ನು ನೀಡಲು ಡಿಸ್ನಿ ಲ್ಯಾಂಡ್ ಇಂಡಿಯಾ ಜೊತೆಗೂ ಸಹಿ ಹಾಕಿದೆ. ಏರ್ಟೆಲ್ ಮತ್ತು ರಿಲಯನ್ಸ್ ಜಿಯೊ ಖಾಸಗಿ ಟೆಲಿಕಾಂ ಕಂಪೆನಿಗಳಿಂದ ತೀವ್ರ ಸ್ಪರ್ಧೆ ಎದುರಾಗಿರುವುದರಿಂದ ಬಿಎಸ್ಎನ್ಎಲ್ ಹೊಸ ಬಗೆಯ ಸೇವೆಗಳನ್ನು ಗ್ರಾಹಕರಿಗೆ ನೀಡುವ ಹಿನ್ನಲೆಯಲ್ಲಿ ಒಪ್ಪಂದಗಳಿಗೆ ಸಹಿ ಹಾಕಿದೆ.

**ಫೇಸ್ಬುಕ್ ನೊಂದಿಗೆ ಒಪ್ಪಂದ:**

ಈ ಒಪ್ಪಂದದ ಪ್ರಕಾರ, ಬಿಎಸ್ಎನ್ಎಲ್ ಫೇಸ್ಬುಕ್ನ `ಎಕ್ಸ್ಪ್ರೆಸ್ ವೈ-ಫೈ ಪ್ರೋಗ್ರಾಂ 'ಗೆ ಸಂಪರ್ಕ ಕಲ್ಪಿಸಲಿದೆ. "ಫೇಸ್ಬುಕ್ ಎಕ್ಸ್ಪ್ರೆಸ್ ವೈ-ಫೈ" ಸೇವೆ ಕಾರ್ಯಕ್ರಮವನ್ನು ವಾಣಿಜ್ಯ ಉದ್ದೇಶದಿಂದ ಭಾರತದಲ್ಲಿ ಪ್ರಾರಂಭಿಸಲಾಗಿದೆ ಮತ್ತು ಈ ಸೇವೆ ಈಗ ಉತ್ತರಾಖಂಡ್, ಗುಜರಾತ್, ರಾಜಸ್ಥಾನ ಮತ್ತು ಮೇಘಾಲಯ ನಾಲ್ಕು ರಾಜ್ಯಗಳಲ್ಲಿನ 700 ನಗರಗಳಲ್ಲಿ ಈಗ ಲಭ್ಯವಿದೆ. "ಎಕ್ಸ್ಪ್ರೆಸ್ ವೈ-ಫೈ" ಇಂಟರ್ನೆಟ್ ಸಂಪರ್ಕವನ್ನು ವಿಸ್ತರಿಸಲು ಫೇಸ್ಬುಕ್ನ ಜಾಗತಿಕ ಉಪಕ್ರಮದ ಒಂದು ಭಾಗವಾಗಿದೆ.

**ಮೊಬಿವಿಕ್ ಜೊತೆ ಒಪ್ಪಂದ**:

ಈ ಒಪ್ಪಂದದಡಿ ಬಿಎಸ್ಎನ್ಎಲ್ ಮೊಬೈಲ್ ವ್ಯಾಲೆಟ್ ಅನ್ನು ಮೊಬಿವಿಕ್ ವಿನ್ಯಾಸಗೊಳಿಸಲಿದೆ. ವ್ಯಾಲೆಟ್ ಮೂಲಕ ಬಿಎಸ್ಎನ್ಎಲ್ ಗ್ರಾಹಕರಿಗೆ ಬಿಎಸ್ಎನ್ಎಲ್ ಪ್ರಾಡಕ್ಟ್ ಮತ್ತು ಸೇವೆಗಳನ್ನು ಲಭ್ಯವಾಗಲಿದೆ. ಮೊಬಿಕ್ವಿಕ್, ಬಿಎಸ್ಎನ್ಎಲ್ ಮತ್ತು ಮೊಬಿಕ್ವಿಕ್ ಕಂಪನಿಯು ತನ್ನ ಉತ್ಪನ್ನಗಳಿಗೆ ಮತ್ತು ಸೇವೆಗಳಿಗೆ ಪಾವತಿಸಲು ಅನುಕೂಲವಾಗುವಂತೆ ಬಿಎಸ್ಎನ್ಎಲ್ ಮೊಬೈಲ್ ವಾಲೆಟ್ನ್ನು ರಚಿಸಲು ಒಟ್ಟಾಗಿ ಕೆಲಸ ಮಾಡುತ್ತದೆ. ಬಿಎಸ್ಎನ್ಎಲ್ ಗ್ರಾಹಕರಿಗೆ ಈ ವ್ಯಾಲೆಟ್ ಅನ್ನು

www.karunaduexams.com

ಪ್ರತ್ಯೇಕವಾಗಿ ಲಭ್ಯವಾಗುವಂತೆ ಮಾಡಲಾಗುವುದು. ಇದಲ್ಲದೆ, ಮೋಬಿಕ್ವಿಕ್ ತನ್ನ ಅಪ್ಲಿಕೇಶನ್ ಮತ್ತು ವೆಬ್ಸೈಟ್ ಮೂಲಕ ಬಿಎಸ್ಎನ್ಎಲ್ ಸಿಮ್ ಕಾರ್ಡ್ಗಳ ಡಿಜಿಟಲ್ ಮಾರಾಟವನ್ನು ಸಹ ಮಾಡಲಿದೆ.

**ಭಾರತದ ವಿಜ್ಞಾನಿ ಶ್ರೀನಿವಾಸ್ ಕುಲಕರ್ಣಿ ರವರಿಗೆ ಡಾನ್ ಡೇವಿಡ್ ಪ್ರಶಸ್ತಿ**

ಭಾರತದ ವಿಜ್ಞಾನಿ ಶ್ರೀನಿವಾಸ ಕುಲಕರ್ಣಿ ರವರಿಗೆ ಪ್ರತಿಷ್ಠಿತ ಡಾನ್ ಡೇವಿಡ್ ಪ್ರಶಸ್ತಿ ಲಭಿಸಿದೆ.



ಖಗೋಳ ವಿಜ್ಞಾನ ಕ್ಷೇತ್ರಕ್ಕೆ ಸಲ್ಲಿಸಿದ ಕೊಡುಗೆಗಾಗಿ ಅವರಿಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ. ಅಮೆರಿಕದ ಪಸಾಡೆನಾದ ಕ್ಯಾಲಿಫೋರ್ನಿಯಾ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿಯ ಖಗೋಳಭೌತಶಾಸ್ತ್ರ ಮತ್ತು ಗ್ರಹ ವಿಜ್ಞಾನ ವಿಭಾಗದಲ್ಲಿ ಕುಲಕರ್ಣಿ ಪ್ರೊಫೆಸರ್ ಆಗಿದ್ದಾರೆ.ಈ ಪ್ರಶಸ್ತಿಯು ಒಂದು ದಶಲಕ್ಷ ಡಾಲರ್ (6 ಕೋಟಿ 70 ಲಕ್ಷ ರೂ.ಗಳು) ಬಹುಮಾನ ಒಳಗೊಂಡಿದೆ. ಮೇ 21ರಂದು ಈ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಖಗೋಳ ವಿಜ್ಞಾನದ ವಿದ್ಯುತ್-ಆಯಸ್ಕಾಂತ ಪರಿಣಾಮಗಳ ಅಧ್ಯಯನದಲ್ಲಿ ವಿಶೇಷ ಪರಿಣತಿ ಹೊಂದಿರುವ ಇವರು ಪರಿವರ್ತಿನೀಯ ಮತ್ತು ಅಸ್ಥಿರ ವಿದ್ಯಮಾನಗಳ ಅನ್ವೇಷಣೆಗಾಗಿ ರಾತ್ರಿ ಆಗಸದ ಬೃಹತ್ ಸಮೀಕ್ಷೆಯ ಪಲ್ಮೋರ್ ಟ್ರಾನ್ಸಿಯೆಂಟ್ ಫ್ಯಾಕ್ಟರಿಯನ್ನು ನಿರ್ಮಿಸಿ ಆಳವಾದ ಅಧ್ಯಯನ ನಡೆಸಿದ್ದಾರೆ. ಆಗಸದಲ್ಲಿ ಕಂಡುಬರುವ ನಕ್ಷತ್ರ ಸ್ಫೋಟ ಸೇರಿದಂತೆ ಕುತೂಹಲಕಾರಿ ಸೌರ ವಿದ್ಯಮಾನಗಳ ಬಗ್ಗೆ ಬೆಳಕು ಚೆಲ್ಲುವ ಅನೇಕ ಅಧ್ಯಯನಗಳನ್ನು ನಡೆಸಿದ್ದಾರೆ.

**ಡಾನ್ ಡೇವಿಡ್ ಪ್ರಶಸ್ತಿ:**

ಡಾನ್ ಡೇವಿಡ್ ಫೌಂಡೇಶನ್ ಅನ್ನು 2000ರಲ್ಲಿ ಅಂತಾರಾಷ್ಟ್ರೀಯ ಉದ್ಯಮಿ ಮತ್ತು ಲೋಕೋಪಕಾರಿ ದಿವಂಗತ ಡಾನ್ ಡೇವಿಡ್ ಸ್ಥಾಪಿಸಿದರು. ವಿಜ್ಞಾನ, ಮಾನವೀಯತೆ ಅಥವಾ ನಾಗರಿಕ ಕ್ಷೇತ್ರಗಳಿಗೆ ಆದರ್ಶಪ್ರಾಯವಾದ ಕೊಡುಗೆಗಳನ್ನು ನೀಡಿದ ಜನರಿಗೆ "Past," "Present" ಮತ್ತು "Future" ವರ್ಗಗಳಲ್ಲಿ ಪ್ರತಿ ವರ್ಷ $ 1 ದಶಲಕ್ಷ ಮೊತ್ತದ ಮೂರು ಡಾನ್ ಡೇವಿಡ್ ಪ್ರಶಸ್ತಿಗಳು ನೀಡಲಾಗುತ್ತದೆ.

- Past ವಿಭಾಗ: ಇತಿಹಾಸ, ಪುರಾತತ್ತ್ವ ಶಾಸ್ತ್ರ, ಜೀವನಚರಿತ್ರೆ, ಇತ್ಯಾದಿ ಕ್ಷೇತ್ರದಿಂದ ಪ್ರಶಸ್ತಿಗೆ ಆಯ್ಕೆಮಾಡಲಾಗುತ್ತದೆ.
- Present ವಿಭಾಗ: ಕಲೆ, ಮಾಧ್ಯಮ, ಪಾಲಿಸಿ, ಅರ್ಥಶಾಸ್ತ್ರ, ಇತ್ಯಾದಿ ಕ್ಷೇತ್ರಗಳಿಂದ ಆಯ್ಕೆ ಮಾಡಲಾಗುತ್ತದೆ.
- Future ವಿಭಾಗ: ನೈಸರ್ಗಿಕ ವಿಜ್ಞಾನದಿಂದ ಆಯ್ಕೆ ಮಾಡಲಾಗುತ್ತದೆ.
- ಪ್ರಶಸ್ತಿ ಪುರಸ್ಕೃತರು ತಮ್ಮ ಕ್ಷೇತ್ರಗಳಲ್ಲಿ ಪದವೀಧರ ಅಥವಾ ಸ್ನಾತಕೋತ್ತರ ಸಂಶೋಧಕರಿಗೆ ವಿದ್ಯಾರ್ಥಿವೇತನವನ್ನು ಒದಗಿಸಲು ತಮ್ಮ ಬಹುಮಾನದ ಹಣದಲ್ಲಿ ಶೇ 10% ಹಣವನ್ನು ಕಡ್ಡಾಯವಾಗಿ ದಾನ ಮಾಡಬೇಕು.

www.karunaduexams.com

- ಭಾರತೀಯರಾದ ಲೇಖಕ ಅಮಿತವ್ ಘೋಷ್, ಸಂಗೀತ ಸಂಯೋಜಕ ಜುಬಿನ್ ಮೆಹ್ತಾ ಹಾಗೂ ಖ್ಯಾತ ರಾಸಾಯನಿಕ ತಜ್ಞ ಸಿ.ಎನ್.ರಾವ್ ಅವರೂ ಈ ಹಿಂದೆ ಡಾನ್ ಡೇವಿಡ್ ಪ್ರಶಸ್ತಿ ಗಳಿಸಿದ್ದಾರೆ.

**ಐಐಟಿ-ದೆಹಲಿ ವಿಜ್ಞಾನಿಗಳಿಂದ ಅಗ್ಗ ದರದ ಉಸಿರಾಟದ ಫಿಲ್ಟರ್ ಅಭಿವೃದ್ಧಿ**



ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ-ದೆಹಲಿಯ ವಿಜ್ಞಾನಿಗಳು 'ನಾಸೊಫಿಲ್ಟರ್' ಸಾಧನವನ್ನು ಅಭಿವೃದ್ಧಿಪಡಿಸಿದ್ದಾರೆ. ಇದು 95%ನಷ್ಟು ಧೂಳು ಮತ್ತು ವಾಯು ಮಾಲಿನ್ಯಕಾರಕಗಳನ್ನು ನಿರ್ಬಂಧಿಸುವ ಸಾಮರ್ಥ್ಯವನ್ನು ಹೊಂದಿದೆ. ಇದರ ವಿನ್ಯಾಸದ ವೆಚ್ಚ ರೂ10 ಆಗಿದ್ದು, ಅಗ್ಗದ ನಾಸೊಫಿಲ್ಟರ್ ಆಗಿದೆ. ನ್ಯಾನೊ-ರೆಸ್ಪಿರೇಟರಿ ಫಿಲ್ಟರ್ ಈಗ ಮಾರಾಟಕ್ಕೆ ಸಿದ್ದವಾಗಿದೆ. ಇದರ ಸಂಶೋಧನೆ ತಂಡಕ್ಕೆ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರು "ನ್ಯಾಷನಲ್ ಸ್ಟಾರ್ಟ್ ಆಫ್ ಪ್ರಶಸ್ತಿ" ನೀಡಿ ಗೌರವಿಸಿದ್ದಾರೆ.

**ವಿಶೇಷತೆ**:

ನಾಸೋ-ಫಿಲ್ಟರ್ ಅನ್ನು ಅಸಾಮಾನ್ಯ ಫಿಲ್ಟರ್ ತಂತ್ರಜ್ಞಾನವನ್ನು ಬಳಸಿ ವಿನ್ಯಾಸಗೊಳಿಸಲಾಗಿದ್ದು, ಆ ಮೂಲಕ ಸೂಕ್ಷ ಮಾಲಿನ್ಯಕಾರಕ ಕಣಗಳು ಅದರಲ್ಲೂ ವಿಶೇಷವಾಗಿ PM2.5 ಸಾಂದ್ರತೆಯ ವಿರುದ್ಧ ರಕ್ಷಣೆ ನೀಡುತ್ತದೆ. ಇದು ಕನಿಷ್ಟ ಎಂಟು ಗಂಟೆಗಳ ಕಾಲ ರಕ್ಷಣೆ ನೀಡುಲಿದ್ದು, ಉಸಿರಾಟದ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಈ ಸಾಧನವು ಲಕ್ಷಾಂತರ ಸಣ್ಣ ಗಾತ್ರದ ರಂಧ್ರಗಳ ಜೋಡಣೆಯನ್ನು ಹೊಂದಿದ್ದು, ಸಣ್ಣ ಕಣಗಳನ್ನು ಸೆರೆಹಿಡಿಯುವ ಸಾಮರ್ಥ್ಯವನ್ನು ಹೊಂದಿರುವ ತೆಳುವಾದ ಪೊರೆಯನ್ನು ವಿನ್ಯಾಸಗೊಳಿಸಲಾಗಿದೆ.

**ಹಿನ್ನಲೆ**:

ಹೆಲ್ತ್ ಎಫೆಕ್ಟ್ಸ್ ಇನ್ಸ್ಟಿಟ್ಯೂಟ್ ಬಿಡುಗಡೆ ಮಾಡಿರುವ ಜಾಗತಿಕ ವಾಯುಮಾಲಿನ್ಯದ ಹೊಸ ಅಧ್ಯಯನದ ಪ್ರಕಾರ, ಭಾರತದಲ್ಲಿ ವಾಯು ಮಾಲಿನ್ಯದ ಪ್ರಮಾಣ ವಿಶ್ವದಲ್ಲೇ ಅತ್ಯಂತ ಹೆಚ್ಚು ಪ್ರಾಣಾಂತಿಕವಾಗಿದ್ದು, ಚೀನಾವನ್ನು ಮೀರಿಸಿದೆ. ವಾಯು ಮಾಲಿನ್ಯದಿಂದಾಗಿ ಸುಮಾರು 1.1 ದಶಲಕ್ಷ ಜನರು ಭಾರತದಲ್ಲಿ ಪ್ರತಿವರ್ಷವೂ ಅಕಾಲಿಕವಾಗಿ ಮರಣ ಹೊಂದುತ್ತಿದ್ದಾರೆ.

ಸೂಕ್ಷ ಕಣಗಳು (Particulate Matters) ಮಾನವನ ಕೂದಲಿನ ಗಾತ್ರಕ್ಕಿಂತ ಅತ್ಯಂತ ಕಡಿಮೆ ಕಡಿಮೆ ಗಾತ್ರದ ಸೂಕ್ಷ್ಮ ಕಣಗಳಾಗಿವೆ. ವಾಹನಗಳು, ವಿಶೇಷವಾಗಿ ಡೀಸೆಲ್ ಇಂಜಿನ್ನಳು, ಕೈಗಾರಿಕೆಗಳು, ಮತ್ತು ನೈಸರ್ಗಿಕ ಮೂಲಗಳಿಂದ ಈ ಕಣಗಳು ಪರಿಸರಕ್ಕೆ ಬಿಡುಗಡೆಯಾಗುತ್ತವೆ. ಸೂಕ್ಷ ಕಣಗಳು ಶ್ವಾಸಕೋಶದ ಮೂಲಕ ರಕ್ತಸಂಚಲನೆ ವ್ಯವಸ್ಥೆಗೆ ಪ್ರವೇಶಿಸಿ ಸ್ಟ್ರೋಕ್, ಹೃದಯ ವೈಫಲ್ಯ ಮತ್ತು ಹೃದಯ ರೋಗಗಳ ಅಪಾಯವನ್ನು ಹೆಚ್ಚಿಸುತ್ತವೆ. ಇದಲ್ಲದೆ ನ್ಯುಮೋನಿಯಾ ಮತ್ತು ಆಸ್ತಮಾದಂತಹ ಉಸಿರಾಟದ ತೊಂದರೆಗಳನ್ನು ಉಂಟುಮಾಡುತ್ತವೆ

## ಎಂ.ಎಸ್.ಸ್ವಾಮಿನಾಥನ್ ಅವರ ಪುಸ್ತಕ ಸರಣಿ ಬಿಡುಗಡೆಗೊಳಿಸಿದ ಪ್ರಧಾನಿ ಮೋದಿ




ಪ್ರಖ್ಯಾತ ಕೃಷಿ ವಿಜ್ಞಾನಿ ಡಾ.ಎಂ.ಎಸ್ ಬರೆದಿರುವ ಎರಡು ಪುಸ್ತಕಗಳ ಸರಣಿಯನ್ನು ಪ್ರಧಾನಿ ನರೇಂದ್ರ ಮೋದಿ ಬಿಡುಗಡೆ ಮಾಡಿದರು. M.S. Swaminathan: The Quest for a world without hunger ಸರಣಿ ಪುಸ್ತಕದ ಶೀರ್ಷಿಕೆ.

**ಎಂ.ಎಸ್.ಸ್ವಾಮಿನಾಥನ್:**

ಡಾ. ಎಮ್ ಎಸ್. ಸ್ವಾಮಿನಾಥನ್ ಅವರು ಭಾರತದ ಹಸಿರು ಕ್ರಾಂತಿಯ ಪಿತಾಮಹ ಎನಿಸಿದ್ದಾರೆ. ಭಾರತದಲ್ಲಿ ಹೆಚ್ಚಿನ ಇಳುವರಿಯ ವಿವಿಧ ತಳಿಯ ಗೋಧಿಗಳನ್ನು ಪರಿಚಯಿಸುವ ಮೂಲಕ ಅಪಾರ ಕೊಡುಗೆಯನ್ನು ನೀಡಿದ್ದಾರೆ. ಚೆನ್ನೈನ ಎಂ.ಎಸ್. ಸ್ವಾಮಿನಾಥನ್ ರಿಸರ್ಚ್ ಫೌಂಡೇಶನ್, ಸಂಸ್ಥಾಪಕ ಮತ್ತು ಅಧ್ಯಕ್ಷರು ಸಹ ಆಗಿದ್ದಾರೆ. ಭಾರತೀಯ ಸರ್ಕಾರವು ಸ್ವಾಮಿನಾಥನ್ ಅವರಿಗೆ ಪದ್ಮಶ್ರೀ ಮತ್ತು ಪದ್ಮಭೂಷಣದಂತಹ ಪ್ರತಿಷ್ಠಿತ ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ. ಅಲ್ಲದೇ ವಿಶ್ವದಾದ್ಯಂತ ಹಲವಾರು ಪ್ರಶಸ್ತಿಗಳು ಮತ್ತು ಪದಕಗಳನ್ನು ಅವರು ಸ್ವೀಕರಿಸಿದ್ದಾರೆ ಅವರಿಗೆ ಲಭಿಸಿವೆ. ಸಮುದಾಯ ನಾಯಕತ್ವಕ್ಕಾಗಿ ಮ್ಯಾಗ್ಸೆಸೆ ಪ್ರಶಸ್ತಿ, ಫ್ರಾನ್ಸ್ನ ಆರ್ಡ್ರೆ ಡು ಮೆರಿಟೆ ಅಗ್ರಿಕಲ್ ಮತ್ತು ಫಿಲಿಪೈನ್ಸ್ನ ಗೋಲ್ಡನ್ ಹಾರ್ಟ್ ಅಧ್ಯಕ್ಷೀಯ ಪ್ರಶಸ್ತಿಯನ್ನು ಪಡೆದಿದ್ದಾರೆ. ಇವಲ್ಲದೇ, ಚಾರ್ಲ್ಸ್ ಡಾರ್ವಿನ್ ಇಂಟರ್ನ್ಯಾಷನಲ್ ಸೈನ್ಸ್ ಅಂಡ್ ಎನ್ವಿರಾನ್ಮೆಂಟ್ ಮೆಡಲ್, ವೋಲ್ವೋ ಎನ್ವಿರಾನ್ಮೆಂಟ್ ಪ್ರೈಜ್, ಯುನೆಸ್ಕೋ ಗಾಂಧಿ ಚಿನ್ನದ ಪದಕ, ಫ್ರಾಂಕ್ಲಿನ್ ಡೆಲಾನೊ ರೂಸ್ವೆಲ್ಟ್ ಫೋರ್ ಫ್ರೀಡಮ್ಸ್ ಮೆಡಲ್ ಮತ್ತು ಇಂದಿರಾ ಗಾಂಧಿ ಶಾಂತಿ, ನಿಶಸ್ತ್ರೀಕರಣ ಮತ್ತು ಅಭಿವೃದ್ಧಿ ಪ್ರಶಸ್ತಿ ಹಾಗೂ 1987 ರಲ್ಲಿ, ಅವರು ವಿಶ್ವ ಆಹಾರ ಪ್ರಶಸ್ತಿಯನ್ನು ಪಡೆದಿದ್ದಾರೆ. ವಿಶ್ವ ಆಹಾರ ಪ್ರಶಸ್ತಿಯನ್ನು ಕೃಷಿ ಕ್ಷೇತ್ರದ ನೊಬೆಲ್ ಎಂದೇ ಪರಿಗಣಿಸಲಾಗಿದೆ.

ಎಂ.ಎಸ್. ಸ್ವಾಮಿನಾಥನ್ ಅವರು ಬರೆದಿರುವ ಇತರೆ ಪುಸ್ತಕಗಳು: An Evergreen Revolution (2006), I Predict: A Century of Hope Towards an Era of Harmony with Nature and Freedom from Hunger (1999), Gender Dimensions in Biodiversity Management (1998), Implementing the Benefit Sharing Provisions of the Convention on Biological Diversity: Challenges and opportunities (1997), Agrobiodiversity and Farmers' Rights (1996), Sustainable Agriculture: Towards Food Security Farmers' Rights and Plant Genetic Resources: A dialogue (1995), Wheat Revolution: a Dialogue (1993).

www.karunaduexams.com

## ನಾಸಾ ಕಂಡುಹಿಡಿದ ಹೊಸ ಜೀವಿಗೆ ಅಬ್ದುಲ್ ಕಲಾಂ ಹೆಸರು



ನಾಸಾ ವಿಜ್ಞಾನಿಗಳು ತಾವು ಕಂಡು ಹಿಡಿರುವ ಹೊಸ ಜೀವಿಗೆ ಮಿಸೈಲ್ ಮ್ಯಾನ್ ಖ್ಯಾತಿಯ ಭಾರತದ ಮಾಜಿ ರಾಷ್ಟ್ರಪತಿ ದಿವಂಗತ ಡಾ. ಎಪಿಜೆ ಅಬ್ದುಲ್ ಕಲಾಂ ಅವರ ಹೆಸರಿಡುವ ಮೂಲಕ ಗೌರವ ನಮನ ಸಲ್ಲಿಸಿದ್ದಾರೆ.ಅಂತಾರಾಷ್ಟ್ರೀಯ ಬಾಹ್ಯಕಾಶ ನಿಲ್ದಾಣದ ಫಿಲ್ಟರ್ ಗಳಲ್ಲಿ ಪತ್ತೆಹಚ್ಚಲಾದ ಬ್ಯಾಕ್ಟೀರಿಯಾಗೆ "ಸೊಲಿಬಾಸಿಲಸ್ ಕಲಾಂಜೀ" ಎಂದು ಕಲಾಂ ಅವರ ಹೆಸರನ್ನು ಇಡಲಾಗಿದೆ. ಜೆಟ್ ಪ್ರೊಪಲಶನ್ ಲ್ಯಾಬೋರೆಟರಿಯನ ಸಂಶೋಧಕರು ಅಂತಾರಾಷ್ಟ್ರೀಯ ಬಾಹ್ಯಕಾಶ ನಿಲ್ದಾಣದಲ್ಲಿ ಈ ಬ್ಯಾಕ್ಟೀರಿಯಾ ಸುಮಾರು 40 ತಿಂಗಳ ಕಾಲ ಇರುವುದಾಗಿ ಪತ್ತೆಹಚ್ಚಿದ್ದಾರೆ. ಇನ್ನು ಈ ಜೀವಿ ಬಾಹ್ಯಾಕಾಶದಲ್ಲಿ ಮಾತ್ರ ಕಂಡುಬರುತ್ತದೆ. ಅಬ್ದುಲ್ ಕಲಾಂ ಅವರು 1963ರಲ್ಲಿ ನಾಸಾದಲ್ಲಿ ತರಬೇತಿ ಪಡೆದಿದ್ದರು.

**ಎ.ಪಿ.ಜೆ ಕಲಾಂ:**

ಅಹುಲ್ ಪಕೀರ್ ಜೈನುಲಾಬ್ದೀನ್ (ಎ.ಪಿ.ಜೆ) ಅಬ್ದುಲ್ ಕಲಾಂ 15 ಅಕ್ಟೋಬರ್ 1931 ರಂದು ತಮಿಳುನಾಡಿನ ರಾಮನಾಥಪುರಂ ಜಿಲ್ಲೆಯ ರಾಮೇಶ್ವರಂನಲ್ಲಿ ಜನಿಸಿದರು. 1960ರಲ್ಲಿ ಅವರು ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್ಡಿಒ)ಗೆ ವಿಜ್ಞಾನಿಯಾಗಿ ಸೇರಿಕೊಂಡರು ಮತ್ತು ಭಾರತೀಯ ಸೇನೆಗೆ ಸಣ್ಣ ಹೆಲಿಕಾಪ್ಟರ್ ವಿನ್ಯಾಸಗೊಳಿಸುವ ಮೂಲಕ ತಮ್ಮ ವೃತ್ತಿಯನ್ನು ಆರಂಭಿಸಿದರು. 1969ರಲ್ಲಿ ಅವರು ಭಾರತದ ಬಾಹ್ಯಾಕಾಶ ಉಪಗ್ರಹ ಉಡಾವಣೆ ವಾಹನ ಕಾರ್ಯಕ್ರಮದ ಯೋಜನಾ ನಿರ್ದೇಶಕರಾಗಿ ಭಾರತ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಸೇರಿದರು. ಅವರ ನಾಯಕತ್ವ ಮತ್ತು ದೂರದೃಷ್ಟಿಯಿಂದ ರೋಹಿಣಿ ಉಪಗ್ರಹವು 1980ರಲ್ಲಿ ಕಕ್ಷೆಗೆ ಸೇರ್ಪಡೆಗೊಂಡ ನಂತರ ಭಾರತವು ಉತ್ಕೃಷ್ಟ ದೇಶಗಳ ಸಾಲಿಗೆ ಸೇರ್ಪಡೆಗೊಂಡಿತು. ಭಾರತದ ಪೋಲಾರ್ ಸ್ಯಾಟಲೈಟ್ ಲಾಂಚ್ ವೆಹಿಕಲ್ (ಪಿಎಸ್ಎಲ್ವಿ) ಅಭಿವೃದ್ಧಿಯಲ್ಲಿ ಅವರ ಕೊಡುಗೆ ಅಪಾರ. 198ರಲ್ಲಿ ಅವರು ಇಂಟಿಗ್ರೇಟೆಡ್ ಗೈಡೆಡ್ ಮಿಸೈಲ್ ಡೆವಲಪ್ಮೆಂಟ್ ಪ್ರೋಗ್ರಾಮ್ (IGMDP) ಅಧ್ಯಕ್ಷರಾಗಿ ನೇಮಕಗೊಂಡರು. ದೇಶದ ಅಗ್ನಿ ಮತ್ತು ಪೃಥ್ವಿ ಕ್ಷಿಪಣಿಗಳ ಅಭಿವೃದ್ಧಿ ಹಿಂದೆ ಕಲಾಂ ಅವರ ಸೇವೆ ಶ್ಲಾಘನೀಯ. ಇದಕ್ಕಾಗಿ ಅವರನ್ನು ಭಾರತದ ಮಿಸೈಲ್ ಮ್ಯಾನ್ ಎಂದೇ ಕರೆಯಲಾಗುತ್ತದೆ. ಕಲಾಂ ಅವರು 11 ಮೇ 1998 ರಂದು ನಡೆಸಿದ ಪೋಖ್ರಾನ್ II ನ್ಯೂಕ್ಲಿಯರ್ ಟೆಸ್ಟ್ (ಆಪರೇಷನ್ ಶಕ್ತಿ)ನ ಮುಖ್ಯ ಯೋಜನಾ ಸಂಯೋಜಕರಾಗಿದ್ದರು. ಕಲಾಂ ಭಾರತದ 11 ನೇ ರಾಷ್ಟ್ರಪತಿಯಾಗಿ 2002 ರಿಂದ 2007 ರವರೆಗೆ ಅಧಿಕಾರದಲ್ಲಿದ್ದರು. ಅವರಿಗೆ ಭಾರತ್ ರತ್ನ (1997), ಪದ್ಮ ವಿಭೂಷನ್ (1990), ಪದ್ಮಭೂಷಣ (1981) ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

## ಇಸ್ರೋದೊಂದಿಗೆ ಅಮುಲ್ ಒಡಂಬಡಿಕೆ

Amul

'ಅಮುಲ್' ಬ್ರಾಂಡ್ ಹೆಸರಿನ ಅಡಿಯಲ್ಲಿ ತನ್ನ ಉತ್ಪನ್ನವನ್ನು ಮಾರಾಟ ಮಾಡುವ ಗುಜರಾತ್ ಸಹಕಾರ ಹಾಲು ಮಾರಾಟ ಒಕ್ಕೂಟ (ಜಿಸಿಎಂಎಂಎಫ್) ಉಪಗ್ರಹ ವೀಕ್ಷಣೆ ಮತ್ತು ಬಾಹ್ಯಾಕಾಶ ತಂತ್ರಜ್ಞಾನವನ್ನು ಬಳಸಿಕೊಂಡು ಮೇವು ವಿಸ್ತೀರ್ಣ ಮೌಲ್ಯಮಾಪನಕ್ಕಾಗಿ ISROದೊಂದಿಗೆ ಒಪ್ಪಂದ ಮಾಡಿಕೊಂಡಿದೆ.

**ಪ್ರಮುಖಾಂಶಗಳು:**

ಒಡಂಬಡಿಕೆ ಪ್ರಕಾರ ಗ್ರಾಮೀಣ ಮಟ್ಟದಲ್ಲಿ ಆಹಾರ ಮತ್ತು ಮೇವು ಬೆಳೆಗಳನ್ನು ಗುರುತಿಸಲು ಇಸ್ರೋ ಸಹಾಯ ಮಾಡಲಿದೆ. ಗ್ರಾಮೀಣ ಮಟ್ಟದಲ್ಲಿ ಹಸಿರು ಮೇವು ಕೃಷಿಗಾಗಿ ಸೂಕ್ತ ಪ್ರದೇಶಗಳನ್ನು ಗುರುತಿಸಲು ಇಸ್ರೋ ಸಹಾಯ ಮಾಡಲಿದೆ. ಇಸ್ರೊದ ಸ್ಪೇಸ್ ಅಪ್ಲಿಕೇಷನ್ಸ್ ಸೆಂಟರ್ (ಎಸ್ಎಸಿ) ಜಿಲ್ಲಾ

www.karunaadexams.com

ಮತ್ತು ಗ್ರಾಮ ಮಟ್ಟದಲ್ಲಿ ಡೈರಿ ಜಾನುವಾರುಗಳಿಗೆ ಹಸಿರು ಮೇವು ಲಭ್ಯತೆಯನ್ನು ದೂರ ಸಂವೇದನೆಯ ಮೂಲಕ ಈಗಾಗಲೇ ಗುರುತಿಸಿದೆ.

**ಸ್ಪೇಸ್ ಅಪ್ಲಿಕೇಷನ್ ಸೆಂಟರ್:**

ಸ್ಪೇಸ್ ಅಪ್ಲಿಕೇಶನ್ಗಳ ಸೆಂಟರ್ (ಎಸ್ಎಸಿ) ಇಸ್ರೋದ ಪ್ರಮುಖ ಕೇಂದ್ರಗಳಲ್ಲಿ ಒಂದಾಗಿದೆ. ಇದನ್ನು 1972ರಲ್ಲಿ ಸ್ಥಾಪಿಸಲಾಯಿತು. ISRO ಕಾರ್ಯಾಚರಣೆಗಳಿಗಾಗಿ ಬಾಹ್ಯಾಕಾಶ ಮೂಲದ ಉಪಕರಣಗಳ ವಿನ್ಯಾಸವನ್ನು ಇಲ್ಲಿ ಮಾಡಲಾಗುತ್ತದೆ. ಇದು ಗುಜರಾತ್ನ ಅಹಮದಾಬಾದ್ನಲ್ಲಿದೆ.

**GCMMF**:

GCMMF ಪ್ರಪಂಚದಲ್ಲೆ ಅತಿದೊಡ್ಡ ಹಾಲು ಸಹಕಾರ ಸಂಸ್ಥೆಯಾಗಿದೆ ಮತ್ತು ಭಾರತದ ಅತಿದೊಡ್ಡ ಆಹಾರ ಉತ್ಪನ್ನಗಳ ಮಾರ್ಕೆಟಿಂಗ್ ಸಂಸ್ಥೆಯಾಗಿದ್ದು, ಇದರ ಉತ್ಪನ್ನಗಳನ್ನು ಅಮುಲ್ ಮತ್ತು ಸಾಗರ್ ಎಂಬ ಬ್ರಾಂಡ್ ಹೆಸರಿನಲ್ಲಿ ಮಾರಾಟ ಮಾಡುಲಾಗುತ್ತಿದೆ. ಇದನ್ನು 1973 ರಲ್ಲಿ ಡಾ. ವರ್ಜೀಸ್ ಕುರಿಯನ್ ಅವರು ಸ್ಥಾಪಿಸಿದರು,. ಇಂದು ಗುಜರಾತ್ನಲ್ಲಿ 3.6 ದಶಲಕ್ಷ ಹಾಲು ಉತ್ಪಾದಕರನ್ನು ಹೊಂದಿದೆ. ಕುರಿಯನ್ ಅವರು 30 ವರ್ಷಗಳ (1973-2006 ಕಾಲ) ಇದರ ಅಧ್ಯಕ್ಷತೆ ವಹಿಸಿದ್ದರು. ಹಾಲು ಸಹಕಾರ ಸಂಘದ 70% ಕ್ಕಿಂತಲೂ ಹೆಚ್ಚಿನ ಜನರು ಸಣ್ಣ ರೈತರು ಮತ್ತು ಭೂಮಿರಹಿತ ಕಾರ್ಮಿಕರು, ಗಮನಾರ್ಹ ಜನಸಂಖ್ಯೆಯ ಬುಡಕಟ್ಟು ಜನರು ಮತ್ತು ಪರಿಶಿಷ್ಟ ಜಾತಿಗಳ ಜನರೇ ಆಗಿದ್ದಾರೆ.

## <u>ದಾಖಲೆಗಳ ಸ್ವಯಂ ಧೃಡಿಕರಣಕ್ಕೆ ಇ-ಸನದ್</u>



ಸಿಬಿಎಸ್ಇ ಡಿಜಿಟಲ್ ರೆಪೊಸಿಟರಿಯ 'ಪರಿನಮ್ ಮಂಜುಷಾ'ದೊಂದಿಗೆ ಇ-ಸನದ್ ಅನ್ನು ಏಕೀಕೃತಗೊಳಿಸುವ ಕಾರ್ಯಕ್ರಮಕ್ಕೆ ವಿದೇಶಾಂಗ ವ್ಯವಹಾರಗಳ ಸಚಿವ ಸುಷ್ಮಾ ಸ್ವರಾಜ್, ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ಪ್ರಕಾಶ್ ಜಾವಡೇಕರ್ ಮತ್ತು ಐಟಿ ಸಚಿವ ರವಿಶಂಕರ್ ಪ್ರಸಾದ್ ಅವರು ಚಾಲನೆ ನೀಡಿದರು

- ಇ ಸನದ್ ಸೇವೆಯನ್ನು ದೇಶದ ನಾಗರಿಕರ ದಾಖಲೆಗಳ ಆನ್ಲೈನ್ ಪರಿಶೀಲನೆ ಮತ್ತು ದೃಢೀಕರಣಕ್ಕಾಗಿ ಜಾರಿಗೊಳಿಸಲಾಗಿದೆ.
- ಇ-ಸನಾದ್ ಡಿಜಿಟಲ್ ಇಂಡಿಯಾದ ಒಂದು ಉಪಕ್ರಮವಾಗಿದೆ. ನಗದು ರಹಿತ ವ್ಯವಹಾರ, ಕಾಗದ ರಹಿತ ಆಡಳಿತ, ಕಾಗದ ರಹಿತ ಡಿಜಿಟಲ್ ಇಂಡಿಯಾ ಕಾರ್ಯಕ್ರಮದ ಉದ್ದೇಶ.
- ಇ-ಸನದ್ ಸೇವೆಯಿಂದ ದೇಶದ ಅಭ್ಯರ್ಥಿಗಳಿಗೆ ಮತ್ತು ವಿದೇಶಗಳಿಗೆ ಪ್ರಯಾಣಿಸುವವರಿಗೆ ಪ್ರಯೋಜನವಾಗಲಿದೆ. ಇದರಿಂದ ವಿದೇಶಿ ಸರ್ಕಾರಗಳಿಂದ ಡಿಜಿಟಲ್ ಪರಿಶೀಲನೆ ಸುಲಭವಾಗಲಿದೆ.
- ಇದರಿಂದ ಆನ್ ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಲು ಸುಲಭವಾಗಲಿದೆ. ಆ ಮೂಲಕ ಅಭ್ಯರ್ಥಿಗಳ ಸಮಯ ಮತ್ತು ಹಣದ ಉಳಿತಾಯವಾಗಲಿದೆ. ಪ್ರಸ್ತುತ ಅಭ್ಯರ್ಥಿಗಳು ತಮ್ಮ ದಾಖಲೆಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಧೃಡಿಕರಿಸಲು ದೂರ ಪ್ರಯಾಣ ಮಾಡುವ ಅಗತ್ಯವಿದೆ.

www.karunaduexams.com

<u>**ಗುರುಗ್ರಹದಲ್ಲಿ ಭೂಮಿಗಾತ್ರದ ಚಂಡಮಾರುತ ಪತ್ತೆ**</u>



ನಾಸಾದ ಜುನೋ ಬಾಹ್ಯಾಕಾಶ ನೌಕೆ ಗುರುಗ್ರಹದ ಧ್ರುವಗಳಲ್ಲಿ ಭೂಮಿಯ-ಗಾತ್ರದ ಚಂಡಮಾರುತಗಳನ್ನು ಕಂಡುಹಿಡಿದಿದೆ. ಗ್ರಹದ ಅಂತರಾಳಕ್ಕೆ ಆಳವಾಗಿ ಚಲಿಸುವ ಚಂಡಮಾರುತ ವ್ಯವಸ್ಥೆಗಳ ಉಪಸ್ಥಿತಿಯನ್ನುಸಹ ಪತ್ತೆಹಚ್ಚಲಾಗಿದೆ. ಗುರುಗ್ರಹದ ಧ್ರುವಗಳೆರಡೂ ಭೂಮಿಯ ಗಾತ್ರದ ಸುತ್ತುತ್ತಿರುವ ದಟ್ಟವಾದ ಚಂಡಮಾರುತಗಳಿಂದ ಆವೃತವಾಗಿವೆ. ಕಳೆದ ವರ್ಷ ಆಗಸ್ಟ್‌ನಲ್ಲಿ ಜೂನೋ ನೌಕೆ ಸಂಗ್ರಹಿದ ಮಾಹಿತಿಯಿಂದ ಈ ಫಲಿತಾಂಶಗಳು ಹೊರಬಂದಿವೆ. ಗುರುಗ್ರಹದ ಸುತ್ತುತ್ತಿರುವ ಮೋಡದ ಮೇಲ್ಭಾಗದ ಸುಮಾರು 4,200 ಕಿಲೋಮೀಟರ್ಗಳಷ್ಟು ದೂರದಲ್ಲಿ ಜುನೋ ನೌಕೆ ಚಲಿಸಿ ಮಾಹಿತಿ ಸಂಗ್ರಹಿಸಿದೆ.

ಗುರು ಗ್ರಹದ ಆಯಸ್ಕಾಂತೀಯ ಕಾಂತವು ನಿರೀಕ್ಷಿಗೆಕ್ಕಿಂತ ಹೆಚ್ಚು ಬಲವಾದ ಕಾಂತೀಯ ಕ್ಷೇತ್ರವನ್ನು ಹೊಂದಿದೆ. ಗ್ರಹದಲ್ಲಿನ ಕಾಂತೀಯ ಕ್ಷೇತ್ರವು 7.766 ಗಾಸ್ (Gauss) ನಷ್ಟಿದ್ದು, ಇದು ಭೂಮಿಯ ಮೇಲೆ ಕಂಡುಬರುವ ಬಲವಾದ ಆಯಸ್ಕಾಂತೀಯ ಕ್ಷೇತ್ರಕ್ಕಿಂತ 10 ಪಟ್ಟು ಪ್ರಬಲವಾಗಿದೆ.

**ಜುನೋ ಬಾಹ್ಯಕಾಶ ನೌಕೆ:**

ಗುರುಗ್ರಹದ ಸಂಯೋಜನೆ ಮತ್ತು ವಿಕಾಸವನ್ನು ಅಧ್ಯಯನ ಮಾಡುವ ಸಲುವಾಗಿ ಜುನೋ ಬಾಹ್ಯಕಾಶ ನೌಕೆಯನ್ನು ಆಗಸ್ಟ 2011 ರಲ್ಲಿ ಹಾರಿಬಿಡಲಾಯಿತು. ಗುರುಗ್ರಹವನ್ನು ಸುತ್ತುವ ಮೊದಲ ಸೌರಶಕ್ತಿಚಾಲಿತ ಬಾಹ್ಯಾಕಾಶನೌಕೆ ಇದಾಗಿದೆ. 1995-2003ರಲ್ಲಿ ಗ್ರಹವನ್ನು ಪರಿಭ್ರಮಿಸಿದ ಗೆಲಿಲಿಯೋ ನೌಕೆ ನಂತರ ಗುರುಗ್ರಹ ಅಧ್ಯಯನಕ್ಕೆ ಕಳುಹಿಸಲಾದ ಎರಡನೇ ಬಾಹ್ಯಾಕಾಶ ನೌಕೆಯಾಗಿದೆ. ಈ ಮಾನವರಹಿತ ಬಾಹ್ಯಾಕಾಶ ನೌಕೆ ಐದು ವರ್ಷಗಳ ಪ್ರಯಾಣದ ನಂತರ ಸುಮಾರು 2ಬಿಲಿಯನ್ ಮೈಲುಗಳ ದೂರ ಕ್ರಮಿಸಿ ಗುರುಗ್ರಹದ ಕಕ್ಷೆಯನ್ನು ಜುಲೈ 2016 ರಲ್ಲಿ ಪ್ರವೇಶಿಸಿತು. ಗುರುಗ್ರಹದ ವಾಯುಮಂಡಲದ ರಚನೆ ಮತ್ತು ಮ್ಯಾಗ್ನೆಸ್ಫಿಯರ್ ರಚನೆಯ ಅಧ್ಯಯನ ಮತ್ತು ಗ್ರಹವನ್ನು ಆವರಿಸಿರುವ ಅನಿಲ ಮೋಡದಲ್ಲಿ ನೀರು ಇದಯೇ ಅಥವಾ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಜುನೋ ನೌಕೆಯನ್ನು ಕಳುಹಿಸಿಕೊಡಲಾಗಿದೆ.

www.karunaduexams.com

# ಕ್ರೀಡೆ

**<u>ರಫೆಲ್ ನಡಾಲ್ ಮಡಿಲಿಗೆ ಬಾರ್ಸಿಲೋನಾ ಓಪನ್ ಪ್ರಶಸ್ತಿ</u>**



ಸ್ಪೇನ್ ನ ರಫೆಲ್ ನಡಾಲ್ ಅವರು ಬಾರ್ಸಿಲೋನಾ ಓಪನ್‌ನಲ್ಲಿ ಪ್ರಶಸ್ತಿಯನ್ನು ಗೆದ್ದುಕೊಂಡರು. ರಫೆಲ್ ಅವರಿಗಿದು 10ನೇ ಪ್ರಶಸ್ತಿ ಆಗಿದೆ. ಪುರುಷರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ಸ್ಪೇನ್‌ನ ನಡಾಲ್ 6–4, 6–1ರಲ್ಲಿ ನೇರ ಸೆಟ್‌ಗಳಿಂದ ಆಸ್ಟ್ರಿಯಾದ ಡಾಮ್ನಿಕ್ ಥೀಮ್ ಅವರನ್ನು ಸೋಲಿಸಿ ಪ್ರಶಸ್ತಿಗೆ ಮುತ್ತಿಕ್ಕಿದರು.

- 2005ರಿಂದ 2009 ಹಾಗೂ 2011ರಿಂದ 2013ರ ವರೆಗೆ ಹಾಗೂ ಈಗ 2016 ಮತ್ತು 2017ರಲ್ಲಿ ನಡಾಲ್ ಸತತವಾಗಿ ಇಲ್ಲಿ ಪ್ರಶಸ್ತಿ ಗೆದ್ದಿದ್ದಾರೆ.
- ಕಳೆದ ವಾರ ಮಾಂಟೆ ಕಾರ್ಲೊ ಮಾಸ್ಟರ್ಸ್‌ನಲ್ಲಿ ನಡಾಲ್ ಅವರು ಪ್ರಶಸ್ತಿ ಗೆದ್ದಿದ್ದರು.

**<u>ಏಷ್ಯನ್ ಸ್ಕ್ವಾಷ್ ಟೂರ್ನಿ: ಜೋಷ್ನಾ ಚಿಣ್ಣಪ್ಪ ಐತಿಹಾಸಿಕ ಸಾಧನೆ</u>**



ಜೋಷ್ನಾ ಚಿಣ್ಣಪ್ಪ ಅವರು ಏಷ್ಯನ್ ಸ್ಕ್ವಾಷ್ ಟೂರ್ನಿಯಲ್ಲಿ ಪ್ರಶಸ್ತಿಯನ್ನು ಗೆಲ್ಲುವ ಮೂಲಕ ಐತಿಹಾಸಿಕ ದಾಖಲೆ ಮಾಡಿದ್ದಾರೆ. ಏಷ್ಯನ್ ಸ್ಕ್ವಾಷ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಭಾರತದ ಮೊದಲ ಸ್ಪರ್ಧಿ ಎಂಬ ಶ್ರೇಯ ಅವರ ಪಾಲಾಯಿತು.

- ಮಹಿಳೆಯರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ಜೋಷ್ನಾ 13–15, 12–10, 11–13, 11–4, 14ರಲ್ಲಿ ಭಾರತದವರೇ ಆದ ದೀಪಿಕಾ ಪಳ್ಳಿಕಲ್ ಅವರನ್ನು ಸೋಲಿಸಿದರು.
- ಇದೇ ಮೊದಲ ಬಾರಿಗೆ ಈ ಇಬ್ಬರು ಆಟಗಾರ್ತಿಯರು ಈ ಟೂರ್ನಿ ಯಲ್ಲಿ ಫೈನಲ್ ಆಡಿರುವುದು ವಿಶೇಷ.
- ವಿಶ್ವ ಶ್ರೇಯಾಂಕದಲ್ಲಿ ಜೋಷ್ನಾ ಅವರು 14ನೇ ಸ್ಥಾನವನ್ನು ಪಡೆದುಕೊಂಡಿದ್ದಾರೆ.

**ಘೋಷಾಲ್‌ಗೆ ಸೋಲು:** ಸೌರವ್ ಘೋಷಾಲ್ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ 11–5, 4–11, 8–11, 7–11ರಲ್ಲಿ ಅಗ್ರಶ್ರೇಯಾಂಕದ ಆಟಗಾರ ಮ್ಯಾಕ್ಸ್ ಲೀ ಅವರಿಗೆ ಮಣಿದರು.

**<u>ಫುಟ್‌ಬಾಲ್ ಶ್ರೇಯಾಂಕ: ಭಾರತಕ್ಕೆ ನೂರನೇ ಸ್ಥಾನ</u>**



ಫಿಫಾ ಅಂತಾರಾಷ್ಟ್ರೀಯ ಫುಟ್ಬಾಲ್ ಶ್ರೇಯಾಂಕದಲ್ಲಿ ಭಾರತ ನೂರನೇ ಸ್ಥಾನ ಪಡೆದುಕೊಳ್ಳುವ ಮೂಲಕ ಟಾಪ್ ನೂರು ರಾಷ್ಟ್ರಗಳಲ್ಲಿ ಸ್ಥಾನ ಪಡೆದುಕೊಂಡಿದೆ. ಭಾರತದ ಪಾಲಿಗೆ ಇದೊಂದು ಐತಿಹಾಸಿಕ ಸಾಧನೆ. ಏಕೆಂದರೆ 21 ವರ್ಷಗಳ ನಂತರ ಭಾರತ ಟಾಪ್ 100 ರಾಷ್ಟ್ರಗಳ ಪಟ್ಟಿಯಲ್ಲಿ ಸ್ಥಾನಪಡೆದಿದೆ.

www.karunaduexams.com

ನಿಕಾರಗುವಾ, ಲಿಥುಯಾನಿಯಾ, ಈಸ್ಟೋನಿಯಾ ರಾಷ್ಟ್ರಗಳ ಜೊತೆ 331 ಅಂಕಗಳನ್ನು ಪಡೆಯುವ ಮೂಲಕ ಭಾರತ 100ನೇ ಸ್ಥಾನವನ್ನು ಪಡೆದುಕೊಂಡಿದೆ.

- ಏಪ್ರಿಲ್ 2017ರ ಅಂತ್ಯಕ್ಕೆ ಭಾರತ 101ನೇ ಸ್ಥಾನವನ್ನು ಪಡೆದುಕೊಂಡಿತ್ತು. ಆದರೆ ಕಾಂಬೋಡಿಯಾ ಮತ್ತು ಮ್ಯಾನ್ಮಾರ್ ದೇಶಗಳ ವಿರುದ್ಧ ಗೆಲುವು ಸಾಧಿಸಿದ ಕಾರಣ ಒಂದು ಸ್ಥಾನ ಏರಿಕೆ ಆಗಿದೆ.
- ಮಾರ್ಚ್ 2015ರ ವರದಿಗೆ ಹೋಲಿಸಿದರೆ ಭಾರತ ತಂಡ ಅಮೋಘ ಸಾಧನೆ ಮಾಡಿದೆ. ಮಾರ್ಚ್ 2015 ರಲ್ಲಿ ಭಾರತ 173ನೇ ಸ್ಥಾನವನ್ನು ಪಡೆದುಕೊಂಡಿತ್ತು.
- 1996ರಲ್ಲಿ 94ನೇ ಸ್ಥಾನ ಗಳಿಸಿದ್ದು ಭಾರತ ಫುಟ್‌ಬಾಲ್ ತಂಡದ ಇದುವರೆಗಿನ ಸಾಧನೆಯಾಗಿದೆ.
- ಬ್ರೆಜಿಲ್, ಅರ್ಜೆಂಟೀನಾ, ಜರ್ಮನಿ, ಚಿಲಿ ಹಾಗೂ ಕೊಲಂಬಿಯಾ ತಂಡಗಳು ಕ್ರಮವಾಗಿ ಅಗ್ರ ಐದು ಸ್ಥಾನಗಳಲ್ಲಿ ಕಾಣಿಸಿಕೊಂಡಿವೆ.

## ಜಿಪಿ 3 ರೇಸ್ ಪ್ರಶಸ್ತಿ ಗೆದ್ದು ದಾಖಲೆ ನಿರ್ಮಿಸಿದ ಅರ್ಜುನ್ ಮೈನಿ



ಕರ್ನಾಟಕದ ಯುವ ಮೋಟಾರು ಕಾರು ಸಾಹಸಿ ಜೆಂಜರ್ ಮೋಟರ್ ಸ್ಪೋರ್ಟ್ಸ್ ತಂಡದ ಅರ್ಜುನ್ ಮೈನಿ ಬಾರ್ಸಿಲೋನಾದಲ್ಲಿ ನಡೆದ ಗ್ರ್ಯಾನ್ ಪ್ರಿ–3 ಸೀರಿಸ್‌ನ ಎರಡನೇ ರೇಸ್‌ನಲ್ಲಿ ಪ್ರಶಸ್ತಿ ಗೆದ್ದಿದ್ದಾರೆ. ಈ ಮೂಲಕ ಈ ಸಾಧನೆ ಮಾಡಿದ ಭಾರತದ ಮೊದಲ ಚಾಲಕ ಎಂಬ ಹಿರಿಮೆ ತಮ್ಮದಾಗಿಸಿಕೊಂಡಿದ್ದಾರೆ.

ಅರ್ಜುನ್ ಮೈನಿ 'ಡ್ರೈವರ್ಸ್ ಚಾಂಪಿ ಯನ್‌ಷಿಪ್‌ನಲ್ಲಿ ಮೂರನೇ ಸ್ಥಾನ ಪಡೆದರು. ಬೊಕ್ಕೊಲಾಕ್ಕಿ ಎರಡನೇ ಸ್ಥಾನ ಪಡೆದರೆ, ಅಲೆಸ್ಸಿಯೊ ಲೊರಾಂಡಿ ಮೂರನೇಯವರಾಗಿ ಗುರಿ ಮುಟ್ಟಿದರು.

## ಐಸಿಸಿ ಟೆಸ್ಟ್ ಶ್ರೇಯಾಂಕ: ಅಗ್ರಸ್ಥಾನದಲ್ಲಿ ಭಾರತ



ಐಸಿಸಿ ಟೆಸ್ಟ್ ಶ್ರೇಯಾಂಕದಲ್ಲಿ 123 ಅಂಕಗಳೊಂದಿಗೆ ಭಾರತ ಕ್ರಿಕೆಟ್ ತಂಡವು ತನ್ನ ಅಗ್ರ ಸ್ಥಾನವನ್ನು ಉಳಿಸಿಕೊಂಡಿದೆ. ದಕ್ಷಿಣ ಆಫ್ರಿಕಾವು ಎರಡನೇ ಸ್ಥಾನದಲ್ಲಿದೆ. 100 ಅಂಕಗಳೊಂದಿಗೆ ಆಸ್ಟ್ರೇಲಿಯಾ ತಂಡ ಮೂರನೇ ಸ್ಥಾನದಲ್ಲಿದೆ. ಇಂಗ್ಲೆಂಡ್ ತಂಡ (99) ನಾಲ್ಕನೇ ಸ್ಥಾನವನ್ನು ಪಡೆದುಕೊಂಡಿದೆ. ನ್ಯೂಜಿಲೆಂಡ್ 5 ನೇ ಸ್ಥಾನ (97 ಅಂಕಗಳು), ಪಾಕಿಸ್ತಾನ 6 ನೇ ಸ್ಥಾನ (93 ಅಂಕಗಳು), ಶ್ರೀಲಂಕಾ 7 ನೇ ಸ್ಥಾನ (91 ಅಂಕಗಳು), ವೆಸ್ಟ್ ಇಂಡೀಸ್ 8 ನೇ ಸ್ಥಾನ (75 ಅಂಕಗಳು), ಬಾಂಗ್ಲಾದೇಶ 9 ನೇ ಸ್ಥಾನ (69 ಅಂಕಗಳು) ಮತ್ತು ಜಿಂಬಾಬ್ವೆ 10 ನೇ ಸ್ಥಾನದಲ್ಲಿದೆ.

www.karunaduexams.com

ಇತ್ತೀಚಿನ ಪಂದ್ಯಗಳಲ್ಲಿ ಭಾರತ ಕಳೆದ ವರ್ಷ ವೆಸ್ಟ ಇಂಡೀಸ್ ವಿರುದ್ದ ಸರಣಿಯನ್ನು ಗೆದ್ದಿದೆ ಮತ್ತು ನ್ಯೂಜಿಲೆಂಡ್, ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ವಿರುದ್ದ ಭಾರತದಲ್ಲಿ ನಡೆದ ಪಂದ್ಯಗಳಲ್ಲಿ ಗೆಲುವು ಕಂಡಿದೆ. ಭಾರತದಲ್ಲಿ ಆಡಿದ ಒಟ್ಟು 13 ಪಂದ್ಯಗಳಲ್ಲಿ, ಭಾರತ ತಂಡವು 10 ಗೆಲುವು, 2 ಸೋಲು ಮತ್ತು ಒಂದು ಡ್ರಾವನ್ನು ದಾಖಲಿಸಿದೆ.

**ಇತರೆ ಶ್ರೇಯಾಂಕ:**

- ಐಸಿಸಿ ಏಕದಿನ ಚಾಂಪಿಯನ್ಶಿಪ್ ಶ್ರೇಯಾಂಕಗಳಲ್ಲಿ, ದಕ್ಷಿಣ ಆಫ್ರಿಕಾ ಮತ್ತು ಆಸ್ಟ್ರೇಲಿಯಾ ನಂತರ ಭಾರತೀಯ ತಂಡವನ್ನು ಮೂರನೇ ಸ್ಥಾನದಲ್ಲಿದೆ.
- ಐಸಿಸಿ ಟ್ವೆಂಟಿ -20 ಚಾಂಪಿಯನ್ಶಿಪ್ ಶ್ರೇಯಾಂಕದಲ್ಲಿ, ನ್ಯೂಜಿಲೆಂಡ್, ಇಂಗ್ಲೆಂಡ್ ಮತ್ತು ಪಾಕಿಸ್ತಾನದ ನಂತರ ಭಾರತವು ನಾಲ್ಕನೇ ಸ್ಥಾನದಲ್ಲಿದೆ.
- ಐಸಿಸಿ ಮಹಿಳಾ ಚಾಂಪಿಯನ್ಶಿಪ್ ಶ್ರೇಯಾಂಕದಲ್ಲಿ ಆಸ್ಟ್ರೇಲಿಯಾ, ಇಂಗ್ಲೆಂಡ್ ಮತ್ತು ನ್ಯೂಝಿಲೆಂಡ್ ನಂತರ ಭಾರತೀಯ ಮಹಿಳಾ ತಂಡ ನಾಲ್ಕನೇ ಸ್ಥಾನದಲ್ಲಿದೆ.

**ರವಿಚಂದ್ರನ್ ಅಶ್ವಿನ್ ಗೆ ಅಂತಾರಾಷ್ಟ್ರೀಯ ವರ್ಷದ ಕ್ರಿಕೆಟಿಗ ಪ್ರಶಸ್ತಿ**



ಸಿಯೆಟ್ ಕ್ರಿಕೆಟ್ ರೇಟಿಂಗ್‌ನ ಅಂತಾರಾಷ್ಟ್ರೀಯ ವರ್ಷದ ಕ್ರಿಕೆಟಿಗ ಪ್ರಶಸ್ತಿಗೆ ಭಾರತದ ಆಫ್ ಸ್ಪಿನ್ನರ್ ರವಿಚಂದ್ರುನ್ ಅಶ್ವಿನ್ ಭಾಜನರಾಗಿದ್ದಾರೆ. ಕ್ರಿಕೆಟ್ ಕ್ಲಬ್ ಆಫ್ ಇಂಡಿಯಾದಲ್ಲಿ ಬುಧವಾರ ನಡೆದ ಪ್ರಶಸ್ತಿ ಸಮಾರಂಭದಲ್ಲಿ ಭಾರತ ತಂಡದ ಮಾಜಿ ನಾಯಕ ಸುನಿಲ್ ಗಾವಸ್ಕರ್ ಮತ್ತು ಆರ್.ಪಿ.ಜಿ ಎಂಟರ್‌ಪ್ರೈಸಸ್ ನ ಅಧ್ಯಕ್ಷ ಹರ್ಷ ಗೋಯೆಂಕಾ ಅವರು ಅಶ್ವಿನ್ಗೆ ಪ್ರಶಸ್ತಿ ಪ್ರದಾನ ಮಾಡಿದರು.

ನ್ಯೂಜಿಲ್ಯಾಂಡ್, ಇಂಗ್ಲೆಂಡ್, ಬಾಂಗ್ಲಾದೇಶ ಮತ್ತು ಆಸ್ಟ್ರೇಲಿಯಾ ವಿರುದ್ದ ನಡೆದ ಒಟ್ಟು 13 ಟೆಸ್ಟ ಪಂದ್ಯಗಳ ಪೈಕಿ 10ರಲ್ಲಿ ಭಾರತ ಗೆಲುವು ಸಾಧಿಸಲು ಅಶ್ವಿನ್ ಅವರ ಪಾತ್ರ ಹೆಚ್ಚಿದೆ. ಟೆಸ್ಟ ನಲ್ಲಿ ಒಂದು ವರ್ಷದಲ್ಲಿ ಬರೋಬ್ಬರಿ ಅಶ್ವಿನ್ 99 ವಿಕೆಟ್ ಕಬಳಿಸಿದ್ದಾರೆ.

**ಶುಭ್ ಮಾನ್ ಗಿಲ್ ಗೆ ಪ್ರಶಸ್ತಿ**: ಯುವ ಬ್ಯಾಟ್ಸ ಮನ್ ಶುಭ್ ಮಾನ್ ಗಿಲ್ ಅವರಿಗೆ ವರ್ಷದ ಯುವ ಆಟಗಾರ ಪ್ರಶಸ್ತಿ ಪ್ರದಾನ ಮಾಡಲಾಯಿತು.

www.karunadueexams.com

## ಉತ್ತಮ ಆಡಳಿತ ನಿರ್ವಹಣೆಯಲ್ಲಿ ರಾಜ್ಯಕ್ಕೆ 4ನೇ ಸ್ಥಾನ

Table 3: Mucipalities Ranking

| Sl No | State | Rank |
|---|---|---|
| 1 | Gujarat | 1 |
| 2 | Maharashtra | 2 |
| 3 | Tamil Nadu | 3 |
| 4 | Karnataka | 3 |
| 5 | Madhya Pradesh | 4 |
| 6 | West Bengal | 5 |
| 7 | Chandigarh | 6 |
| 8 | Chattisgarh | 6 |

ಪಬ್ಲಿಕ್ ಅಫೇರ್ಸ್ ಸೆಂಟರ್ (ಪಿಎಸಿ) ಹೊರತಂದಿರುವ ವರದಿಯಲ್ಲಿ ಉತ್ತಮ ಆಡಳಿತ ನಿರ್ವಹಣೆಯಲ್ಲಿ ಕರ್ನಾಟಕ ಸರ್ಕಾರ 4ನೇ ಸ್ಥಾನವನ್ನು ಪಡೆದುಕೊಂಡಿದೆ. ಕೇರಳ ಸರ್ಕಾರ ಸತತ ಎರಡನೇ ವರ್ಷವೂ ಪ್ರಥಮ ಸ್ಥಾನವನ್ನು ಕಾಯ್ದುಕೊಂಡಿದೆ. ಸರ್ಕಾರೇತರ ಸಂಸ್ಥೆ ಪಿಎಸಿ ಹೊರತಂದಿರುವ ಪ್ರಸಕ್ತ ಸಾಲಿನ ಸಾರ್ವಜನಿಕ ಆಡಳಿತ ಸೂಚ್ಯಂಕ ಆವೃತ್ತಿಯನ್ನು ಸುಪ್ರೀಂಕೋರ್ಟ್ ನಿವೃತ್ತ ಮುಖ್ಯನ್ಯಾಯಮೂರ್ತಿ ಹಾಗೂ ಸಂಸ್ಥೆ ಅಧ್ಯಕ್ಷ ಎಂ.ಎನ್.ವೆಂಕಟಾಚಲಯ್ಯ ಅವರು ಬೆಂಗಳೂರಿನಲ್ಲಿ ಬಿಡುಗಡೆ ಮಾಡಿದರು.

**ಪ್ರಮುಖಾಂಶಗಳು**:

- ಪಬ್ಲಿಕ್ ಅಫೇರ್ಸ್ ಸೆಂಟರ್ (ಪಿಎಸಿ) 2016 ರಿಂದ ಈ ಸೂಚ್ಯಂಕವನ್ನು ಹೊರತರುತ್ತಿದೆ. 2016ರ ಸೂಚ್ಯಂಕದಲ್ಲಿ ಕೇರಳ ಮೊದಲ ಸ್ಥಾನವನ್ನು, ತಮಿಳು ನಾಡು ಎರಡನೇ ಸ್ಥಾನವನ್ನು ಹಾಗೂ ಕರ್ನಾಟಕ ಮೂರನೇ ಸ್ಥಾನವನ್ನು ಪಡೆದುಕೊಂಡಿದ್ದವು.
- ಸೂಚ್ಯಂಕದಲ್ಲಿ ಬಿಹಾರ ಕೊನೆಯ ಸ್ಥಾನದಲ್ಲಿದೆ.
- ಸಣ್ಣ ರಾಜ್ಯಗಳ ಪಟ್ಟಿಯಲ್ಲಿ ಹಿಮಾಚಲಪ್ರದೇಶ ಉತ್ತಮ ಆಡಳಿತದಲ್ಲಿ ಮೊದಲ ಸ್ಥಾನವನ್ನು ಪಡೆದುಕೊಂಡಿದೆ. ಕಳೆದ ವರ್ಷ ಮಿಜೋರಾಂ ಪ್ರಥಮ ಸ್ಥಾನವನ್ನು ಪಡೆದುಕೊಂಡಿತ್ತು. ಆದರೆ ಈ ಬಾರಿ ಮಿಜೋರಾಂ 3ನೇ ಸ್ಥಾನಕ್ಕೆ ಕುಸಿದಿದೆ. ಮೇಘಾಲಯ ಕೊನೆ ಸ್ಥಾನದಲ್ಲಿದೆ.

ಮೂಲಸೌಕರ್ಯ, ಮಾನವ ಅಭಿವೃದ್ಧಿಗಾಗಿ ಬೆಂಬಲ, ಸಾಮಾಜಿಕ ಭದ್ರತೆ, ಮಹಿಳೆಯರು ಮತ್ತು ಮಕ್ಕಳ ರಕ್ಷಣೆ, ಅಪರಾಧ, ಕಾನೂನು ಮತ್ತು ಸುವ್ಯವಸ್ಥೆ ನಿಯಂತ್ರಣ, ಸಾಮಾಜಿಕ ನ್ಯಾಯ ಹಂಚಿಕೆ, ಪರಿಸರ, ಪಾರದರ್ಶಕತೆ ಮತ್ತು ಹೊಣೆಗಾರಿಕೆ, ಹಣಕಾಸು ನಿರ್ವಹಣೆ ಹಾಗೂ ಆರ್ಥಿಕ ಸ್ವಾತಂತ್ರ್ಯ ವಿಷಯಗಳ ಆಡಳಿತದಲ್ಲಿ ಕೇರಳ, ತಮಿಳುನಾಡು, ಹಿಮಾಚಲ ಪ್ರದೇಶ ಮತ್ತು ಗೋವಾ ರಾಜ್ಯಗಳು ಮುಂಚೂಣಿಯಲ್ಲಿರುವುದಾಗಿ ವರದಿಯಲ್ಲಿ ತಿಳಿಸಿದೆ

## ಬೆಂಗಳೂರು ಫುಟ್ಬಾಲ್ ತಂಡಕ್ಕೆ ಫೆಡರೇಶನ್ ಕಪ್



ಬೆಂಗಳೂರು ಫುಟ್ಬಾಲ್ ಕ್ಲಬ್ (ಬಿಎಫ್‌ಸಿ) 2017ರ ಫೆಡರೇಶನ್ ಕಪ್ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಒಡಿಶಾದ ಕಟಕ್ನ ಬಾರಾಬತಿ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ 14 ಬಾರಿ ಚಾಂಪಿಯನ್ ಮೋಹನ್ ಬಗಾನ್ ತಂಡವನ್ನು 2-0 ಗೋಲುಗಳ ಅಂತರದಲ್ಲಿ ಸೋಲಿಸಿದ ಬಿಎಫ್‌ಸಿ 2ನೇ ಬಾರಿಗೆ ಪ್ರಶಸ್ತಿ ಎತ್ತಿಹಿಡಿಯಿತು. ಫೆಡರೇಶನ್ ಕಪ್ ಕ್ಲಬ್ಬಳನ್ನು ಒಳಗೊಂಡ ಭಾರತದ

www.karunaduexams.com

ಮೊದಲ ಪ್ರಮುಖ ಫುಟ್ಬಾಲ್ ಸ್ಪರ್ಧೆಯಾಗಿದೆ. ಇದನ್ನು 1977ರಲ್ಲಿ ಅಖಿಲ ಭಾರತ ಫುಟ್ಬಾಲ್ ಫೆಡರೇಶನ್ ಸ್ಥಾಪಿಸಿತು. 1980 ಮತ್ತು 1990ರ ದಶಕದಲ್ಲಿ, ಇದು ಭಾರತದ ಅತ್ಯಂತ ಜನಪ್ರಿಯ ಫುಟ್ಬಾಲ್ ಪಂದ್ಯಾವಳಿ ಎಂದು ಪರಿಗಣಿಸಲಾಗಿತ್ತು. ಭಾರತದ ಇತರ ಜನಪ್ರಿಯ ಫುಟ್ಬಾಲ್ ಪಂದ್ಯಾವಳಿಗಳಲ್ಲಿ ಡ್ಯುರಾಂಡ್ ಕಪ್, ಸಂತೋಷ್ ಟ್ರೋಫಿ, ಇಂಡಿಯನ್ ಸೂಪರ್ ಲೀಗ್, ಸುಬ್ರೊಟೊ ಕಪ್, ಐಎಫ್ಎ ಶೀಲ್ಡ್ ಇತ್ಯಾದಿ ಸೇರಿವೆ. ಇವುಗಳ ಕಿರುಪರಿಚಯ ಇಲ್ಲಿದೆ:

- **ಡ್ಯೂರಾಂಡ್ ಕಪ್:** ಡ್ಯುರಾಂಡ್ ಕಪ್ ಭಾರತದ ಅತ್ಯಂತ ಹಳೆಯ ಫುಟ್ಬಾಲ್ ಪಂದ್ಯಾವಳಿಯಾಗಿದ್ದು, ಪ್ರಪಂಚದ ಅತ್ಯಂತ ಹಳೆಯ ಫುಟ್ಬಾಲ್ ಪಂದ್ಯಾವಳಿಗಳಲ್ಲಿ ಒಂದಾಗಿದೆ. ಇದನ್ನು 1884 ರಿಂದ 1894 ರವರೆಗೆ ಭಾರತದ ವಿದೇಶಾಂಗ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ ಸರ್ ಮೊರ್ಟಿಮರ್ ಡ್ಯುರಾಂಡ್ ಹೆಸರನ್ನು ಇಡಲಾಗಿದೆ. 1888 ರಲ್ಲಿ ಮೊದಲ ಡ್ಯುರಾಂಡ್ ಕಪ್ ಪಂದ್ಯಾವಳಿ ನಡೆಯಿತು. ಆರಂಭದಲ್ಲಿ, ಇದು ಬ್ರಿಟಿಷ್ ಇಂಡಿಯನ್ ಸೇನಾ ಪಡೆಗಳ ನಡುವೆ ನಡೆಯುತ್ತಿದ್ದ ಸೇನಾ ಕಪ್ ಆಗಿತ್ತು. ಕಾಲಕ್ರಮೇಣ ನಾಗರಿಕ ತಂಡಗಳಿಗೆ ಮುಕ್ತವಾಯಿತು. 2006ರಲ್ಲಿ ಸೈನ್ಯವು ಡ್ಯುರಾಂಡ್ ಫುಟ್ಬಾಲ್ ಟೂರ್ನಮೆಂಟ್ ಸೊಸೈಟಿ (ಡಿಎಫ್ಟಿಎಸ್) ಮತ್ತು ಓಸಿಯನ್ಸ್ ಎಂದು ಕರೆಯುವ ನಾಗರಿಕರ ಸಂಘಟನೆಗೆ ತನ್ನ ಪಂದ್ಯಾವಳಿಯ ಆಡಳಿತವನ್ನು ಹಸ್ತಾಂತರಿಸಿತು. ಇತ್ತೀಚಿನ ಡ್ಯುರಾಂಡ್ ಕಪ್ ಟೂರ್ನಮೆಂಟ್ 2016 ರಲ್ಲಿ ನಡೆಯಿತು ಮತ್ತು ಪ್ರಸ್ತುತ ಚಾಂಪಿಯನ್ ಆರ್ಮಿ ಗ್ರೀನ್ ಆಗಿದೆ.
- **ಐಎಎಫ್ ಶೀಲ್ಡ್:** ಐಎಫ್ಎ ಶೀಲ್ಡ್ ಭಾರತದ ಎರಡನೇ ಹಳೆಯ ಫುಟ್ಬಾಲ್ ಸ್ಪರ್ಧೆಯಾಗಿದ್ದು, ಭಾರತೀಯ ಫುಟ್ಬಾಲ್ ಅಸೋಸಿಯೇಷನ್ 1893 ರಿಂದ ಆಯೋಜಿಸುತ್ತಿದೆ. 2015ರಿಂದ ಐಎಫ್ಎ ಶೀಲ್ಡ್ ಅನ್ನು ಅಂಡರ್-19 ಯುವ ಫುಟ್ಬಾಲ್ ಪಂದ್ಯಾವಳಿಯಾಗಿ ವಿನ್ಯಾಸಗೊಳಿಸಲಾಗಿದೆ. ಇದರ ಪ್ರಸ್ತುತ ಪ್ರಾಯೋಜಕರು LG ಮತ್ತು ಇತ್ತೀಚಿನ ಸ್ಪರ್ಧೆಯನ್ನು 2016 ರಲ್ಲಿ ನಡೆಸಲಾಯಿತು, ಟಾಟಾ ಫುಟ್ಬಾಲ್ ಅಕಾಡೆಮಿ ಫುಟ್ಬಾಲ್ ಪ್ರಶಸ್ತಿಯನ್ನು ಗೆದ್ದುಕೊಂಡಿತು.
- **ಸುಬ್ರೊತೊ ಕಪ್**: ಸುಬ್ರೊತೊ ಕಪ್ ಫುಟ್ಬಾಲ್ ಪಂದ್ಯಾವಳಿ ಏರ್ ಮಾರ್ಷಲ್ ಸುಬ್ರೊಟೊ ಮುಖರ್ಜಿ ಹೆಸರಿನ ಅಂತರ ಶಾಲಾ ಫುಟ್ಬಾಲ್ ಪಂದ್ಯಾವಳಿಯಾಗಿದೆ. ಇದು 1960ರಲ್ಲಿ ಪ್ರಾರಂಭವಾಯಿತು. ನೇಪಾಳ ಮತ್ತು ಅಫ್ಘಾನಿಸ್ತಾನದ ಶಾಲೆಗಳನ್ನು ಒಳಗೊಂಡಂತೆ ಈ ಸ್ಪರ್ಧೆಯಲ್ಲಿ 50ಕ್ಕೂ ಹೆಚ್ಚು ಶಾಲಾ ತಂಡಗಳು ಭಾಗವಹಿಸುತ್ತವೆ. ಭಾರತದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಬೆಂಬಲಿತವಾಗಿರುವ ಭಾರತೀಯ ವಾಯುಪಡೆಯಿಂದ ಇದನ್ನು ನಡೆಸಲಾಗುತ್ತದೆ. ಪಶ್ಚಿಮ ಬಂಗಾಳದ ಮಧ್ಯಮಗ್ರಾಮ್ ಹೈಸ್ಕೂಲ್ ಈ ಪಂದ್ಯಾವಳಿಯನ್ನು ಏಳು ಬಾರಿ ಗೆದ್ದುಕೊಂಡಿದೆ.
- **ಸಂತೋಷ್ ಕಪ್**: 194 ರಲ್ಲಿ ಪ್ರಾರಂಭವಾದ ಸಂತೋಷ್ ಟ್ರೋಫಿ ರಾಜ್ಯಗಳು ಮತ್ತು ಸರ್ಕಾರಿ ಸಂಸ್ಥೆಗಳ ನಡುವೆ ವಾರ್ಷಿಕವಾಗಿ ನಡೆಯುವ ಭಾರತೀಯ ಫುಟ್ಬಾಲ್ ಪಂದ್ಯಾವಳಿಯಾಗಿದೆ. ಸಂತೋಷ್‌ದ ಮಹಾರಾಜ ಸರ್ ಮನ್ಮಥಾ ನಾಥ್ ರಾಯ್ ಚೌಧರಿ ಅವರ ಹೆಸರನ್ನು ಟೂರ್ನಿಗೆ

ಇಡಲಾಗಿದೆ. ಮೊದಲ ಪ್ರಶಸ್ತಿಯನ್ನು ಪಶ್ಚಿಮ ಬಂಗಾಳ ಗೆದ್ದುಕೊಂಡಿತು. ಪಂದ್ಯಾವಳಿಯಲ್ಲಿ ಪಶ್ಚಿಮ ಬಂಗಾಳವು ಅತ್ಯಂತ ಯಶಸ್ವೀ ತಂಡವಾಗಿದ್ದು, 32 ಪ್ರಶಸ್ತಿಯನ್ನು ಗೆದ್ದುಕೊಂಡಿದೆ.

- **ಇಂಡಿಯನ್ ಸೂಪರ್ ಲೀಗ್**: ಇಂಡಿಯನ್ ಸೂಪರ್ ಲೀಗ್ (ಐಎಸ್ಎಲ್) ಪುರುಷರ ವೃತ್ತಿಪರ ಫುಟ್ ಬಾಲ್ ಲೀಗ್ ಆಗಿದೆ. 2013 ರಿಂದ ಆಯೋಜಿಸಲಾಗುತ್ತಿದ್ದು, ಐಪಿಎಲ್ ನಂತೆ ಫ್ರ್ಯಾಂಚೈಸ್ ಮಾದರಿಯನ್ನು ಆಧರಿಸಿದೆ. ಪ್ರಸ್ತುತ, ISLನಲ್ಲಿ ಎಂಟು ತಂಡಗಳಿವೆ. ಅಟ್ಲೆಟಿಕೊ ಡೆ ಕೋಲ್ಕತಾ; ಚೆನ್ನೈಯನ್ ಎಫ್ಸಿ; ದೆಹಲಿ ಡೈನಮೋಸ್; ಗೋವಾ; ಕೇರಳ ಬ್ಲಾಸ್ಟರ್ಸ್; ಮುಂಬೈ ನಗರ; ಉತ್ತರ ಪೂರ್ವ ಯುನೈಟೆಡ್ ಮತ್ತು ಪುಣೆ ನಗರ. ಇಲ್ಲಿಯವರೆಗೆ ಮೂರು ಕ್ರೀಡಾಋತುಗಳಲ್ಲಿ ಅಟ್ಲೆಟಿಕೊ ಡೆ ಕೊಲ್ಕತ್ತಾ (2014 ಮತ್ತು 2016) ಎರಡು ಪಂದ್ಯಗಳನ್ನು ಗೆದ್ದುಕೊಂಡಿದೆ, ಒಂದು ಋತುವಿನಲ್ಲಿ ಚೆನ್ನೈಯಿನ್ ಎಫ್ಸಿ (2015) ಪ್ರಶಸ್ತಿ ಗೆದ್ದಿದೆ.
- **ಐ-ಲೀಗ್:** ಐ-ಲೀಗ್ (ಅಧಿಕೃತವಾಗಿ ಹೀರೋ ಐ ಲೀಗ್) ಭಾರತದಲ್ಲಿನ ಫುಟ್ಬಾಲ್ನಲ್ಲಿ ಮತ್ತೊಂದು ವೃತ್ತಿಪರ ಲೀಗ್ ಆಗಿದೆ. 2007 ರಲ್ಲಿ ಒಎನ್ಜಿಸಿ ಐ-ಲೀಗ್ ಆಗಿ ಮತ್ತು ನ್ಯಾಷನಲ್ ಫುಟ್ಬಾಲ್ ಲೀಗ್ನ ಬದಲಾಗಿ ಇದನ್ನು ಪ್ರಾರಂಭಿಸಲಾಯಿತು. ಇಲ್ಲಿಯವರೆಗೆ, ಈ ಲೀಗ್ನ ಒಂಬತ್ತು ಅವಧಿಗಳನ್ನು ನಡೆಸಲಾಗಿದೆ. ಇದು 10 ಫುಟ್ಬಾಲ್ ಕ್ಲಬ್ಗಳಿಂದ ಸ್ಪರ್ಧಿಸಲ್ಪಡುತ್ತದೆ. ಐಜಾಲ್, ಬೆಂಗಳೂರು ಎಫ್ಸಿ, ಚೆನ್ನೈ ಸಿಟಿ, ಚರ್ಚಿಲ್ ಬ್ರದರ್ಸ್, ಡಿಎಸ್ಕೆ ಶಿವಜಿಯನ್ನರು, ಈಸ್ಟ್ ಬಂಗಾಳ, ಮಿನರ್ವಾ ಪಂಜಾಬ್, ಮೋಹನ್ ಬಗಾನ್, ಮುಂಬೈ ಮತ್ತು ಶಿಲ್ಲಾಂಗ್ ಲಾಜೊಂಗ್ ಈ 10 ಕ್ಲಬ್ಗಳಾಗಿವೆ.

www.karunaduexams.com

# ಇತರೆ: ಚೂರು ಪಾರು

- **ಐಜ್ವಾಲ್ ತಂಡಕ್ಕೆ ಐಲೀಗ್ ಪುಟ್ಬಾಲ್ ಕಿರೀಟ:** ಪ್ರತಿಷ್ಠಿತ ಐಲೀಗ್ ಫುಟ್‌ಬಾಲ್ ಟೂರ್ನಿಯ ಕಿರೀಟವನ್ನು ಐಜ್ವಾಲ್ ತಂಡ ಮುಡಿಗೇರಿಸಿಕೊಂಡಿದೆ. ಶಿಲ್ಲಾಂಗ್ ಲಜಾಂಗ್ ವಿರುದ್ಧದ ಕೊನೆಯ ಪಂದ್ಯದಲ್ಲಿ ಐಜ್ವಾಲ್ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತು. ಆ ಮೂಲಕ ಐಲೀಗ್ ಪುಟ್ಬಾಲ್ ಕಿರೀಟವನ್ನು ಗೆದ್ದುಕೊಂಡ ಈಶಾನ್ಯ ಭಾಗದ ಮೊದಲ ಪುಟ್ಬಾಲ್ ತಂಡ ಇದಾಗಿದೆ.

- **ತಲ್ಲಹಸ್ಸಿ ಚಾಲೆಂಜರ್ ಟೆನಿಸ್ ಟೂರ್ನಿ ಫೇಸ್ ಜೋಡಿಗೆ ಪ್ರಶಸ್ತಿ**: ಭಾರತದ ಲಿಯಾಂಡರ್ ಪೇಸ್ ಹಾಗೂ ಅಮೆರಿಕದ ಸ್ಕಾಟ್ ಲಿಪ್ಸಿಕಿ ಅವರ ಜೋಡಿಯು ತಲ್ಲಹಸ್ಸಿ ಚಾಲೆಂಜರ್ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿತು. ಪೇಸ್ ಈ ಋತುವಿನಲ್ಲಿ ಗೆದ್ದುಕೊಂಡ ಎರಡನೇ ಚಾಲೆಂಜರ್ ಪ್ರಶಸ್ತಿ ಇದಾಗಿದೆ. ಈ ಮೊದಲು ಅದಿಲ್ ಶಮಸ್ ಡಿನ್ ಅವರೊಂದಿಗೆ ಲಿಯೊನ್ ಚಾಲೆಂಜರ್‌ನಲ್ಲಿ ಪ್ರಶಸ್ತಿ ಜಯಿಸಿದ್ದರು. ಅಗ್ರಗಣ್ಯ ಜೋಡಿ ಪೇಸ್ ಹಾಗೂ ಸ್ಕಾಟ್ ಪುರುಷರ ಡಬಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ 4–6, 7–6, 10–7ರಲ್ಲಿ ಅರ್ಜೆಂಟೀನಾದ ಮೂರನೇ ಶ್ರೇಯಾಂಕದ ಲಿಯನಾರ್ಡೊ ಮಯರ್ ಮತ್ತು ಮ್ಯಾಕ್ಸಿಮೊ ಗೊಂಜಲೆಜ್ ಅವರನ್ನು ಮಣಿಸಿದೆ.
- **ಬಿಡಿಎ ಗೆ ಹುಡ್ಕೊ ಪ್ರಶಸ್ತಿ:** ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ನಿಗಮ ನೀಡುವ ಹುಡ್ಕೊ ಪ್ರಶಸ್ತಿಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಲಭಿಸಿದೆ. ನವದೆಹಲಿಯಲ್ಲಿ ನಡೆದ ನಿಗಮದ 47ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಬಿಡಿಎ ಆಯುಕ್ತ ರಾಕೇಶ್ ಸಿಂಗ್ ಹಾಗೂ ಎಂಜಿನಿಯರಿಂಗ್ ಅಧಿಕಾರಿ ಎನ್.ಜಿ.ಗೌಡಯ್ಯ ಅವರು ಕೇಂದ್ರ ನಗರಾಭಿವೃದ್ಧಿ ಸಚಿವ ವೆಂಕಯ್ಯ ನಾಯ್ಡು ಅವರಿಂದ ಪ್ರಶಸ್ತಿ ಸ್ವೀಕರಿಸಿದರು.

- **ಸುನೀಲ್ ಚೆಟ್ರಿಗೆ ಐಲೀಗ್ ಉತ್ತಮ ಆಟಗಾರ ಪ್ರಶಸ್ತಿ**: ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡದ ನಾಯಕ ಸುನಿಲ್ ಚೆಟ್ರಿ ಈ ಬಾರಿಯ ಐಲೀಗ್‌ನಲ್ಲಿ 'ಉತ್ತಮ ಆಟಗಾರ' ಪ್ರಶಸ್ತಿ ಪಡೆದಿದ್ದಾರೆ.ಐಲೀಗ್ ಫುಟ್‌ಬಾಲ್ ಟೂರ್ನಿ ಯಲ್ಲಿ ಚೆಟ್ರಿ ಒಟ್ಟು ಏಳು ಗೋಲು ಗಳನ್ನು ದಾಖಲಿಸಿದ್ದರು. ಮೋಹನ್ ಬಾಗನ್ ತಂಡದ ದೇವಜಿತ್ ಮಜುಮ್‌ದಾರ್‌ಗೆ 'ಶ್ರೇಷ್ಠ ಗೋಲ್ ಕೀಪರ್' ಪ್ರಶಸ್ತಿ ಲಭಿಸಿದೆ. ಬಾಗನ್ ತಂಡದ ಅನಾಸ್ ಎದತೋಡಿಕಾ 'ಉತ್ತಮ ಡಿಫೆಂಡರ್' ಹಾಗೂ ಐಜ್ವಾಲ್ ಎಫ್‌ಸಿ ಆಟಗಾರ ಅಲ್ಫ್ರೆಡ್ ಕೆಮಹ್ ಜರಾಯನ್ ' ಮಿಡ್‌ಫೀಲ್ಡರ್' ಪ್ರಶಸ್ತಿಗಳನ್ನು ಪಡೆದಿದ್ದಾರೆ. 'ಉತ್ತಮ ಸ್ಟ್ರೈಕರ್' ಪ್ರಶಸ್ತಿ ಶಿಲ್ಲಾಂಗ್ ಲಜಾಂಗ್ ತಂಡದ ಪೆರಿಕ್ ದಿಪಿಂದಾ ಡೆಕಾ ಅವರ ಪಾಲಾಗಿದೆ.

- **'ದಿ ಒನ್ ರುಪೀ ಟ್ರಿಕ್' ಸರಣಿ  ವರದಿಗೆ 'ತನಿಖಾ ಪತ್ರಿಕೋದ್ಯಮ–2016' ಪ್ರಶಸ್ತಿ:** ಈ ಸಾಲಿನ ಏಷ್ಯನ್ ಕಾಲೇಜ್ ಆಫ್ ಜರ್ನಲಿಸಂ (ಎಸಿಜೆ) ಪ್ರಶಸ್ತಿಗಳು ಪ್ರಕಟವಾಗಿದ್ದು, ದಿ ಇಂಡಿಯನ್ ಎಕ್ಸ್‌ಪ್ರೆಸ್‌ನ ಪತ್ರಕರ್ತರಾದ ಶ್ಯಾಮಲಾಲ್ ಯಾದವ್ ಮತ್ತು ಜಯ್ ಮಜುಮ್‌ದಾರ್ ಅವರು, 'ತನಿಖಾ ಪತ್ರಿಕೋದ್ಯಮ–2016' ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. 'ಜನಧನ' ಯೋಜನೆಯ ಫಲಾನುಭವಿಗಳಿಗೆ ಬ್ಯಾಂಕ್ ಅಧಿಕಾರಿಗಳು ನೀಡುತ್ತಿದ್ದ ಕಿರುಕುಳ ಸಂಬಂಧ  ಈ ಇಬ್ಬರೂ ಮಾಡಿದ್ದ  'ದಿ ಒನ್ ರುಪೀ ಟ್ರಿಕ್' ಸರಣಿ ವರದಿಗಳಿಗೆ ಈ ಪ್ರಶಸ್ತಿ ಸಂದಿದೆ. ಪ್ರಶಸ್ತಿಯು ಪ್ರಶಸ್ತಿ ಪತ್ರ ಮತ್ತು ₹ 2 ಲಕ್ಷ ನಗದು ಒಳಗೊಂಡಿದೆ.

- **ಕರ್ಣಾಟಕ ಬ್ಯಾಂಕಿಗೆ ಪ್ರಶಸ್ತಿ:** ಮಾನವರಹಿತ ವ್ಯವಸ್ಥೆಯಡಿ ಹಣಕಾಸು ವಹಿವಾಟಿಗೆ ನಡೆಸುವಲ್ಲಿ ಕರ್ಣಾಟಕ ಬ್ಯಾಂಕ್‌ಗೆ ಮೆಲ್ಲೊನ್‌ನ ಬ್ಯಾಂಕ್ ಆಫ್ ನ್ಯೂಯಾರ್ಕ್ ವತಿಯಿಂದ ನೀಡುವ ಸ್ಟ್ರೇಟ್ ಥ್ರೂ ಪ್ರೊಸೆಸ್ (ಎಸ್‌ಟಿಪಿ) ಪ್ರಶಸ್ತಿ ಲಭಿಸಿದೆ.  ಪ್ರತಿ ವರ್ಷ ತನ್ನ ಗ್ರಾಹಕ ಆರ್ಥಿಕ ಸಂಸ್ಥೆಗಳು ನಡೆಸುವ ಮಾನವರಹಿತ ವಹಿವಾಟಿನ ದರವನ್ನು ಬ್ಯಾಂಕ್ ಆಫ್ ನ್ಯೂಯಾರ್ಕ್ ಲೆಕ್ಕ ಹಾಕುತ್ತಿದೆ. ಇದರ ಅಂಗವಾಗಿ 2016 ರಲ್ಲಿ ಕರ್ಣಾಟಕ ಬ್ಯಾಂಕ್ ನಡೆಸಿದ ಮಾನವರಹಿತ ಆರ್ಥಿಕ ವಹಿವಾಟು ದರ ಶೇ 93.23 ರಷ್ಟಿದ್ದು, ಎರಡನೇ ಅತಿ ಹೆಚ್ಚು ಅಂಕ ಪಡೆದ ಬ್ಯಾಂಕ್ ಎಂಬ ಹೆಗ್ಗಳಿಕೆ ಪಡೆದಿದೆ.

- **ಸಾಕ್ಷ್ಯಚಿತ್ರಗಳ ನಿರ್ದೇಶಕ"ಚಲಂಬೆನ್ನೂರ್‌ಕರ್"ನಿಧನ:** ಸಾಕ್ಷ್ಯಚಿತ್ರಗಳ ನಿರ್ದೇಶಕ ಚಲಂ ಬೆನ್ನೂರ್‌ಕರ್ (62) ನಿಧನರಾಗಿದ್ದಾರೆ. ವಕಾಶಿಯ ಬೆಂಕಿಕಡ್ಡಿ ಕಾರ್ಖಾನೆಯಲ್ಲಿ ದುಡಿಯುತ್ತಿದ್ದ  ಬಾಲಕಾರ್ಮಿಕರ ಬದುಕಿನ ಕುರಿತು ಅವರು 'ಕುಟ್ಟಿ ಜಪಾನಿನ್ ಕುಳಂದೈಗಳ್' (Children of Mini Japan) ಸಾಕ್ಷ್ಯಚಿತ್ರ ನಿರ್ಮಿಸಿದ್ದರು. ಇದು ಹಲವು ಪ್ರಶಸ್ತಿಗಳನ್ನು ಗಳಿಸಿತ್ತು.ತೃತೀಯ ಲಿಂಗಿಗಳ ಬದುಕಿನ ಕುರಿತ 'ಆಲ್ ಅಬೌಟ್ ಅವರ್ ಫಾಮಿಲಾ' ಸಾಕ್ಷ್ಯಚಿತ್ರ ಅವರಿಗೆ ಖ್ಯಾತಿ ತಂದು ಕೊಟ್ಟಿತ್ತು. ಮಹಿಳೆಯರ ಸಮಸ್ಯೆಗಳ ಕುರಿತಾಗಿಯೇ 1970ರಲ್ಲಿ ಬೆಂಗಳೂರು ಫಿಲ್ಮ್ ಸೊಸೈಟಿ ಸಹಯೋಗದಲ್ಲಿ ಚಿತ್ರೋತ್ಸವ ಆಯೋಜಿಸಿದ್ದರು.
- **ಎಮ್ಮ್ಯಾನುಯಲ್ ಮ್ಯಾಕ್ರನ್ ಫ್ರಾನ್ಸ್‌ನ ಅಧ್ಯಕ್ಷ:** ಫ್ರಾನ್ಸ್‌ನ ಅಧ್ಯಕ್ಷೀಯ ಚುನಾವಣೆಯಲ್ಲಿ 39ವರ್ಷದ ಎಮ್ಮ್ಯಾನುಯಲ್ ಮ್ಯಾಕ್ರನ್ ಆಯ್ಕೆಯಾಗಿದ್ದು, ದೇಶದ ಅತ್ಯಂತ ಕಿರಿಯ ಅಧ್ಯಕ್ಷರಾಗಿ ರಾಜಕೀಯದಲ್ಲಿ ಇತಿಹಾಸ ಸೃಷ್ಟಿಸಿದ್ದಾರೆ. ಎಮ್ಮ್ಯಾನುಯಲ್  ಶೇ 65.1 ಮತ್ತು ಮೆಲೀನ್ ಲೇ ಪೆನ್  ಶೇ 34.9ರಷ್ಟು ಮತ ಗಳಿಸಿದ್ದಾರೆ.
- **ಕಿರಣ್ ಮಜುಮ್‌ದಾರ್ ಷಾ ಅವರಿಗೆ AWSM Excellence ಪ್ರಶಸ್ತಿ**: ಬಯೋಕಾನ್ ಲಿಮಿಟೆಡ್‌ನ ಮುಖ್ಯಸ್ಥೆ ಕಿರಣ್ ಮಜುಮ್‌ದಾರ್ ಷಾ ಅವರಿಗೆ ಫೀನ್‌ಸ್ಟೀನ್ ಇನ್‌ಸ್ಟಿಟ್ಯೂಟ್ ಫಾರ್ ಮೆಡಿಕಲ್ ರಿಸರ್ಚ್‌ನ 'ವಿಜ್ಞಾನ ಮತ್ತು ಔಷಧೀಯ ಕ್ಷೇತ್ರದ ಮುಂಚೂಣಿ ಮಹಿಳೆ'

(**AWSM Excellence** 2017) ಪುರಸ್ಕಾರ ದೊರೆತಿದೆ. ನ್ಯೂಯಾರ್ಕ್‌ನಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಅವರು ಪುರಸ್ಕಾರ ಸ್ವೀಕರಿಸಿದರು.

- **ಸೊಹೈಲ್ ಮಹ್ಮೂದ್ ಭಾರತದಲ್ಲಿನ ಪಾಕಿಸ್ತಾನದ ನೂತನ ಹೈಕಮೀಷನರ್**: ಹಿರಿಯ ರಾಜತಾಂತ್ರಿಕ ಸೊಹೈಲ್ ಮಹ್ಮೂದ್ ಅವರನ್ನು ಭಾರತದಲ್ಲಿನ ಪಾಕಿಸ್ತಾನದ ನೂತನ ಹೈಕಮಿಷನರ್ ಆಗಿ ನೇಮಿಸಲಾಗಿದೆ. ಮಹ್ಮೂದ್ ಪ್ರಸ್ತುತ ಟರ್ಕಿಯಲ್ಲಿ ರಾಯಭಾರಿಯಾಗಿದ್ದಾರೆ. ಈಗಿರುವ ಹೈಕಮಿಷನರ್ ಅಬ್ದುಲ್ ಬಾಸಿತ್ ಮೂರು ವರ್ಷಗಳ ಅವಧಿ ಪೂರೈಸಿರುವುದರಿಂದ ಹೊಸ ನೇಮಕ ಮಾಡಲಾಗಿದೆ.
- **ವಿಜ್ಞಾನಿ ಯು.ಆರ್. ರಾವ್ ಅವರಿಗೆ "ಭಾಸ್ಕರ ಪ್ರಶಸ್ತಿ":** ಸಿಂದಗಿಯ ಸಾರಂಗ ಮಠ–ಗಚ್ಚಿನ ಮಠದ ಚೆನ್ನವೀರ ಸ್ವಾಮೀಜಿ ಪ್ರತಿಷ್ಠಾನ ನೀಡುವ ಪ್ರತಿಷ್ಠಿತ 'ಭಾಸ್ಕರ ಪ್ರಶಸ್ತಿ'ಗೆ ಬಾಹ್ಯಾಕಾಶ ವಿಜ್ಞಾನಿ ಪ್ರೊ.ಯು.ಆರ್.ರಾವ್ ಅವರನ್ನು ಆಯ್ಕೆ ಮಾಡಲಾಗಿದೆ.'ಈ ಪ್ರಶಸ್ತಿಯು ₹1 ಲಕ್ಷ ನಗದು, ಬೆಳ್ಳಿಯ ಪದಕ, ಸ್ಮರಣಿಕೆ ಒಳಗೊಂಡಿದೆ.
- **ಜೂಲನ್ ಗೋಸ್ವಾಮಿ ವಿಶ್ವದಾಖಲೆ**: ಭಾರತ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿ ಜೂಲನ್ ಗೋಸ್ವಾಮಿ ಅವರು ಅಂತರರಾಷ್ಟ್ರೀಯ ಏಕದಿನ ಮಹಿಳಾ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ವಿಕೆಟ್ ಪಡೆದ ವಿಶ್ವದಾಖಲೆ ನಿರ್ಮಿಸಿದರು. ದಕ್ಷಿಣ ಆಫ್ರಿಕಾ ವಿರುದ್ಧದ ಪಂದ್ಯದಲ್ಲಿ ಅವರು ಮೂರು ವಿಕೆಟ್‌ಗಳನ್ನು ಪಡೆದು ಒಟ್ಟು ವಿಕೆಟ್ ಗಳಿಕೆಯ ಸಾಧನೆಯನ್ನು 181ಕ್ಕೇರಿಸಿದರು. ಹತ್ತು ವರ್ಷಗಳ ಹಿಂದೆ ಆಸ್ಟ್ರೇಲಿಯಾದ ಆಟಗಾರ್ತಿ ಕ್ಯಾಥರಿನ್ ಫಿಟ್‌ಪ್ಯಾಟ್ರಿಕ್ ಅವರು 103 ಪಂದ್ಯಗಳಲ್ಲಿ 180 ವಿಕೆಟ್‌ಗಳನ್ನು ಗಳಿಸಿದ್ದ ದಾಖಲೆಯನ್ನು ಜೂಲನ್ ಅಳಿಸಿಹಾಕಿದರು. ಅವರು 153 ಪಂದ್ಯಗಳಲ್ಲಿ ಈ ಸಾಧನೆ ಮಾಡಿದರು.
- **ಕೋಲ್ಹಾಪುರದಲ್ಲಿ ದೇಶದ ಎರಡನೇ ಅತಿ ದೊಡ್ಡ ಧ್ವಜ ಕಂಬ:** ದೇಶದ ಎರಡನೇ ಎತ್ತರದ ಧ್ವಜ ಕಂಬವನ್ನು ಕೊಲ್ಹಾಪುರದಲ್ಲಿ ಉದ್ಘಾಟಿಸಲಾಗಿದೆ. ಕೊಲ್ಹಾಪುರ ಸೌಂದರ್ಯವರ್ಧನೆಯ ಯೋಜನೆಯ ಭಾಗವಾಗಿ ಪೋಲಿಸ್ ತರಬೇತಿ ಅಕಾಡೆಮಿ ತೋಟದಲ್ಲಿ 303 ಅಡಿ ಎತ್ತರದ ಕಂಬವನ್ನು ನಿರ್ಮಿಸಲಾಗಿದೆ. ಈ ಕಂಬ 90 ಮೀಟರ್ ಎತ್ತರ ಮತ್ತು 60 ಮೀಟರ್ ಅಗಲ ಮತ್ತು 24 ಟನ್ ತೂಗುತ್ತದೆ. ರಾಜ್ಯದ ಮಹಾರಾಷ್ಟ್ರ ದಿನ್ ಆಚರಣೆಯ ಅಂಗವಾಗಿ 5400 ಸೆಕೆಂಡು ಅಡಿ ರಾಷ್ಟ್ರೀಯ ಧ್ವಜವನ್ನು ತೆರೆದ ಮೂಲಕ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಈ ಧ್ವಜ ಕಂಬವನ್ನು ಉದ್ಘಾಟಿಸಿದರು. ದೇಶದ ಅತಿದೊಡ್ಡ ಧ್ವಜ ಕಂಬವನ್ನು ಇಂಡೋ-ಪಾಕ್ ಅಟಾರಿ ಬಾರ್ಡರ್‌ನಲ್ಲಿ ಸ್ಥಾಪಿಸಲಾಗಿದೆ ಮತ್ತು 360 ಅಡಿ ಎತ್ತರವಿದೆ.

www.karunaduexams.com

- **ಅಪಘಾತದಿಂದ ಸಾವು ರಾಜ್ಯಕ್ಕೆ 4ನೇ ಸ್ಥಾನ:** ದೇಶದಲ್ಲಿ ಪ್ರತಿವರ್ಷ ನಾಲ್ಕೂವರೆ ಲಕ್ಷ ಅಪಘಾತಗಳು ಸಂಭವಿಸುತ್ತಿದ್ದು, ಒಂದೂವರೆ ಲಕ್ಷ ಮಂದಿ  ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಅಪಘಾತಗಳಿಂದ ಅತಿ ಹೆಚ್ಚು ಮಂದಿ ಬಲಿಯಾಗುತ್ತಿರುವ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ ನಾಲ್ಕನೇ ಸ್ಥಾನದಲ್ಲಿದೆ. 2015–16ರಲ್ಲಿ ಉತ್ತರಪ್ರದೇಶದಲ್ಲಿ 18,407 ಮಂದಿ ಅಪಘಾತಗಳಿಂದ ಸಾವನ್ನಪ್ಪಿದ್ದಾರೆ. ಅಂತೆಯೇ ತಮಿಳುನಾಡು (15,642), ಮಹಾರಾಷ್ಟ್ರ (13,685), ಕರ್ನಾಟಕ (10,857) ಹಾಗೂ ರಾಜಸ್ಥಾನ (10,510) ರಾಜ್ಯಗಳಲ್ಲೂ ಅಪಘಾತಗಳಿಗೆ ಬಲಿಯಾದವರ ಸಂಖ್ಯೆ ಹೆಚ್ಚಿದೆ ಎಂದು ವರದಿಯಲ್ಲಿದೆ.
- **ಟ್ವಿಟರ್ ಭಾರತದ ನಿರ್ದೇಶಕರಾಗಿ ತರಣ್ ಜೀತ್ ಸಿಂಗ್:** ತರಣ್ ಜೀತ್ ಸಿಂಗ್ ಅವರನ್ನು ಟ್ವಿಟರ್ ನ ಭಾರತದ ನಿರ್ದೇಶಕರಾಗಿ ನೇಮಕ ಮಾಡಲಾಗಿದೆ. ಈ ಹಿಂದೆ ಸಿಂಗ್ ಅವರು ಟ್ವಿಟರ್ ಭಾರತದ ಜಾಹೀರಾತು ಉಸ್ತುವಾರಿ ನೋಡುಕೊಳ್ಳುತ್ತಿದ್ದರು.
- **ಏಷ್ಯನ್ ಕುಸ್ತಿ ಚಾಂಪಿಯನ್ ಷಿಪ್ ಬಜರಂಗ್ ಪೂನಿಯಾಗೆ ಚಿನ್ನ:** ಜರಂಗ್ ಪೂನಿಯಾ ಏಷ್ಯನ್ ಕುಸ್ತಿ ಚಾಂಪಿಯನ್ ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡರು. ಆ ಮೂಲಕ ಭಾರತಕ್ಕೆ ಮೊದಲ ಚಿನ್ನದ ಪದಕ ತಂದುಕೊಟ್ಟಿದ್ದಾರೆ.ಪುರುಷರ 65ಕೆ.ಜಿ ಫ್ರೀಸ್ಟೈಲ್ ವಿಭಾಗದ ಫೈನಲ್ ಪಂದ್ಯದಲ್ಲಿ ಬಜರಂಗ್ 6–2ರಲ್ಲಿ ಕೊರಿಯಾದ ಸೆವುಂಗ್ ಚಲ್ ಲೀ ಅವರನ್ನು ಮಣಿಸುವ ಮೂಲಕ ಚಿನ್ನಕ್ಕೆ ಕೊರಳೊಡ್ಡಿದರು. ಇದೇ ವೇಳೆ ಮಹಿಳೆಯರ 58ಕೆ.ಜಿ ವಿಭಾಗದ ಫೈನಲ್‌ನಲ್ಲಿ ಸರಿತಾ 0–6ರಲ್ಲಿ ಕಿರ್ಗಿಸ್ತಾನದ ಅಸುಲು ತನೆಬೆಕೊವಾ ಎದುರು ಸೋಲು ಕಂಡು ಬೆಳ್ಳಿಗೆ ತೃಪ್ತಿಪಟ್ಟರು.
- **ವಿನಯ್ ಮೋಹನ್ ಭಾರತದ ಫ್ರಾನ್ಸ್ ರಾಯಭಾರಿ:** ವಿನಯ್ ಮೋಹನ್ ಕ್ವಾತ್ರವನ್ನು ಫ್ರಾನ್ಸ್ಗೆ ಭಾರತದ ಮುಂದಿನ ರಾಯಭಾರಿಯಾಗಿ ನೇಮಕ ಮಾಡಲಾಗಿದೆ. ಕ್ವಾತ್ರ ಅವರು ಪ್ರಸ್ತುತ ಪ್ರಧಾನಿ ಕಚೇರಿಯ ಜಂಟಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶೀಘ್ರದಲ್ಲೇ ನಿವೃತ್ತಿಯಾಗಲಿರುವ ಮೋಹನ್ ಕುಮಾರ್ ಅವರ ಉತ್ತರಾಧಿಕಾರಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಕ್ವಾತ್ರ ಚೀನಾ ಮತ್ತು ಯುಎಸ್ನಲ್ಲಿರುವ ಭಾರತೀಯ ರಾಜತಾಂತ್ರಿಕ ಕಾರ್ಯಾಚರಣೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ ಮತ್ತು ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐಎಲ್‌ಒ) ಮತ್ತು ವಿಶ್ವ ಆರೋಗ್ಯ ಸಂಸ್ಥೆ (WHO) ನಂತಹ ವಿಶ್ವಸಂಸ್ಥೆಯ ಸಂಸ್ಥೆಗಳೊಂದಿಗೆ ಅನುಭವವನ್ನು ಹೊಂದಿದ್ದಾರೆ.
- **ಸ್ಪ್ಯಾನಿಷ್ ಗ್ರ್ಯಾನ್ ಪ್ರಿ ಫಾರ್ಮುಲಾ –1 ರೇಸ್ ಲೂಯಿಸ್ ಹ್ಯಾಮಿಲ್ಟನ್ ಗೆ ಪ್ರಶಸ್ತಿ:** ಸ್ಪ್ಯಾನಿಷ್ ಗ್ರ್ಯಾನ್ ಪ್ರಿ ಫಾರ್ಮುಲಾ –1 ರೇಸ್‌ನಲ್ಲಿ ಲೂಯಿಸ್ ಹ್ಯಾಮಿಲ್ಟನ್ ಚಾಂಪಿಯನ್ ಆಗಿದ್ದಾರೆ.ಈ ಮೂಲಕ ವೃತ್ತಿಬದುಕಿನ 55ನೇ ಪ್ರಶಸ್ತಿ ಎತ್ತಿಹಿಡಿದರು. ಹ್ಯಾಮಿಲ್ಟನ್ ಈ ಋತುವಿನಲ್ಲಿ ಗೆದ್ದ ಎರಡನೇ ಟ್ರೋಫಿ ಇದಾಗಿದೆ.

www.karunaduexams.com

- **ಟೆನ್ನಿಸ್ ಶ್ರೇಯಾಂಕ ಜರ್ಮನಿಯ ಏಂಜಲಿಕ್ ಕೆರ್ಬರ್ ಮತ್ತು ಬ್ರಿಟನ್ ಆ್ಯಂಡಿ ಮರ್ರೆಗೆ ಮೊದಲ ಸ್ಥಾನ**: ಜರ್ಮನಿಯ ಏಂಜಲಿಕ್ ಕೆರ್ಬರ್ ವಿಶ್ವ ಟೆನಿಸ್ ಶ್ರೇಯಾಂಕದಲ್ಲಿ ಅಗ್ರ ಸ್ಥಾನಕ್ಕೇರಿದ್ದಾರೆ. ಕೆರ್ಬರ್ 7.035 ಪಾಯಿಂಟ್ ಲಭಿಸಿದೆ. ಸೆರೆನಾ ವಿಲಿಯಮ್ಸ್‌ಗೆ ಎರಡನೇ ಸ್ಥಾನದಲ್ಲಿದ್ದು 6.110 ಪಾಯಿಂಟ್‌ಗಳು ಲಭಿಸಿದೆ. ಮೂರನೇ ಸ್ಥಾನದಲ್ಲಿರುವ ಚೆಕ್ ಗಣರಾಜ್ಯದ ಕ್ಯಾರೋಲಿನಾ ಪ್ಲಿಸ್ಕೊವಾ 6.104 ಪಾಯಿಂಟ್ ಗಳಿಸಿದ್ದಾರೆ. ಪುರುಷರ ವಿಭಾಗದಲ್ಲಿ ಬ್ರಿಟನ್‌ನ ಆ್ಯಂಡಿ ಮರ್ರೆ ಮೊದಲ ಸ್ಥಾನದಲ್ಲಿದ್ದಾರೆ. ಸ್ಪೇನ್‌ನ ರಾಫೆಲ್ ನಡಾಲ್ ನಾಲ್ಕನೇ ಸ್ಥಾನಕ್ಕೇರಿ ಗಮನ ಸೆಳೆದಿದ್ದಾರೆ. ರಾಫೆಲ್ ನಡಾಲ್ ಕಳೆದ ವರ್ಷದ ಅಕ್ಟೋಬರ್‌ನಲ್ಲಿ ನಾಲ್ಕನೇ ಸ್ಥಾನಕ್ಕೇರಿದ್ದರು.
- **ಗಿರಡ್ಡಿ ಗೋವಿಂದರಾಜಗೆ 2017ನೇ ಸಾಲಿನ ಸೇಡಿಯಾಪು ಪ್ರಶಸ್ತಿ:** ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ನೀಡುವ 2017ನೇ ಸಾಲಿನ ಸೇಡಿಯಾಪು ಪ್ರಶಸ್ತಿಗೆ ಸಾಹಿತಿ ಗಿರಡ್ಡಿ ಗೋವಿಂದರಾಜ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ₹10,000 ನಗದು, ಪ್ರಶಸ್ತಿ ಫಲಕವನ್ನು ಒಳಗೊಂಡಿದೆ.
- **ಲಾಟನ್ ನಗರದ ಮೇಯರ್ ಆಗಿ ಭಾರತದ ಫಿಲಿಪ್ ಆಯ್ಕೆ**: ಲಂಡನಿನ ಲಾಟನ್ ನಗರದ ಮೇಯರ್ ಆಗಿ ಭಾರತದ ಫಿಲಿಪ್ ಅಬ್ರಹಾಂ ಆಯ್ಕೆಯಾಗಿದ್ದಾರೆ. ಒಂದು ವರ್ಷದಿಂದ ಉಪ ಮೇಯರ್ ಆಗಿ ಅವರು ಕಾರ್ಯನಿರ್ವಹಿಸುತ್ತಿದ್ದರು. 2012ರಲ್ಲಿ ಪ್ರಥಮ ಬಾರಿಗೆ ಸದಸ್ಯರಾಗಿ ಆಯ್ಕೆಯಾಗಿದ್ದ ಅವರು 2016ರಲ್ಲಿ ಮರು ಆಯ್ಕೆಗೊಂಡಿದ್ದರು. ಕೇರಳದವರಾದ ಫಿಲಿಪ್ ಅವರು ಲಂಡನ್‌ನಲ್ಲಿರುವ ಭಾರತೀಯರ ವಿವಿಧ ಸಂಘಟನೆಗಳಲ್ಲಿ ಗುರುತಿಸಿಕೊಂಡಿದ್ದಾರೆ.
- **ರಾಫೆಲ್ ನಡಾಲ್ ತೆಕ್ಕೆಗೆ ಮ್ಯಾಡ್ರಿಡ್ ಓಪನ್ ಟೈಟಲ್:** ರಾಫೆಲ್ ನಡಾಲ್ ಅವರು ಡೊಮಿನಿಕ್ ಥೀಮ್ ಅವರನ್ನು ಸೋಲಿಸುವ ಮೂಲಕ ಐದನೇ ಬಾರಿಗೆ ಮ್ಯಾಡ್ರಿಡ್ ಓಪನ್ ಟೈಟಲ್ ಗೆದ್ದುಕೊಂಡರು. ಈ ವಿಜಯದೊಂದಿಗೆ, ಬಾರ್ಸಿಲೋನಾ ಓಪನ್ ಮತ್ತು ಮಾಂಟೆ ಕಾರ್ಲೋ ಮಾಸ್ಟರ್ಸ್ ನಂತರ ಮೂರು ನೇರ ಪ್ರಶಸ್ತಿಗಳನ್ನು ಗೆದ್ದಿದ್ದಾರೆ.
- **ಭಾರತದ ಉಕ್ಕು ಉದ್ಯಮಿ ಸಂಜೀವ ಗುಪ್ತ ಅವರಿಗೆ 'ಪ್ಲಾಟ್ಸ್ ಗ್ಲೋಬಲ್ ಮೆಟಲ್ಸ್ ಪ್ರಶಸ್ತಿ'**: ಭಾರತದ ಉಕ್ಕು ಉದ್ಯಮಿ ಸಂಜೀವ ಗುಪ್ತ ರವರಿಗೆ ಪ್ಲಾಟ್ಸ್ ಗ್ಲೋಬಲ್ ಮೆಟಲ್ಸ್ ಪ್ರಶಸ್ತಿ ಲಭಿಸಿದೆ. 'ಉಕ್ಕು ಉದ್ಯಮಕ್ಕೆ ನೀಡಿರುವ ಕೊಡುಗೆಗೆ ಈ ಪ್ರಶಸ್ತಿ ಲಭಿಸಿದೆ. ಭಾರತದ ಉಕ್ಕು ಉದ್ಯಮಿಗಳಾದ ಸಜ್ಜನ್ ಜಿಂದಾಲ್, ಪ್ರಕಾಶ್ ಕುಮಾರ್ ಸಿಂಗ್ ಅಂತಿಮ ಪಟ್ಟಿಯಲ್ಲಿದ್ದರು.
- **ಹಿರಿಯ ನಿರ್ದೇಶಕ "ಭಗವಾನ್"ರವರಿಗೆ ಡಾ.ರಾಜ್ ಕುಮಾರ್ ಸಂಸ್ಕೃತಿ ದತ್ತಿ ಪ್ರಶಸ್ತಿ:** **ಹಿ**ರಿಯ ಸಿನಿಮಾ ನಿರ್ದೇಶಕ ಎಸ್.ಕೆ.ಭಗವಾನ್ ಅವರಿಗೆ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನೀಡುವ ಡಾ.ರಾಜ್‌ಕುಮಾರ್ ಸಂಸ್ಕೃತಿ ದತ್ತಿ ಪ್ರಶಸ್ತಿಯನ್ನು ಹಿರಿಯ ನಟಿ

www.karunaduexams.com

ಜಯಂತಿ ಪ್ರದಾನ ಮಾಡಿದರು. ಪ್ರಶಸ್ತಿಯು ಸ್ಮರಣಿಕೆ, ಪ್ರಮಾಣಪತ್ರ ಹಾಗೂ ₹ 35 ಸಾವಿರ ನಗದು ಬಹುಮಾನವನ್ನು ಒಳಗೊಂಡಿದೆ.

- ಭಾರತದ ಸಿ.ಎ. ಭವಾನಿದೇವಿ ಅವರು ಐಸ್‌ಲ್ಯಾಂಡ್‌ನಲ್ಲಿ ನಡೆದ ಟರ್ನೊಯ್ ಸ್ಯಾಟಲೈಟ್ ಫೆನ್ಸಿಂಗ್(ಕತ್ತಿವರಸೆ) ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದರು. ಅಂತರರಾಷ್ಟ್ರೀಯ ಮಟ್ಟದಲ್ಲಿ ಈ ಸಾಧನೆ ಮಾಡಿದ ಭಾರತದ ಮೊದಲ ಕ್ರೀಡಾಪಟುವೆಂಬ ಹೆಗ್ಗಳಿಕೆಗೆ ಪಾತ್ರರಾದರು.
- ಸಿಂಗಾಪುರದಲ್ಲಿ ಆಪಲ್ ಸಂಸ್ಥೆ ತನ್ನ ಮಳಿಗೆಯನ್ನು ಆರಂಭಿಸಿದೆ. ಇದು ಆಗ್ನೇಯ ಏಷ್ಯಾದಲ್ಲಿ ಆಪಲ್ ಸಂಸ್ಥೆಯ ಮೊದಲ ಮಳಿಗೆ ಎನಿಸಿದೆ. ಆಪಲ್ ಈಗಾಗಲೇ ಸುಮಾರು 500 ಮಳಿಗೆಗಳನ್ನು ಜಾಗತಿಕವಾಗಿ ಹೊಂದಿದ್ದು, ದಿನನಿತ್ಯ ಒಂದು ದಶಲಕ್ಷಕ್ಕೂ ಹೆಚ್ಚು ಜನರು ಭೇಟಿ ನೀಡುತ್ತಿದ್ದಾರೆ. ಸಿಂಗಪೂರ್ ಹೊರತುಪಡಿಸಿ ಏಷ್ಯಾದಲ್ಲಿ ಹಾಂಗ್ ಕಾಂಗ್, ಚೀನಾ ಮತ್ತು ಜಪಾನಿನಲ್ಲಿ ಮಳಿಗೆಗಳನ್ನು ಹೊಂದಿದೆ.
- **ಮುಂಬೈ ಇಂಡಿಯನ್ಸ್ ಗೆ ಐಪಿಎಲ್ ಕಿರೀಟ:** ಇಂಡಿಯನ್ ಪ್ರೀಮಿಯರ್ ಲೀಗ್ ಹತ್ತನೇ ಆವೃತ್ತಿಯ ಫೈನಲ್‌ನಲ್ಲಿ ಮುಂಬೈ ಇಂಡಿಯನ್ಸ್ ಚಾಂಪಿಯನ್ ಪಟ್ಟ ಅಲಂಕರಿಸಿತು. ಮುಂಬೈ ತಂಡವು 1 ರನ್ ಅಂತರದಿಂದ ರೈಸಿಂಗ್ ಪುಣೆ ಸೂಪರ್‌ಜೈಂಟ್ ತಂಡವನ್ನು ಸೋಲಿಸಿತು. ಮುಂಬೈ ತಂಡಕ್ಕೆ ಇದು ಮೂರನೇ ಐಪಿಎಲ್ ಪ್ರಶಸ್ತಿ.
- **ಪಿ ವಿ ಸಿಂಧುಗೆ BWF ಆಯೋಗದ ಸದಸ್ಯತ್ವ:** ಭಾರತದ ಬ್ಯಾಡ್ಮಿಂಟನ್ ತಾರೆ ಪಿ.ವಿ.ಸಿಂಧು ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್‌ನ ಅಥ್ಲೀಟ್ ಗಳ ಆಯೋಗದ ಸದಸ್ಯೆಯಾಗಿ ಆಯ್ಕೆ ಯಾಗಿದ್ದಾರೆ.ನಾಲ್ಕು ಸ್ಥಾನಗಳಿಗಾಗಿ ಆಸ್ಟ್ರೇಲಿಯಾದ ಗೋಲ್ಡ್ ಕೋಸ್ಟ್‌ನಲ್ಲಿ ನಡೆದ ಮತದಾನದಲ್ಲಿ ಪಿ.ವಿ.ಸಿಂಧು 129 ಮತಗಳೊಂದಿಗೆ ಅಗ್ರ ಸ್ಥಾನ ಗಳಿಸಿದರು. ಜರ್ಮನಿಯ ಮಾರ್ಕ್ ಜ್ವಿಬ್ಲೆವರ್ (108 ಮತಗಳು), ಸ್ಕಾಟ್ಲೆಂಡ್‌ನ ಕ್ರಿಸ್ಟಿ ಗಿಲ್ಮರ್ (103) ಮತ್ತು ಲಿಥುವೇನಿಯಾದ ಅಕ್ವಿಲೆ ಸ್ಟಾಪುಸೈಟಿಟೆ (25) ಆಯ್ಕೆಯಾದ ಇತರ ಆಟಗಾರರು.
- **ಪುಷ್ಪ ಕಮಲ್ ದಹಲ್ ರಾಜೀನಾಮೆ:** ನೇಪಾಳ ಪ್ರಧಾನಿ ಪುಷ್ಪ ಕಮಲ್ ದಹಲ್ ಅವರು ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಆಡಳಿತಾರೂಢ ಮಿತ್ರಪಕ್ಷ ನೇಪಾಳಿ ಕಾಂಗ್ರೆಸ್ ಜತೆ ಮಾಡಿಕೊಂಡ ಒಪ್ಪಂದದ ಅನ್ವಯ ನೇಪಾಳದ ಪ್ರಧಾನಿ ಪುಷ್ಪ ಕಮಲ್ ದಹಲ್ ಪ್ರಚಂಡ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ನೇಪಾಳಿ ಕಾಂಗ್ರೆಸ್ ಪಕ್ಷದವರಿಗೆ ಹುದ್ದೆ ಹಸ್ತಾಂತರಿಸುವ ಸಲುವಾಗಿ ಅವರು ಈ ಕ್ರಮ ಕೈಗೊಂಡಿದ್ದಾರೆ. ನೇಪಾಳದ 39ನೇ ಪ್ರಧಾನಿಯಾಗಿ ಆಯ್ಕೆಯಾಗಿದ್ದ 62 ವರ್ಷದ ಪ್ರಚಂಡ ಅವರು ಕಳೆದ 9 ತಿಂಗಳಿನಿಂದ ನೇಪಾಳದ ಪ್ರಧಾನಿಯಾಗಿ ಕಾರ್ಯನಿರ್ವಹಿಸಿದ್ದಾರೆ. 2016ರ ಆಗಸ್ಟ್ 3ರಂದು ನೇಪಾಳಿ ಕಾಂಗ್ರೆಸ್ ಅಧ್ಯಕ್ಷ ಶೆರ್ ಬಹಾದುರ್ ದೇವುಬಾ ಅವರ ಜತೆ ಮೈತ್ರಿ ಮಾಡಿಕೊಳ್ಳುವ ಮೂಲಕ ಕಮ್ಯೂನಿಸ್ಟ್ ಪಾರ್ಟಿ ಆಫ್ ನೇಪಾಳ (ಸಿಪಿಎನ್) ಮುಖ್ಯಸ್ಥರಾಗಿದ್ದ ಅವರು

ಪ್ರಧಾನಿಯಾಗಿದ್ದರು. ಆ ಸಂದರ್ಭ, 9 ತಿಂಗಳ ನಂತರ ಅಧಿಕಾರ ಹಸ್ತಾಂತರಿಸುವುದಾಗಿ ಅವರು ಒಪ್ಪಂದ ಮಾಡಿಕೊಂಡಿದ್ದರು.

- **ಜಿನೀವಾ ಓಪನ್ ಟೆನಿಸ್ ಟೂರ್ನಿಯಲ್ಲಿ ವಾವ್ರಿಂಕ ಮುಡಿಗೆ ಪ್ರಶಸ್ತಿ:** ಸ್ವಿಟ್ಜರ್‌ಲೆಂಡ್‌ನ ಆಟಗಾರ ಸ್ಟಾನಿಸ್ಲಾಸ್ ವಾವ್ರಿಂಕ ಅವರು ಜಿನೀವಾ ಓಪನ್ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ.ಪುರುಷ ಸಿಂಗಲ್ಸ್ ವಿಭಾಗದ ಫೈನಲ್ ಹಣಾಹಣಿ ಯಲ್ಲಿ ವಾವ್ರಿಂಕ 4–6, 6–3, 6–3ರಲ್ಲಿ ಜರ್ಮನಿಯ ಮಿಷಾ ಜ್ವೆರೆವ್ ಅವರನ್ನು ಪರಾಭವಗೊಳಿಸಿದರು.

www.karunaduexams.com